ಭಾರತ ಕಮ್ಯೂನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಸಂಪುಟ 17
ಸಂಚಿಕೆ 06
ರೂ. 2.00

ಐಕ್ಯರಂಗ

5 ಫೆಬ್ರವರಿ 1995



ಹುಬ್ಬಳ್ಳಿ ಈದ್ಗಾ ಮೈದಾನದಲ್ಲಿ ಧ್ವಜಾರೋಹಣ-ಬಿಜೆಪಿಗೆ ಮುಖಭಂಗ

ಎನ್.ಕೆ. ಉಪಾಧ್ಯಾಯ

ಅಂಜುಮಾನ್-ಎ-ಇಸ್ಲಾಂ ಸಂಸ್ಥೆ ಜನವರಿ 26 ರಂದು ಗಣರಾಜ್ಯೋತ್ಸವದ ದಿವಸ ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ರಾಷ್ಟ್ರ ಧ್ವಜ ಹಾರಿಸುವ ಮೂಲಕ ಬಿಜೆಪಿ ಮತ್ತು ಕೋಮುಶಕ್ತಿಗಳಿಗೆ ಮುಖಭಂಗ ಮಾಡಿದ್ದಾರೆ. ಮೂರು ವರ್ಷಗಳ ಹಿಂದೆ ಅಯೋಧ್ಯೆಯಲ್ಲಿ ಬಾಬ್ರಿ ಮಸೀದಿ ಕೆಡವಿದ ನಂತರ ಧರ್ಮದ ಹೆಸರಿನಲ್ಲಿ ಕಿಡಿಕಾರುತ್ತಾ ದೇಶಾದ್ಯಂತ ಕೋಮು ಗಲಭೆಗಳಿಗೆ ಅವಕಾಶ ಮಾಡಿಕೊಟ್ಟು ದಕ್ಷಿಣ ಭಾರತದಲ್ಲಿಯೂ ಚುನಾವಣೆಯಲ್ಲಿ ಹಿಂದು ಮತಪಡೆದು ಅಧಿಕಾರ ಗ್ರಹಣ ಮಾಡಬಹುದೆಂದು ತಿಳಿದು ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ಧ್ವಜಾರೋಹಣ ನಡೆಸಿ ಕರ್ನಾಟಕದಲ್ಲಿಯೂ ಕೋಮು ದುಳ್ಳುರಿ ಹಬ್ಬಿಸುವ ಹೊಂಚು ನಡೆಸಿದ್ದರು. ಭಾರತೀಯ ಜನತಾ ಪಾರ್ಟಿಯವರು. ಹೋದ ವರ್ಷ ಆಗಸ್ಟ್ 15ರಂದು ಹುಬ್ಬಳ್ಳಿಯಲ್ಲಿ ಅಯೋಧ್ಯೆಯ ಘಟನೆಯ ಪುನರಾವರ್ತನೆಗೊಳಿಸುವ ದುರುದ್ದೇಶದಿಂದ ಬಿಜೆಪಿಯ ಅಖಿಲ ಬಾರತ ಮುಖಂಡರು ಹುಬ್ಬಳ್ಳಿಯಲ್ಲಿ ಜಮಾಯಿಸಿ ಜನರ ಪ್ರತಿಭಟನೆಯ ಮಧ್ಯೆ ಗೊಂದಲ ಉಂಟುಮಾಡಿ ಗೋಲಿಬಾರಿನಿಂದ 6 ಜನ ಅಮಾಯಕರು ಅಸು ನೀಗುವಂತೆ ಮಾಡಿದ್ದರು. ಆಗ ಅಧಿಕಾರದಲ್ಲಿದ್ದ ಕಾಂಗ್ರೆ ಸರಕಾರ ಈ ಸಮಸ್ಯೆಯನ್ನು ರಾಜಕೀಯವಾಗಿ ಬಗೆಹರಿಸುವ ಪ್ರಯತ್ನವನ್ನು ನಡೆಸಲಿಲ್ಲ

ಈ ವರ್ಷ ಜನವರಿ 26ರಂದು ಈದ್ಗಾ ಮೈದಾನದಲ್ಲಿ ಧ್ವಜಾರೋಹಣ ಮಾಡುವ ಸಿದ್ಧತೆಯನ್ನು ಬಿಜೆಪಿ ಮುಂದುವರಿಸಿತು. ಮೊನ್ನೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಜನತಾದಳ ಅಧಿಕಾರಕ್ಕೆ ಬಂದು ರಾಜ್ಯದ ರಾಜಕೀಯದಲ್ಲಿ ಬದಲಾವಣೆ ಉಂಟಾಯಿತು. ಈದ್ಗಾ ಮೈದಾನದಲ್ಲಿ ಯಥಾಸ್ಥಿತಿಯನ್ನು ಕಾಪಾಡಿಕೊಂಡು ಹೋಗಬೇಕೆಂದು ಸುಪ್ರೀಂ ಕೋರ್ಟ್ ಆದೇಶ ನೀಡಿತು. ಬಿಜೆಪಿ ಅದನ್ನು ತಿರಸ್ಕರಿಸಿತು.

ಈ ಮಧ್ಯೆ ಶಾಂತಿಪ್ರಿಯ ಜನತೆ ಬಿಜೆಪಿಯ ಹಠಮಾರಿತನವನ್ನು ಖಂಡಿಸಿತು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಾರ್ಟಿ ಸಕ್ರಿಯವಾಗಿ ಮಧ್ಯೆ ಪ್ರವೇಶಿಸಿತು.

ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿ ಜನವರಿ 20ರಂದು ಹುಬ್ಬಳ್ಳಿಯಲ್ಲಿ ಬೃಹತ್ತ ಮೆರವಣಿಗೆ ಮತ್ತು ಸಾರ್ವಜನಿಕ ಸಭೆ ನಡೆಸಿ ಬಿಜೆಪಿಯ ಕೋಮುವಾದವನ್ನು ಖಂಡಿಸಿದ್ದು ಮಾತ್ರವಲ್ಲ ಈದ್ಗಾ ಮೈದಾನದಲ್ಲಿ ಬಿಜೆಪಿಯವರಿಂದ ಧ್ವಜ ಹಾರಿಸಲು ಬಿಡುವುದಿಲ್ಲವೆಂದು ಶಾಂತಿ ಸೌಹಾರ್ದತೆ ಕಾಪಾಡಲು ಜೀವವನ್ನೇ ಪಣ ತೊಡಲು ಸಿದ್ಧವೆಂಬ ನಿರ್ಣಯ ಕೈಗೊಂಡಿತು. ಈ ಕಾರ್ಯಕ್ರಮ ಜನರಲ್ಲಿಯೂ, ಜನತಾ ಪಕ್ಷದಲ್ಲಿಯೂ, ಇತರ ಶಾಂತಿಪ್ರಿಯ ಸಂಘ ಸಂಸ್ಥೆಗಳಲ್ಲಿಯೂ ಧೈರ್ಯ ತುಂಬಿಸಿತ್ತು. ಬಿಜೆಪಿ ವಿರುದ್ಧ ಪ್ರಬಲವಾದ ಪ್ರತಿಭಟನೆ ಎದ್ದು ಬಂತು. ದೇವೇಗೌಡರ ಜನತಾದಳ ಸರಕಾರ ಸುಪ್ರೀಂ ಕೋರ್ಟ್‌ನ ಆದೇಶದಂತೆ ಈದ್ಗಾ ಮೈದಾನದಲ್ಲಿ ಧ್ವಜ ಹಾರಿಸಲು ಬಿಜೆಪಿಗೆ ಅವಕಾಶ ಮಾಡಿಕೊಡುವುದಿಲ್ಲ ಎಂದು ಸ್ಪಷ್ಟವಾಗಿ ಹೇಳಿತು. ಈ ಸಲ ಹುಬ್ಬಳ್ಳಿಯಲ್ಲಿ ಶಾಂತಿ ಕದಡಲು ಬಿಜೆಪಿಗೆ ಅವಕಾಶ ಕೊಡುವುದಿಲ್ಲವೆಂಬ ದೃಢ ನಿರ್ಧಾರದಿಂದಲೇ ಜನವರಿ ೨೧ರಂದು ಮುಖ್ಯಮಂತ್ರಿ ದೇವೇಗೌಡರು ಸರ್ವಪಕ್ಷಗಳ ಸಭೆ ಕರೆರು. ಸಿಪಿಐ(ಎಂ) ಪರವಾಗಿ ಹಾಜರಿದ್ದ ಪಿ.ರಾಮಚಂದ್ರರಾವ್ ಮತ್ತು ಎನ್.ಕೆ.ಉಪಾಧ್ಯಾಯರು 1992ರಲ್ಲಿ ಹುಬ್ಬಳ್ಳಿಯ ವಕೀಲರೊಬ್ಬರು ಧಾರವಾಡ ಮುನ್ಸಿಫ್ ಕೋರ್ಟಿನಲ್ಲಿ ದಾವೆ ಹೂಡಿ ಈದ್ಗಾ ಮೈದಾನದಲ್ಲಿ ಧ್ವಜಾರೋಹಣ ಮಾಡಲು ಅವಕಾಶ ಕೇಳಿದಾಗ ಕೋರ್ಟು ಅದನ್ನು ನಿರಾಕರಿಸಿದ್ದನ್ನು ಹಾಗೆಯೇ ಬಿಜೆಪಿಯ ಕಾರ್ಯಕರ್ತರಾದ ಜೋಷಿ ಮೊದಲಾದ 14 ಜನ 1994ರಲ್ಲಿ ಇದೇ ರೀತಿಯ ಅರ್ಜಿಯನ್ನು ಹೈ ಕೋರ್ಟಿನಲ್ಲಿ ಸಲ್ಲಿಸಿದ್ದು ಅದು ಕೂಡ ನಿರಾಕರಿಸಲ್ಪಟ್ಟಿರುವುದನ್ನು ಸಭೆಯ ಗಮನ ಕ್ಕೆ ತಂದು ಸುಪ್ರಿಂಕೋರ್ಟಿನ ಆಜ್ಞೆಯನ್ನು ಮುರಿದು ಅವಸರ ದಲ್ಲಿ ನಿರ್ಣಯ ಕೈಕೊಳ್ಳಬಾರದೆಂದು ಸರಕಾರವನ್ನು ಎಚ್ಚರಿಸಿದರು. ಬಹಳಷ್ಟು ಬಿಜೆಪಿಯ ನಂತರ ಅಂಜುಮಾನ್ ಸಂಸ್ಥೆಯವರು ಸ್ವಯಂ ಸ್ಫೂರ್ತಿಯಿಂದ ಧ್ವಜಾರೋಹಣಕ್ಕೆ ಮುಂದಾದರೆ ಅವರಿಗೆ ಧ್ವಜ ಹಾರಿಸಲು ಅವಕಾಶ ಮಾಡಿಕೊಡಬೇಕೆಂದು, ಹೇಗೆ ಎಷ್ಟು ಜನರ ಮುಂದೆ ಧ್ವಜಾರೋಹಣ ಮಾಡಬೇಕೆಂದುಅವರೇ ನಿರ್ಣಯಿಸಬೇಕೆಂಬ ಅಭಿಪ್ರಾಯಕ್ಕೆ ಎಲ್ಲರೂ ಒಪ್ಪಿಕೊಂಡರು. ತಮ್ಮ ಶಾಸಕರು, ಎಂ.ಪಿ.ಗಳೇ ಹಾರಿಸಬೇಕೆಂಬ ಬಿಜೆಪಿಯವರ ಒತ್ತಾಯವನ್ನು ತಳ್ಳಿ ಹಾಕಲಾಯಿತು. ಈ ರೀತಿಯ ಸರ್ವಾನುಮತದ ನಿರ್ಣಯಯನ್ನು ಧಿಕ್ಕರಿಸಿ ಅದೇ ಬಿಜೆಪಿ ಮುಖಂಡರು ಹುಬ್ಬಳ್ಳಿ ಚಲೋ ಕಾರ್ಯಕ್ರಮ ಪ್ರಾರಂಭಿಸಿ ತಮ್ಮ ಕೀಳ್ತತನವನ್ನು ಪ್ರದರ್ಶಿಸಿದರು. ಮಾತ್ರವಲ್ಲ ಜನಸತ್ತರೂ, ರಕ್ತ ಹರಿದರೂ, ಅಪಾರ ಹಾನಿಯಾದರೂ ಬಹುಸಂಖ್ಯಾತರು ವಿರೋಧಿಸಿದರೂ, ಕೋರ್ಟು ಆಜ್ಞೆಯಿದ್ದರೂ, ತಾವು ಧ್ವಜಾರೋಹಣ ಮಾಡಿ ಶಾಂತಿಯನ್ನು ಕದಡಿ ಕೋಮು ಸೌಹಾರ್ದತೆಗೆ ಬೆಂಕಿ ಹಚ್ಚಿ ತೀರುತ್ತೇವೆಂಬ ಧೃಢ ನಿರ್ಧಾರ ಪ್ರಕಟಿಸಿದರು. ಆದರೆ ಅಂಜುಮಾನ್ ಮುಖಂಡರು ಮತ್ತು ಶಾಂತಿಪ್ರಿಯ ಜನತೆ ಬಿಜೆಪಿಯ ಆಟ ನಡೆಯದಂತೆ ಮಾಡಿದರು. ಬಿಜೆಪಿಯಂಥ ಕೋಮು ಶಕ್ತಿಗಳನ್ನು ಬಯಲಿಗೆಳೆದು ಅವರನ್ನು ಸಮಾಜದಿಂದ ಪ್ರತ್ಯೇಕಿಸಿ ಹುಬ್ಬಳ್ಳಿ-ದಾರವಾಡದಲ್ಲಿ ಶಾಂತಿ ಕಾಪಾಡುವ ಮಹೋದ್ದೇಶ ದಿಂದ ಅಂಜುಮಾನ್ ಸಂಸ್ಥೆಯ ನಿರ್ಣಯವನ್ನೂ ಶಾಂತಿ ಪ್ರಿಯ ಜನತೆಯನ್ನೂ ಸಿಪಿಐ(ಎಂ) ರಾಜ್ಯ ಸಮಿತಿ ಪ್ರಶಂಸಿಸುತ್ತದೆ.

ಧ್ವಜಾರೋಹಣ ಮಾಡಿದ ಸಂದರ್ಭದಲ್ಲಿ ಸ್ವಾತಂತ್ರ್ಯ ಹೋರಾಟಗಾರರನ್ನು, ಡಾ.ಅಂಬೇಡ್ಕರ್, ಭಗತ್‌ಸಿಂಗ್ ಮೊದಲಾದವರನ್ನೂ ನೆನಸುತ್ತಾ ಭಾರತ ದೇಶ ಅನೇಕ ಭಾಷೆ, ಜಾತಿ, ಸಂಸ್ಕೃತಿಗಳನ್ನು ಒಳಗೊಂಡ ದೇಶವಾಗಿರುವ ಈ ಎಲ್ಲಾ ಜನರೂ ಒಂದೇ ಹೂತೋಟದ ಬಗೆಬಗೆಯ ಹೂವುಗಳಂತೆ ಸುವಾಸನೆ ಬೀರುತ್ತಿದ್ದಾಗ ಎಂದು ಹೇಳಿ ಮತೀಯ ಶಕ್ತಿಗಳ ಮುಖಕ್ಕೆ ಮಸಿ ಸವರಿದ್ದಾರೆ.

ಅಂಜುಮಾನ್ ಸಂಸ್ಥೆಯ ಅಧ್ಯಕ್ಷರು ಅತ್ಯಂತ ಶಾಂತಿಯುತವಾಗಿ ಈದ್ಗಾ ಮೈದಾನದಲ್ಲಿ ಧ್ವಜಾರೋಹಣ ನಡೆದರೂ ಹಲವು ಕಡೆ ಗಲಾಟೆಯೆಬ್ಬಿಸಿ ಕಲ್ಲು ತೂರಿ ಅಶಾಂತಿ ಉಂಟು ಮಾಡಲು ಸರ್ವ ಪ್ರಯತ್ನ ಮಾಡಿದರು. ಅದು ಫಲಿಸಲಿಲ್ಲ. ಈದ್ಗಾ ಮೈದಾನದಲ್ಲಿ ಧ್ವಜಾಹಾರಿಸುವ ಹಠಮಾರಿತನದಿಂದ ಮುಖಭಂಗ ಮಾಡಿಕೊಂಡ ಬಿಜೆಪಿ ಸುಮ್ಮನೆ ಕೊಡುವುದಿಲ್ಲ ಬೇರೆ ಬೇರೆ ನೆವ ಹುಡುಕಿ ಕೋಮು ದ್ವೇಷ ಬೆರೆಸಿ ಶಾಂತಿ ಕದಡಿ ಲಾಭಗಳಿಸುವ ಹೊಂಚು ಮುಂದುವರಿಸುತ್ತದೆ. ಶಾಂತಿ ಪ್ರಿಯ ಜನತೆ ಎಚ್ಚರದಿಂದಿರುವುದು ಅಗತ್ಯ

"ಹುಬ್ಬಳ್ಳಿಯಲ್ಲಿ ಸಮಗೆ ಶಾಂತಿ ಬೇಕು; ಧ್ವಜಾರೋಹಣದ ಹೆಸರಿನಲ್ಲಿ ಗಲಾಟೆ ಮಾಡುವ ಶಕ್ತಿಗಳಿಗೆ ಧಿಕ್ಕಾರ; ಹುಬ್ಬಳ್ಳಿಯನ್ನು ಇನ್ನೊಂದು ಅಯೋಧ್ಯೆ ಮಾಡಲು ಬಿಡುವುದಿಲ್ಲ" ಎಂಬಿತ್ಯಾದಿ ಘೋಷಣೆಗಳು ಜನವರಿ 20ರಂದು ಹುಬ್ಬಳ್ಳಿಯ ಬೀದಿಗಳಲ್ಲಿ ಪ್ರತಿಧ್ವನಿಸಿತು. ಸಿಪಿಐ(ಎಂ) ಸಂಘಟಿಸಿದ್ದ ಈ ಮೆರವಣಿಗೆಯ ಒಂದು ದೃಶ್ಯ. ವರದಿ-ಪುಟ 3 ನೋಡಿ



XV ನೇ ಸಿಪಿಐ(ಎಂ) ಮಹಾಧಿವೇಶನ
ಚಂಡೀಗಢ, ಏಪ್ರಿಲ್ 3-8, 1995

ಸಿಪಿಐ(ಎಂ) 15ನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯ ಬಿಡುಗಡೆ

ಸಿಪಿಐ(ಎಂ) ಕೇಂದ್ರ ಸಮಿತಿ ತನ್ನ ಇತ್ತೀಚಿನ ಕಲ್ಕತ್ತಾ ಸಭೆಯಲ್ಲಿ ಚರ್ಚಿಸಿ ಅಂಗೀಕರಿಸಿದ ಪಕ್ಷದ 15ನೇ ಮಹಾಧಿವೇಶನದ ಕರಡು ರಾಜಕೀಯ ನಿರ್ಣಯವನ್ನು ಬಿಡುಗಡೆ ಮಾಡಲಾಗಿದೆ. ಸಿಪಿಐ(ಎಂ) ಸಂವಿಧಾನದ ಪ್ರಕಾರ ಈ ಕರಡನ್ನು ಮಹಾಧಿವೇಶನದ ಎರಡು ತಿಂಗಳ ಮೊದಲು ಪಕ್ಷದ ಸದಸ್ಯರು ತಮ್ಮ ಘಟಕಗಳ ಮಟ್ಟದಲ್ಲಿ ಚರ್ಚೆಗೆ ಬಿಡುಗಡೆ ಮಾಡಬೇಕು. ಪಕ್ಷದ ಎಲ್ಲಾ ಸದಸ್ಯರಿಗೆ ತಮ್ಮ ತಿದ್ದುಪಡಿಗಳನ್ನು ನೇರವಾಗಿ ಕೇಂದ್ರ ಸಮಿತಿಗೆ ಕಳುಹಿಸುವ ಹಕ್ಕು ಇದೆ. ಈ ಕರಡು ರಾಜಕೀಯ ನಿರ್ಣಯ ಕನ್ನಡ ಅನುವಾದ ಮುದ್ರಣದಲ್ಲಿದ್ದು ಈ ಪತ್ರಿಕೆ ನಿಮ್ಮ ಕೈ ಸೇರುವ ವೇಳೆಗೆ ಪ್ರಕಟನೆಗೊಳ್ಳುವ ನಿರೀಕ್ಷೆಯಿದೆ.

ತಿದ್ದುಪಡಿ ಕಳಿಸುವ ವಿಧಾನ

1. ಎಲ್ಲಾ ತಿದ್ದುಪಡಿಗಳಲ್ಲಿ ಪರಿಚ್ಛೇದ ಸಂಖ್ಯೆಯನ್ನು ತಪ್ಪದೇ ನಮೂದಿಸಬೇಕು.
2. ಪ್ರತಿಯೊಂದು ತಿದ್ದುಪಡಿಯನ್ನು ಪ್ರತ್ಯೇಕ ಹಾಳೆಯಲ್ಲಿ ಬರೆದು ಕಳಿಸಬೇಕು.
3. ಪ್ರತಿಯೊಂದು ತಿದ್ದುಪಡಿಯಲ್ಲಿ ತಿದ್ದುಪಡಿ ಕಳಿಸುತ್ತಿರುವ ಸಂಗಾತಿಯ-ಘಟಕದ ಹೆಸರು, ವೈಯಕ್ತಿಕವಾಗಿ ಕಳಿಸುತ್ತಿದ್ದರೆ ಘಟಕದ ಹೆಸರು ನಮೂದಿಸಿರಬೇಕು.
4. ಸದಸ್ಯರು- ಶಾಖೆ ಕಳಿಸಿದ ತಿದ್ದುಪಡಿಯ ಒಂದು ಪ್ರತಿಯನ್ನು ರಾಜ್ಯಸಮಿತಿಗೆ ಕಳುಹಿಸುವುದು. ತಿದ್ದುಪಡಿ ಇಂಗ್ಲಿಷ್‌ನಲ್ಲಿರಬೇಕಾಗುತ್ತದೆ. ಕನ್ನಡದಲ್ಲಿದ್ದರೆ ಅದನ್ನು ರಾಜ್ಯ ಸಮಿತಿಯ ಮೂಲಕ ಕಳುಹಿಸಬೇಕು.
5. ಎಲ್ಲಾ ತಿದ್ದುಪಡಿಗಳನ್ನು 15 ಮಾರ್ಚ್ 1995 ರೊಳಗೆ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು.

Communist Party of India (Marxist)
Central Committee
A.K.Gopalan Bhavan
27-29, Bhai Vir Singh Marg
NEW DELHI -110001

6. ತಿದ್ದುಪಡಿ ಕಳಿಸುವ ಲಕೋಟೆಯ ಮೇಲೆ Amend ments to Draft Political Resolution ಎಂದು ನಮೂದಿಸಬಹುದು.

ಸಂಸ್ಕೃತಿ

ಇತಿಹಾಸ

ಸುಂದರವಾದ ಕಲಾಕೃತಿ ಛಿದ್ರವಾದರೆ........

ಮಾರ್ಕ್ಸ್‌ವಾದ ಯಾರು ಮನುಷ್ಯ ಅಂತ ಅನಿಸಿಕೊಳ್ತಾನೋ ಅವನ ಕನಸು ಮಾತ್ರವಲ್ಲ ಆ ಕನಸಿಗೆ ಒಂದು ವಾಸ್ತವ ರೂಪವನ್ನು ಕೊಡಬಲ್ಲಂತಹ ಶಕ್ತಿ ಕೂಡ..... ಈ ಮಾರ್ಕ್ಸಿಸ್ಟ್ ಕನಸು ಮತ್ತೆ ಚಿಗುರುತ್ತೆ ಎನ್ನತ್ತಾರೆ ಖ್ಯಾತ ಕನ್ನಡ ಸಾಹಿತಿ ಸು.ರಂ.ಎಕ್ಕುಂಡಿ ಶ್ರೀಯುತ ನಟರಾಜ್ ಹುಳಿಯಾರ್ ನಡೆಸಿದ ಸಂದರ್ಶನದಿಂದ ಎರಡು ಪ್ರಶ್ನೆಗಳು.

★ ....ವೈಯಕ್ತಿಕ ಹಿನ್ನೆಲೆಯಿಂದಾಗಿಯೇ ಮಾರ್ಕ್ಸ್‌ವಾದ ನಿಮ್ಮನ್ನು ಆಕರ್ಷಿಸಿತೆ?

ನಿಜ ಹೇಳೋದಾದ್ರೆ ನನ್ನ ಕಾವ್ಯದ ಮಾರ್ಕ್ಸ್‌ವಾದ ನನ್ನ ಜೀವನದ ಹಿನ್ನಲೆಯಿಂದ ಸ್ಫೂರ್ತಿಗೊಂಡದ್ದು ಮಾತ್ರವಲ್ಲ ಅದು ಒಂದು ಐತಿಹಾಸಿಕ, ವೈಜ್ಞಾನಿಕ ಸತ್ಯ ಎನ್ನುವ ಕಾರಣಕ್ಕಾಗಿ ಕೂಡ ನನಗೆ ಮುಖ್ಯವಾಗಿ ಕಂಡಿದೆ. ಇವತ್ತು ನಮಗೆ ಮಾರ್ಕ್ಸ್‌ವಾದ ಕುಸಿದಂತೆ ಅನ್ನಿಸಿದ್ರೂ ಕೂಡ ಕುಸಿದದ್ದು ಮಾರ್ಕ್ಸ್‌ವಾದವಲ್ಲ; ಅದನ್ನು ಪ್ರಾಕ್ಟೀಸ್ ಮಾಡಿದವರ ಪಿತೂರಿ, ಮೋಸ, ವಂಚನೆ ಮತ್ತು ತತ್ವಭ್ರಷ್ಟತೆಗಳಿಂದ ಅದು ಕುಸಿದದ್ದು. ಆದರೆ ಒಂದು ಮಾತ್ರ ನಿಜ. ಮಾರ್ಕ್ಸ್‌ವಾದ ಯಾರು ಮನುಷ್ಯ ಅಂತ ಅನಿಸಿಕೊಳ್ತಾನೋ ಅವನ ಕನಸು ಮಾತ್ರವಲ್ಲ, ಆ ಕನಸಿಗೆ ಒಂದು ವಾಸ್ತವ ರೂಪವನ್ನು ಕೊಡಬಲ್ಲಂತಹ ಶಕ್ತಿ ಕೂಡ. ಬಹಳ ಕಾಲದವರಗೆ ಈ ಶೋಷಣೆ ಮತ್ತು ವಂಚನೆಗಳು ಬದುಕುವುದು ಸಾಧ್ಯವಿಲ್ಲ, ಒಂದಿಲ್ಲೊಂದು ದಿವಸ ಎಲ್ಲ ಮನುಷ್ಯರೂ ಮುಕ್ತ ಸಮಾಜದಲ್ಲಿ ತಮ್ಮ ಕ್ರಿಯಾಶೀಲ ಜೀವನವನ್ನು ನಡೆಸಲಿಕ್ಕೆ ಸಾಧ್ಯವಾಗುವಂಥ, ಈ ಪ್ರಪಂಚದ ಸೌಂದರ್ಯ, ಆನಂದವನ್ನು ಹಂಚಿಕೊಳ್ಳುವಂಥ ದಿನ ಬಂದೇ ಬರುತ್ತದೆ. ಅದಕ್ಕಾಗಿ ಕಲೆಯ ಪ್ರಪಂಚ, ಸಾಹಿತ್ಯ ಪ್ರಪಂಚ, ಕಾವ್ಯದ ಪ್ರಪಂಚ ನಿರಂತರವಾಗಿ ಕೆಲಸ ಮಾಡುತ್ತಲೇ ಇರುತ್ತವೆ....

★ ಸೋವಿಯತ್ ಒಕ್ಕೂಟ ಕುಸಿದಾಗ ಸಹಜವಾಗಿಯೇ ನಿಮಗೆ ದಿಗ್ಭ್ರಮೆಯಾಗಿರಬಹುದಲ್ಲವೆ?

ನನಗೆ ನಿಜವಾಗಿ ಮೊದಲನೇ ಸಲ ಆ ಸುದ್ದಿ ಕೇಳಿದಾಗ ಒಂದು ಥರದ ಆಘಾತವಾಯ್ತು. ಒಂದು ಸುಂದರವಾದ ಕಲಾಕೃತಿ ಒಡೆದು ಹೋದರೆ ಛಿದ್ರಛಿದ್ರವಾದರೆ ಹರಿದು ಹಾಕಿದರೆ ಏನನ್ನಿಸುತ್ತೋ ಆ ಥರ ಅನ್ನಿಸ್ತು. ಆದರೆ ನಂತರ ನನಗನ್ನಿಸಿದ್ದು ಇದು ನಿಜವಾಗಿಯೂ ಮಾರ್ಕ್ಸ್‌ವಾದಕ್ಕಾಗಲೀ, ಸಮಾಜವಾದಕ್ಕಾಗಲೀ ಉಂಟಾದ ಸೋಲಲ್ಲ, ಇದರಲ್ಲಿ ಮನುಷ್ಯನ-ಅದರಲ್ಲೂ ಕ್ಷುದ್ರ ಆಸೆಗಳ ಮನುಷ್ಯನ ಪಿತೂರಿಯ ಪಾಲಿದೆ ಅಂತ. ಇದು, ಯಾವ ಭಯವೂ ಇಲ್ಲದ ಮನುಷ್ಯನ ಕೃತ್ಯ. ಯಾವನು ದೇವರಿಗೆ ಭಯಪಡುವುದಿಲ್ಲವೋ ಅವನು ಮನುಷ್ಯನಿಗೂ ಭಯಪಡುವುದಿಲ್ಲ, ಪಾಪದ ಕಲ್ಪನೆಯೇ ಕುಸಿದು ಹೋದವರಿಂದಾಗಿ ಸಮಾಜವಾದೀ ಒಕ್ಕೂಟವೂ ಕುಸಿಯಿತು. ಆದರೆ ನನಗನ್ನಿಸುತ್ತೆ ಈ ಮಾರ್ಕ್ಸಿಸ್ಟ್ ಕನಸು ಮತ್ತೆ ಚಿಗುರುತ್ತೆ, ಈಚೆಗೆ ಪೂರ್ವ ಯುರೋಪಿನಲ್ಲಿ ನಡೆದ ಚುನಾವಣೆಗಳಲ್ಲಿ ಎಡಪಂಥೀಯರು ಮತ್ತೆ consolidate ಮಾಡಿಕೊಂಡು ಮತ್ತೆ ಅಧಿಕಾರಕ್ಕೆ ಬರುವ ಲಕ್ಷಣಗಳು ಕಾಣ್ತಾ ಇವೆ.

★ ಮಾನವ ವರ್ತನೆಯನ್ನಾಗಲೀ, ಒಂದು ಸಂಕೀರ್ಣ ಅನುಭವನ್ನಾಗಲೀ ನಿಮ್ಮ ಕಾವ್ಯ ಅರಿಯಲೆತ್ನಿಸುವ ಹಂತಗಳಲ್ಲಿ ಮಾರ್ಕ್ಸ್‌ವಾದದ ನಿರ್ದೇಶನಗಳು ಅಡ್ಡಿಯಾಗುತ್ತಿವೆ ಎಂದು ನಿಮಗನ್ನಿಸಿದೆಯೆ?

ಇಲ್ಲ ಈಗ ನೋಡಿ, ಹ್ಯಾಗೆ ಐಹಿಕ ಸಂಪತ್ತನ್ನ ಸಮಾನವಾಗಿ ಎಲ್ಲರಿಗೂ ಹಂಚಬೇಕೋ ಹಾಗೇ ಒಂದು ಸಾಂಸ್ಕೃತಿಕ ಸಂಪತ್ತೆಂಬೋದು ಇದೆ. ಪ್ರತಿಯೊಬ್ಬ ವ್ಯಕ್ತಿಗೂ ಇದೆ, ಪ್ರತಿಯೊಂದು ನಾಡಿಗೂ ಇದೆ, ಪ್ರತಿಯೊಂದು ಜನಾಂಗಕ್ಕೂ ಇದೆ, ಪ್ರತಿಯೊಂದು ದೇಶಕ್ಕೂ ಇದೆ. ಈ ಸಂಪತ್ತನ್ನು ನೀವು ಸಾಂಸ್ಕೃತಿಕ ಸಂಪತ್ತು ಎಂದು ಪರಿಗಣಿಸುವುದಾದರೆ ಇಡೀ ಮಾನವ ಜನಾಂಗದ ಪ್ರತಿಯೊಬ್ಬರೂ ಅದಕ್ಕೆ ವಾರಸುದಾರರಾಗುತ್ತಾರೆ........

ಕೃಪೆ: ಲಂಕೇಶ್ ಪತ್ರಿಕೆ.

ಮತಾಂಧ

ಜನ,
"ಅನ್ನ, ಕೆಲಸ, ಬಟ್ಟೆ, ಬರೆ"
ಅಂದರೆ
ಅವನು ಬಂದು ಈಗ
ಮಂದಿರ-ಮಸೀದಿ
ಹುಬ್ಬಳ್ಳಿ-ಈದ್ಗಾ
ಇನ್ನೂ ಮುಂತಾದ ಮಾತಂದ
ಎಚ್ಚರಿಕೆ ಇವನೇನೆ
ದೇಶ ಒಡೆಯೋ ಮತಾಂಧ

ಆರ್. ರಾಮಕೃಷ್ಣ
ಬೆಂಗಳೂರು



ಶೋಷಣೆಯಿಲ್ಲದ, ಸಮಾನತೆಯ ಸಮಾಜ ನಿರ್ಮಿಸುವ ಗುರಿಯಿಂದ ಪ್ರೇರಿತರಾಗಿ, ವೈಜ್ಞಾನಿಕ ಸಿದ್ಧಾಂತದ ಆಧಾರದಲ್ಲಿ ಆರಂಭವಾದ ಭಾರತದ ಕಮ್ಯುನಿಸ್ಟ್ ಆಂದೋಲನದ ಇತಿಹಾಸ, ಅವಿರತ ಹೋರಾಟದ ಇತಿಹಾಸ; ಆಧುನಿಕ ಭಾರತದ ಬೆಳವಣಿಗೆಯೊಂದಿಗೆ ಹಾಸುಹೊಕ್ಕಾಗಿರುವ ಇತಿಹಾಸ; ಅಪೂರ್ವ ತ್ಯಾಗ-ಬಲಿದಾನಗಳ ಮೂಲಕ ಬೆಳೆದು ಬಂದ ಇತಿಹಾಸ; ಆಂತರಿಕ ಚರ್ಚೆ, ಹೋರಾಟಗಳ ಮೂಲಕ ಮುನ್ನಡೆದ ಇತಿಹಾಸ. ಈ ಇತಿಹಾಸದ ರೂಪುರೇಷೆ ನೀಡುವ ಲೇಖನಮಾಲೆ.

ಆಧಾರ
ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್‌ರವರ
An Outline History of the Communist Movement in India

ಸಂಗ್ರಹ-ಅನುವಾದ: ವಿಶ್ವ

ಹದಿನಾಲ್ಕನೇ ಮಹಾಧಿವೇಶನ

ಅಧ್ಯಾಯ 20

ಇಪ್ಪತ್ತನೆ ಶತಮಾನದ ಕೊನೆಯ ದಶಕದ ಆದಿಭಾಗ ಸಮಾಜವಾದ ರಾಷ್ಟ್ರೀಯ ವಿಮೋಚನೆ ಮತ್ತು ಕಾರ್ಮಿಕ ವರ್ಗ ಆಂದೋಲನದ ಶಕ್ತಿಗಳಿಗೆ ಬಹಳ ಕಠಿಣವಾದ ಅವಧಿಯೊಂದು ಇತಿಹಾಸದಲ್ಲಿ ದಾಖಲಾಗುತ್ತಿದೆ. ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯುರೋಪ್‌ನಲ್ಲಿ ಸಮಾಜವಾದಕ್ಕಾದ ಹಿನ್ನಡೆ ಸೋವಿಯತ್ ಒಕ್ಕೂಟದ ಛಿದ್ರತೆ ಮತ್ತು ಸಾಮ್ರಾಜ್ಯಶಾಹಿಯ ಹೊಸ ಆಕ್ರಮಣ ಇವೆಲ್ಲ ಶಾಂತಿ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳಿಗೆ ಗಂಭೀರ ಅಪಾಯವನ್ನು ಮತ್ತು ಮೂರನೇ ಜಗತ್ತಿನ ದೇಶಗಳ (ಅಭಿವೃದ್ಧಿ ಶೀಲ ದೇಶಗಳು) ಭದ್ರತೆ ಹಾಗೂ ಸ್ವಾತಂತ್ರ್ಯಕ್ಕೆ ಬೆದರಿಕೆಯನ್ನೊಡ್ಡಿದ್ದವು. ಅಮೆರಿಕ ಸಾಮ್ರಾಜ್ಯಶಾಹಿ ಯಾವುದೇ ಭಯ ಭೀತಿಯಿಲ್ಲದೆ ಜಗತ್ತಿನಲ್ಲೆಡೆ ತನ್ನ ಆದೇಶಗಳನ್ನು ಹೇರಲು ಮುಂದಾಯಿತು.

ಇರಾಕ್ ವಿರುದ್ಧ ಸಾರಿದ ಯುದ್ಧ ಸಾಮ್ರಾಜ್ಯಶಾಹಿಯ ಹೊಸ ಆಕ್ರಮಣ ಮತ್ತು ಅದರ ಸೊಕ್ಕಿನ ಒಂದು ಸೂಚನೆಯಷ್ಟೇ. ಇದು ಹೊಸದಾಗಿ ಸ್ವತಂತ್ರಗೊಂಡ ದೇಶಗಳ ಮುನ್ನಡೆ ಪಥದ ಮೇಲೆ ದುಷ್ಪರಿಣಾಮ ಬೀರಿತು. ಮತ್ತು ಪ್ರಸ್ತುತತೆ ಇದ್ದರೂ ಅಲಿಪ್ತ ಚಳುವಳಿ ಮೂಕಪ್ರೇಕ್ಷಕ ಸ್ಥಾನಕ್ಕಿಳಿಯಿತು.

ಅಮೆರಿಕಾ ಮತ್ತು ಅದರ ಮಿತ್ರ ದೇಶಗಳು ವಿಶ್ವ ಸಂಸ್ಥೆಯನ್ನೂ ಅದರಲ್ಲೂ ಮುಖ್ಯವಾಗಿ ಭದ್ರತಾ ಮಂಡಳಿಯನ್ನು ಹೈಜಾಕ್ ಮಾಡಿತು. ಹೊಸ ಜಾಗತಿಕ ಪರಿಸ್ಥಿತಿ ಬಾರಿ ಯುಳಿದ ಸಮಾಜವಾದಿ ದೇಶಗಳ ಮೇಲೆ ಎಲ್ಲಾ ರೀತಿಯ ಒತ್ತಡಗಳನ್ನು ಹೇರುತ್ತಿದೆ. ಸೋವಿಯತ್ ಸೇನಾ ನೆರವಿನ ಹಿಂತೆಗೆತ ಹಾಗೂ ಆರ್ಥಿಕತೆ ಮೇಲೆ ಅಮೆರಿಕ ದಿಗ್ಬಂಧನ ಹೇರಿರುವುದರಿಂದ ಕ್ಯೂಬಾ ನೇರ ಬೆದರಿಕೆಯನ್ನು ಎದುರಿಸುತ್ತಿದೆ.

ಸಮಾಜವಾದಿ ಶಕ್ತಿಗಳ ಬಲ ಕುಂದಿದ ಇಂಥ ಸನ್ನಿವೇಶದಲ್ಲಿ ಸಮಾಜವಾದ ಮತ್ತು ಸಮಾಜದ ಕ್ರಾಂತಿಕಾರಿ ಪರಿವರ್ತನೆಗೆ ಪಕ್ಷ ತನ್ನ ಬದ್ಧತೆಯನ್ನು ಮುಂದುವರಿಸಿ ಜಗತ್ತಿನ ಕ್ರಾಂತಿಕಾರಿ ಪ್ರಕ್ರಿಯೆಗೆ ಹಿನ್ನಡೆಯಾದರೂ ಅದೇ ಅವಧಿಯಲ್ಲಿ ರಾಷ್ಟ್ರೀಯ ವಿಮೋಚನಾ ಶಕ್ತಿಗಳ ಗಮನಾರ್ಹ ಯಶಸ್ಸು ಸಾಧಿಸಿರುವುದನ್ನೂ ಪಕ್ಷ ಗಣನೆಗೆ ತೆಗೆದು ಕೊಂಡಿತು. ನಮೀಬಿಯಾದ ಸ್ವಾತಂತ್ರ್ಯ, ದಕ್ಷಿಣಾ ಆಫ್ರಿಕಾದಲ್ಲಿ ಪ್ರಜಾಸತ್ತಾತ್ಮಕ ಶಕ್ತಿಗಳ ವಿಜಯ ನೆಲ್ಸನ್ ಮಂಡೇಲಾರ ಬಿಡುಗಡೆ, ಎ.ಎನ್.ಸಿ ಮತ್ತು ದಕ್ಷಿಣಾ ಆಫ್ರಿಕಾ ಕಮ್ಯುನಿಸ್ಟ್ ಪಕ್ಷ ಕಾನೂನು ಬದ್ಧಗೊಂಡಿದ್ದು, ಚಿಲಿಯಲ್ಲಿ ಪಿನೋಚೆಟ್ ಸರ್ವಾಧಿಕಾರ ಸೋತಿದ್ದು ಮತ್ತು ನಮ್ಮ ಸನಿಹದಲ್ಲೇ ಅಂದರೆ ನೇಪಾಳದಲ್ಲಿ ಕಮ್ಯುನಿಸ್ಟರು ಗಳಿಸಿದ ಚುನಾವಣೆ ವಿಜಯ ಮೊದಲಾದ ವಿದ್ಯಮಾನಗಳು ಜಾಗತಿಕ ಕ್ರಾಂತಿಕಾರಿ ಪ್ರಕ್ರಿಯೆ ದಾಪುಗಾಲು ಹಾಕುತ್ತಿರುವುದಕ್ಕೆ ಸಾಕ್ಷಿ.

ವ್ಯವಸ್ಥೆಯನ್ನು ಸುಧಾರಿಸುವ ಹಾಗೂ ಆರ್ಥಿಕತೆಯನ್ನು ಪುನಶ್ಚೇತನಗೊಳಿಸುವ ಕಠಿಣ ಸವಾಲನ್ನು ಎದುರಿಸುತ್ತಿರುವ ಸಮಾಜವಾದಿ ದೇಶಗಳಿಗೆ ಸಿಪಿಐ(ಎಂ) ದೃಢವಾದ ಸೌಹಾರ್ದ ಬೆಂಬಲವನ್ನು ಘೋಷಿಸಿತು. 1989ರ ಮೇ-ಜೂನ್‌ನ ಪ್ರತಿಕ್ರಾಂತಿಕಾರಿ ಸವಾಲನ್ನು ಎದುರಿಸಿದ ನಂತರ ಚೀನಿ ಜನತಾ ಗಣರಾಜ್ಯ ಆರ್ಥಿಕ ಸುಧಾರಣೆಗಳನ್ನು ಮುಂದುವರಿಸುತ್ತಿದೆ. ಸಮಾಜವಾದಿ ಚೌಕಟ್ಟಿನೊಳಗೆ ಸುಧಾರಣೆಗಳನ್ನು ಕೈಗೊಳ್ಳುವ ವಿಯಟ್ನಾಂ ನೊಂದಿಗೆ ಪಕ್ಷ ಸೌಹಾರ್ದತೆ ವ್ಯಕ್ತಪಡಿಸಿತು.

ಸೋವಿಯತ್ ಒಕ್ಕೂಟ ಮತ್ತು ಪೂರ್ವ ಯೂರೋಪಿನಲ್ಲಿ ಸಮಾಜವಾದಿ ವ್ಯವಸ್ಥೆ ಕುಸಿದು ಬಿದ್ದಿದ್ದನ್ನು ವಿಶ್ಲೇಷಿಸಿದ ಪಕ್ಷ ಸಮಾಜವಾದವನ್ನು ಕಟ್ಟುವಲ್ಲಿ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಸಿದ್ಧಾಂತಗಳನ್ನು ಅನ್ವಯಿಸುವಲ್ಲಿನ ಪರಿಷ್ಕರಣವಾದಿ ದಿಕ್ಚ್ಯುತಿಗಳು ಹಾಗೂ ವಿರೂಪಗಳು ಈ ವಿದ್ಯಮಾನಗಳಿಗೆ ಕಾರಣ ಎಂದು ಅಭಿಪ್ರಾಯ ಪಟ್ಟಿತು.

ಸೈದ್ಧಾಂತಿಕ ಮತ್ತು ಪ್ರಾಯೋಗಿಕ ವಿರೂಪಗಳಿಗೆ ಮಾರ್ಕ್ಸ್‌ವಾದ-ಲೆನಿನ್‌ವಾದದ ತಪ್ಪಲ್ಲ ಎಂದುಹೇಳಿದ ಸಿಪಿಐ(ಎಂ) ಹಿನ್ನಡೆಗಳು ಕಾಯಂ ಸ್ವರೂಪದ್ದಲ್ಲ ಎಂದು ಅಭಿಪ್ರಾಯಪಟ್ಟಿತು.

ಸಮಾಜವಾದದ ಹಿನ್ನಡೆಗಳನ್ನು ಜಾಗತಿಕ ಬಂಡವಾಳಶಾಹಿ ತನ್ನ ಸ್ವಂತ ಬಿಕ್ಕಟ್ಟನ್ನು ಮುಚ್ಚಿಹಾಕಲು ಬಲಸಿಕೊಳ್ಳುತ್ತಿದೆ. 1989-90 ರಲ್ಲಿ ಅಮೆರಿಕಾ, ಬ್ರಿಟನ್ ಮತ್ತು ಕೆನಡಾಗಳಲ್ಲಿ ಆರ್ಥಿಕ ಹಿಂಜರಿತ ಉಂಟಾಯಿತು. ಇಲ್ಲಿ ಮುಂದುವರಿದ ಬಂಡವಾಳಶಾಹಿ ದೇಶಗಳನ್ನೊಳಗೊಂಡ ಓಸೀಇಸಿಡಿ(OECD)ಯ ಒಟ್ಟು ರಾಷ್ಟ್ರೀಯ ಉತ್ಪನ್ನ (ಜಿ.ಎನ್.ಪಿ)ದ ಬೆಳವಣಿಗೆ ಕುಸಿತದ ಪ್ರವೃತ್ತಿಯನ್ನು ತೋರಿಸುತ್ತದೆ. ಈ ದೇಶಗಳ ಜಿಡಿಪಿ ಬೆಳವಣಿಗೆ ದರ ಕೂಡ ಇದೇ ಪ್ರವೃತ್ತಿಯನ್ನು ಹೊಂದಿದೆ.

ಅಮೆರಿಕ, ಬ್ರಿಟನ್, ಫ್ರಾನ್ಸ್, ಇಟಲಿ ಮತ್ತು ಕೆನಡಾಗಳಲ್ಲಿ ನಿರುದ್ಯೋಗ ಹೆಚ್ಚಿದೆ. ರೇಗನ್‌ವಾದ (Reaganism) ಮತ್ತು ಥ್ಯಾಚರ್‌ವಾದ(Thatcherism)ದಿಂದಾಗಿ ಬಡ ವಿಭಾಗಗಳು ಅವರ್ಣನೀಯ ಸಂಕಷ್ಟವನ್ನು ಅನುಭವಿಸಿವೆ. ಸಾಮಾಜಿಕ ಕಲ್ಯಾಣದ ವೆಚ್ಚವನ್ನು ಕಡಿತ ಮಾಡಲಾಗಿದೆ. ವಸತಿ ಹೀನರ ಸಂಖ್ಯೆ ಹೆಚ್ಚುತ್ತಿದೆ. ಬಂಡವಾಳಶಾಹಿ ದೇಶಗಳ ಸಾಮಾಜಿಕ ವಿರೋಧಾಭಾಸಗಳಿಂದಾಗಿ ಅಲ್ಲಿ ತೀವ್ರಗಾಮಿ ಬಲಪಂಥೀಯ ಪಕ್ಷಗಳ ಪ್ರಭಾವ ಹೆಚ್ಚಾಗುತ್ತಿದೆ. ಫ್ರಾನ್ಸ್, ಬೆಲ್ಜಿಯ, ಆಸ್ಟ್ರಿಯಾ ಮತ್ತು ಸ್ಪೇನ್‌ಗಳಲ್ಲಿ ಬಲಪಂಥೀಯ ಪಕ್ಷಗಳು ಬಲಗೊಂಡಿದೆ, ವಲಸೆ ಬಂದ ಜನರು ಜನಾಂಗೀಯ ತಾರತಮ್ಯಕ್ಕೆ ಒಳಗಾಗುತ್ತಿದ್ದಾರೆ.

ನಿರ್ದಿಷ್ಟ ಸೈದ್ಧಾಂತಿಕ ವಿಷಯಗಳ ಕುರಿತು ಪಕ್ಷದ ನಿಲುಮೆ

ಮದ್ರಾಸ್‌ನಲ್ಲಿ 1992ರ ಜನವರಿಯಲ್ಲಿ ನಡೆದ ಸಿಪಿಐ(ಎಂ) 14ನೇ ಅಧಿವೇಶನ ಈ ವಿದ್ಯಮಾನಗಳನ್ನು ವಿವರವಾಗಿ ಪರಿಶೀಲಿಸಿತು.ಜಾಗತಿಕ ಪರಿಸ್ಥಿತಿಯಲ್ಲಿನ ದೊಡ್ಡ ಬದಲಾವಣೆಗಳು ಜಗತ್ತಿನಲ್ಲಿ ಈಗ ವೈರುಧ್ಯದ ಸಿದ್ಧಾಂತವನ್ನೇನು ತಳ್ಳಿ ಹಾಕುವಂತಿಲ್ಲ ಎಂದು ಅಧಿವೇಶನ ರಾಜಕೀಯ ಗೊತ್ತುವಳಿ ಹೇಳಿತು.

ಸಮಾಜವಾದದ ವಿರುದ್ಧ ಸಾಮ್ರಾಜ್ಯಶಾಹಿ ಸೇನಾ ಮಧ್ಯಪ್ರವೇಶದ ಮೂಲಕ ನೇರ ಆಕ್ರಮಣ ಮಾಡಲಿಲ್ಲ. ಬದಲಿಗೆ ಅದು ಆಂತರಿಕ ಬುಡಮೇಲು ಕೃತ್ಯದಿಂದ ಈ ಕಾರ್ಯವನ್ನು ಸಾದಿಸಿತು. ಕಳೆದ ದಶಕದಲ್ಲಿ ಅಭಿವೃದ್ಧಿ ಶೀಲ ದೇಶಗಳ ಪರಿಸ್ಥಿತಿ ಬಿಗಡಾಯಿಸಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳೊಂದಿಗೆ ಅಸಮಾನ ಆರ್ಥಿಕ ಸಂಬಂಧಗಳನ್ನು ಹೊಂದಲು ಮುಂದುವರಿದ ದೇಶಗಳಲ್ಲಿ ಇರುವ ಪ್ರಮುಖ ಅಸ್ತ್ರ ಸಾಲದ ಹೊರೆ. ಈಗ ಯಾವುದೇ ವರ್ಷ ನೀಡುತ್ತಿರುವ ಸಾಲ ಹಿಂದಿನ ಸಾಲದ ಬಡ್ಡಿ ಪಾವತಿಗೆ ನೀಡುವ ಮೊತ್ತಕ್ಕಿಂತ ಕಡಿಮೆಯಾದುದಾಗಿದೆ. ಸಾಮ್ರಾಜ್ಯಶಾಹಿಗಳ ಆಂತರಿಕ ಕಲಹ ಕೂಡ ಸಂಕೀರ್ಣ ಹಾಗೂ ವಿರೋಧಾಭಾಸದ ಸ್ವರೂಪವನ್ನು ಪಡೆಯುತ್ತಿದೆ. ಜಾಗತಿಕ ಬಂಡವಾಳಶಾಹಿಯ ಹಿಂಜರಿತ ಅಸಮಾನವಾಗಿದೆ. ಜಿ-7 (ಏಳು ಮುಂದುವರಿದ ದೇಶಗಳ ಕೂಡ) ಭಿನ್ನಾಭಿಪ್ರಾಯಗಳನ್ನು ಬೆಳೆಹರಿಸಿ ಕೊಂಡಿದೆ. ಬಂಡವಾಳಸಾಹಿ ದೇಶಗಳ ಪರಸ್ಪರ ಹಿತಾಶಕ್ತಿಗಳ ತಿಕ್ಕಾಟದಿಂದಾಗಿ 1991ರ ಆರಂಭದಲ್ಲಿ ನಡೆದ ಗ್ಯಾಟ್ ಸುತ್ತಿನ ಮಾತುಕತೆ ವಿಫಲವಾಯಿತು.

ಬಂಡವಾಳ ಮತ್ತು ಶ್ರಮದ ನಡುವಿನ ವೈರುಧ್ಯ ಹೊಸ ಕ್ಲಿಷ್ಟವಾದ ಸ್ವರೂಪವನ್ನು ಪಡೆದಿದೆಯೆಂದು ರಾಜಕೀಯ ಗೊತ್ತುವಳಿ ಹೇಳಿತು. ಎಂಬತ್ತರ ದಶಕದಲ್ಲಿ ಸಾಮ್ರಾಜ್ಯಶಾಹಿ ಆಳುವ ವಲಯಗಳು ಮತ್ತು ದೊಡ್ಡ ವಾಣಿಜ್ಯೋದ್ಯಮಿಗಳು ಕಾರ್ಮಿಕ ವರ್ಗದ ವಿರುದ್ಧ ಭಾರಿ ಆಕ್ರಮಣ ನಡೆಸಿದರು ಪ್ರತಿಕೂಲ ಸನ್ನಿವೇಶದಲ್ಲೂ ಮುಷ್ಕರಗಳ ಮೂಲಕ ಇಂಥ ಆಕ್ರಮಣವನ್ನು ಎದುರಿಸುವಲ್ಲಿ ಟ್ರೇಡ್ ಯೂನಿಯನ್ ಚಳುವಳಿ ಯಶಸ್ವಿಯಾಯಿತು. ಕಾರ್ಮಿಕರು ಗಳಿಸಿದ ಸೌಲಭ್ಯಗಳ ರಕ್ಷಣೆಗಾಗಿ ಬ್ರಿಟನ್, ಫ್ರಾನ್ಸ್, ಜಪಾನ್, ಜರ್ಮನಿ ಮತ್ತು ಇಟಲಿಯಲ್ಲಿ ಬೃಹತ್ ಮುಷ್ಕರಗಳುನಡೆದವು.

ಸಾಮ್ರಾಜ್ಯಶಾಹಿ ವಿರುದ್ಧದ ಹೋರಾಟದಲ್ಲಿ ಭಾರತದ ಎಲ್ಲಾ ಜನವಿಭಾಗಗಳನ್ನು ಅಣಿನೆರಸುವ ಮೂಲಕ ಅಂತರ್ರಾಷ್ಟ್ರೀಯ ಕರ್ತವ್ಯ ನಿರ್ವಹಿಸುವ ಬದ್ಧತೆಯನ್ನು ರಾಜಕೀಯ ಗೊತ್ತುವಳಿ ಪುನಃ ಪ್ರತಿಪಾದಿಸಿತು.

ಸಮಾಜವಾದ ನಾಶವಾಗಿದೆ, ಕಮ್ಯುನಿಸಂಗೆ ಭವಿಷ್ಯವಿಲ್ಲ ಮತ್ತು ಸಮಾಜದ ಬೆಳವಣಿಗೆಯಲ್ಲಿ ಬಂಡವಾಳಸಾಹಿಯೇ ಅಂತಿಮ ಘಟ್ಟ ಎಂದು ಸಾಮ್ರಾಜ್ಯ ಶಾಹಿ ಮತ್ತು ಅದರ ಏಜೆಂಟರು ಭಾರತದಲ್ಲಿ ಪ್ರಚಾರ ನಡೆಸುತಿರುವುದನ್ನು ನಾವು ದೃಢವಾಗಿ ಪ್ರತಿರೋಧಿಸಬೇಕು. ಸಾಮ್ರಾಜ್ಯಶಾಹಿ ಆಕ್ರಮಣದ ಎದುರಲ್ಲೇ ಸಮಾಜವಾದಿ ದೇಶಗಳೊಂದಿಗಿನ ಹಾಗೂ ಸ್ವಾತಂತ್ರ್ಯ ಮತ್ತು ಸಮಾಜಿಕ ಪರಿವರ್ತನೆಗೆ ಕಟಿಬದ್ಧವಾಗಿರುವ ಮೂರನೇ ಜಗತ್ತಿನ ದೇಶಗಳೊಂದಿಗಿನ ನಮ್ಮ ಸೌಹಾರ್ದತೆಯನ್ನು ಇನ್ನಷ್ಟು ಹೆಚ್ಚಿಸಬೇಕು. ರಾಷ್ಟ್ರೀಯ ವಿಮೋಚನಾ ಚಳುವಳಿಗಳು ಬಂಡವಾಳಶಾಹಿ ದೇಶಗಳ ಕಾರ್ಮಿಕ ವರ್ಗದ ಹೋರಾಟಗಳು ಮತ್ತು ವಿಶ್ವ ಶಾಂತಿಯ ಶಕ್ತಿಗಳಿಗೆ ಕೂಡ ನಮ್ಮ ಸೌಹಾರ್ದ ಬೆಂಬಲವನ್ನು ಹೆಚ್ಚಿಸಬೇಕು ಎಂದು ಗೊತ್ತುವಳಿ ಕರೆ ನೀಡಿತು.

ರಾಷ್ಟ್ರಧ್ವಜವನ್ನು ಹರಿದು ಹಾಕಿದವರ ಧ್ವಜ ಗೌರವ ನಾಟಕಕ್ಕೆ ಮರುಳಾಗದಿರಿ

ಹುಬ್ಬಳ್ಳಿ: "ಹುಬ್ಬಳ್ಳಿಯ ಈದ್ಗಾ ಮೈದಾನದಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವ ವಿವಾದವನ್ನು ಹುಟ್ಟು ಹಾಕಿರುವ ಹಿಂದೂ ಕೋಮುವಾದಿ ಶಕ್ತಿಗಳ ಕಪಟ ನಾಟಕಕ್ಕೆ ಮರುಳಾಗದಿರಿ" ಎಂದು ಸಿಪಿಐ(ಎಂ) ನ ಮಾಜಿ ಸಂಸತ್ ಸದಸ್ಯೆ ಕಾಮ್ರೇಡ್ ಸುಭಾಷಿಣಿ ಆಲಿ ಕರ್ನಾಟಕ ಜನತೆಗೆ ಕರೆ ನೀಡಿದರು. ಅವರು ಜನವರಿ ೨೦ ರಂದು ಹುಬ್ಬಳ್ಳಿಯಲ್ಲಿ ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿಯ ಕೋಮು ಸೌಹಾರ್ದತೆಗಾಗಿ ಏರ್ಪಡಿಸಿದ್ದ ಬೃಹತ್ ರ್‍ಯಾಲಿಯ ಅಂಗವಾಗಿ ನಡೆದ ಭಾರೀ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು. ಕಾಮ್ರೇಡ್ ಸುಭಾಷಿಣಿ ಆಲಿ ನೇತಾಜಿ ಸುಭಾಸ್ ಚಂದ್ರ ಬೋಸ್ ಅವರ ಪ್ರಸಿದ್ಧ ಅಜಾದ್ ಹಿಂದ್ ಫೌಜ್ ನಲ್ಲಿ ಮಹಿಳಾ ಕ್ಯಾಪ್ಟನ್ ಆಗಿದ್ದ ಕ್ಯಾಪ್ಟನ್ ಲಕ್ಷ್ಮಿಸೈಗಲ್ ಅವರ ಮಗಳು. ಅವರ ತಂದೆ ಸೈಗಲ್‌ರವರು ಅದೇ ಸೈನ್ಯದಲ್ಲಿ ಕ್ಯಾಪ್ಟನ್ ಆಗಿದ್ದು ಬ್ರಿಟಿಷರ ಕೈಯಲ್ಲಿ ಗಲ್ಲು ಶಿಕ್ಷೆ ಅನುಭವಿಸಿ ಹುತಾತ್ಮರಾಗಿದ್ದರು. ಕಾನ್ಪುರದ ಜವಳಿ ಕಾರ್ಮಿಕರ ಅಚ್ಚುಮೆಚ್ಚಿನ ನಾಯಕಿಯಾಗಿರುವ ಕಾಮ್ರೇಡ್ ಸುಭಾಷಿಣಿ ಅವರು ಪ್ರಸಿದ್ಧ "ಲ ಫಂಟಾ ಕಾ ಕಾಮ್, ಲ ಫಂಟಾ ಕಾ ಜಾಮ್" ಚಳವಳಿಯ ಕೇಂದ್ರ ಬಿಂದು ಆಗಿದ್ದರು.

ರಾಮ ಜನ್ಮಭೂಮಿ ಆಂದೋಲನದ ಹೆಸರಿನಲ್ಲಿ ಉತ್ತರ ಪ್ರದೇಶದಲ್ಲಿ ಕಾವಿ ಪಡೆಯುವದು ನಡೆಸಿದ ಹಾವಳಿಯನ್ನು ಕಣ್ಣಾರೆ ಕಂಡಿದ್ದ ಕಾಮ್ರೇಡ್ ಸುಭಾಷಿಣಿಯವರು ಹುಬ್ಬಳ್ಳಿಯನ್ನು ಇನ್ನೊಂದು ಅಯೋಧ್ಯೆ ಮಾಡಲು ಬಿ.ಜೆ.ಪಿ.ಯು ನಡೆಸಿರುವ ಪಿತೂರಿಯ ಬಗ್ಗೆ ತೀವ್ರ ಆತಂಕವ್ಯಕ್ತಪಡಿಸಿದರು. ಹಿಂದಿನ ದಿನ ಧಾರವಾಡದಲ್ಲಿ ನಡೆದ ಬುದ್ಧಿಜೀವಿಗಳ ಸಭೆಯೊಂದರಲ್ಲಿ ತಮಗೆ ಭೇಟಿಯಾದ ಹಿರಿಯ ಸ್ವಾತಂತ್ರ್ಯ ಯೋಧ ಹಾಗೂ ಸಮಾಜವಾದಿ ಚಿಂತಕ ನ್ಯಾಯವಾದಿ ಜೆ.ಟಿ. ಪದಕಿಯವರು ಹೇಳಿದ ಮಾತುಗಳನ್ನು ಅವರು ಪ್ರಸ್ತಾಪಿಸುತ್ತಾ ೧೯೪೭ ಕ ಸೆಪ್ಟೆಂಬರ್ ತಿಂಗಳಲ್ಲಿ ಧಾರವಾಡದಲ್ಲಿ ನಡೆದ ಘಟನೆಯೊಂದನ್ನು ನೆನಪಿಸಿಕೊಂಡರು. ಬಿ.ಜೆ.ಪಿ.ಗೆ ಸೈದ್ಧಾಂತಿಕ ಮಾರ್ಗದರ್ಶನ ಮಾಡುವ ಆರ್.ಎಸ್.ಎಸ್. ತಂಡವೊಂದು ಅಂದು ಧಾರವಾಡದ ಕಡಪಾ ಮೈದಾನದಲ್ಲಿ ಕುಳಿತು ಕೊಂಡು ಬಿಕ್ಕಿ ಬಿಕ್ಕಿ ಅಳುತ್ತಿತ್ತಂತೆ. "ದೇಶಕ್ಕೆ ಸ್ವಾತಂತ್ರ್ಯ ಏನೋ ಸಿಕ್ಕಿತು. ಆದರೆ ಭಗವಾ ಧ್ವಜದ ಬದಲು ಈ ಮೂರು ಬಣ್ಣದ ಧ್ವಜ ರಾಷ್ಟ್ರ ಧ್ವಜವಾಯಿತಲ್ಲ" ಎಂದು ಗೋಳಾಡುತ್ತಾ ಕೈಯಲ್ಲಿದ್ದ ರಾಷ್ಟ್ರ ಧ್ವಜವನ್ನು ಅವರು ಚಿಂದಿ ಚಿಂದಿಯಾಗುವಂತೆ ಹರಿದು ಹಾಕಿದರು. ಇದಕ್ಕೆ ಪ್ರತ್ಯಕ್ಷ ಸಾಕ್ಷಿ ಯಾಗಿದ್ದ ಜೆ.ಟಿ.ಪದಕಿ ಮತ್ತು ಅವರ ಸ್ನೇಹಿತರು ಆರ್.ಎಸ್.ಎಸ್. ನವರ ಈ ರಾಷ್ಟ್ರದ್ರೋಹಿ ಕೃತ್ಯವನ್ನು ಖಂಡಿಸುವ ಹೇಳಿಕೆಯನ್ನು ಕರಪತ್ರಗಳಲ್ಲಿ ಮುದ್ರಿಸಿ ಹಂಚಿದ್ದರು. ಅಂದು ರಾಷ್ಟ್ರಧ್ವಜ ಪ್ರೇಮದ ಮುಖವಾಡ ಧರಿಸಿಕೊಂಡು ಹುಬ್ಬಳ್ಳಿಯ ವಿವಾದಿತ ಈದ್ಗಾ ಮೈದಾನದಲ್ಲಿ ಧ್ವಜ ಹಾರಿಸುವ ನಾಟಕ ಹೂಡಿ ಮುಗ್ಧ ಜನತೆಯನ್ನು ದಾರಿತಪ್ಪಿಸುತ್ತಿದ್ದಾರೆ ಎಂದು ಅವರು ಹೇಳಿದರು.

ಈದ್ಗಾ ಮೈದಾನದ ವಿವಾದ ಮೂಲತಃ ಆಸ್ತಿ ಒಡೆತನದ ವಿವಾದ ಎಂದು ಹೇಳಿದ ಕಾಮ್ರೇಡ್ ಸುಭಾಷಿಣಿ ಅವರು ಇದೊಂದು ಹಿಂದುಗಳ ನಡುವಿನ ವಿವಾದವಾಗಿದ್ದರೆ ಇಲ್ಲಿ ಬಿ.ಜೆ.ಪಿ.ಗೆ ಧ್ವಜ ಹಾರಿಸುವ ವಿಚಾರವೇ ಬರುತ್ತಿರಲಿಲ್ಲ. ಇದು ಕೇವಲ ಧ್ವಜದ ಪ್ರಶ್ನೆಯಲ್ಲ ಮುಸಲ್ಮಾನರನ್ನು ದೇಶದ್ರೋಹಿಗಳೆಂದೂ ದೇಶದ ಎಲ್ಲಾ ಸಮಸ್ಯೆಗಳಿಗೆ ಮುಸಲ್ಮಾನರೇ ಕಾರಣ ಎಂಬ ಆರೋಪವನ್ನು ಹೊರಿಸಿ ಅಲ್ಪ ಸಂಖ್ಯಾತರ ವಿರುದ್ಧ ಬಹು ಸಂಖ್ಯಾತ ಹಿಂದುಗಳನ್ನು ಸಂಘಟಿಸಿ ಅವರ ರಾಜಕೀಯ ಲಾಭ ಪಡೆಯಲು ಬಿ.ಜೆ.ಪಿ. ಹೂಡಿರುವ ಭಾರೀ ಸಂಚು ಇದಾಗಿದೆ ಎಂದು ಅವರು ಅಭಿಪ್ರಾಯ ಪಟ್ಟರು.

ಅನೇಕ ಸಂಸ್ಕೃತಿಗಳ , ವಿಭಿನ್ನ ರಾಷ್ಟ್ರೀಯತೆಗಳ ನೆಲೆ ಬೀಡಾಗಿರುವ ಈ ನಮ್ಮ ದೇಶದಲ್ಲಿ ಒಂದು ಧರ್ಮದ ಆಧಾರದಲ್ಲಿ ದೇಶವನ್ನು ಕಟ್ಟುವ ಸಂಘ ಪರಿವಾರದ ಆಸೆ ಎಂದಿಗೂ ಕೈಗೂಡದು ಎಂದು ಹೇಳಿದ ಕಾಮ್ರೇಡ್ ಸುಭಾಷಿಣಿ ಅವರು ಒಂದು ವೇಳೆ ಹಾಗೆ ಏನಾದರೂ ಸಂಭವಿಸಿದರೂ ಅಂತಹ ದೇಶ ಸುಭದ್ರವಾಗಿರಲು ಸಾಧ್ಯವಿಲ್ಲ ಎಂದು ಪಾಕಿಸ್ತಾನವನ್ನು ಉದಾಹರಿಸಿದರು.

ರಾಮಜನ್ಮಭೂಮಿ ಎನ್ನಲಾದ ಸ್ಥಳದಲ್ಲಿ ಶಿಲಾನ್ಯಾಸ ಮಾಡಿದ ಬಳಿಕ, "ನಾವು ಈಗ ಹಿಂದೂ ರಾಷ್ಟ್ರ ಸ್ಥಾಪನೆಗೆ ತಳಪಾಯ ಹಾಕಿದ್ದೇವೆ" ಎಂದು ವಿಶ್ವ ಹಿಂದೂ ಪರಿಷತ್ತಿನ ವಕ್ತಾರರು ಹೇಳಿಕೆ ನೀಡಿದ್ದನ್ನು ನೆನಪು ಮಾಡಿದ ಕಾಮ್ರೇಡ್ ಸುಭಾಷಿಣಿ ಅವರು ದೇಶಕ್ಕೆ ಹಿಂದೂ ಧರ್ಮ ಆಧಾರಿತ ಸಂವಿಧಾನವನ್ನು ಅನ್ವಯಗೊಳಿಸುವ ಗುರಿ ಇಟ್ಟುಕೊಂಡಿರುವ ಈ ಶಕ್ತಿಗಳು ಬಾಬ್ರಿ ಮಸೀದಿಯನ್ನು ಧ್ವಂಸ ಮಾಡಲು ನಮ್ಮ ಸಂವಿಧಾನದ ಶಿಲ್ಪಿ ಅಂಬೇಡ್ಕರ್ ಅವರ ನಿರ್ವಾಣ ದಿನವಾದ ಡಿಸೆಂಬರ್ ೬ ಅನ್ನು ಆಯ್ಕೆ ಮಾಡಿದ್ದು ಆಕಸ್ಮಿಕವಲ್ಲ" ಎಂದರು. ಮಸೀದಿಯನ್ನು ಧ್ವಂಸ ಮಾಡುವುದರೊಂದಿಗೆ ಅವರು ನಮ್ಮ ದೇಶದ ಸಂವಿಧಾನ ಎತ್ತಿ ಹಿಡಿಯುವ ಎಲ್ಲ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಧ್ವಂಸ ಮಾಡಿದ್ದಾರೆ. ಮಸೀದಿಯನ್ನು ನಾವೇ ನಾಶಮಾಡಿದ್ದು ಎಂದು ಕೀಳು ಪೌರುಷ ಪ್ರದರ್ಶಿಸುವ ಬಿ.ಜೆ.ಪಿ.ಯ ನಾಯಕರು ನ್ಯಾಯಾಲಯದಲ್ಲಿ ಮಾತ್ರ ಮಸೀದಿ ನಾಶಮಾಡಿದವರು ನಾವಲ್ಲ ಎಂದು ಹೇಳುತ್ತಿದ್ದಾರೆ ಎಂದು ಕಾಮ್ರೇಡ್ ಸುಭಾಷಿಣಿಯವರು ಟೀಕಿಸಿದರು.

ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ನ ಶಾಸಕರಾದ ಕಾಮ್ರೇಡ್ ಜಿ.ವಿ.ಶ್ರೀರಾಮರೆಡ್ಡಿ ವಹಿಸಿದ್ದರು. ಪಕ್ಷದ ರಾಜ್ಯ ಕಾರ್ಯದರ್ಶಿ ಕಾಮ್ರೇಡ್ ಪಿ. ರಾಮಚಂದ್ರರಾವ್, ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಮ್ರೇಡ್ ವಿ.ಜೆ.ಕೆ.ನಾಯರ್ ಮತ್ತು ಕಾಮ್ರೇಡ್ ಎನ್.ಕೆ. ಉಪಾಧ್ಯಾಯ ಹಾಗೂ ಪ್ರಾಂತ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ಕಾಮ್ರೇಡ್ ಜಿ.ಎನ್.ನಾಗರಾಜ್ ವೇದಿಕೆಯಲ್ಲಿ ಉಪಸ್ಥಿತರಿದ್ದು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಆರಂಭದಲ್ಲಿ ಎಸ್.ಎಫ್.ಐ ಕಲಾವಿದರು ಕ್ರಾಂತಿಗೀತೆಗಳನ್ನು ಹಾಡಿದರು. ಪಕ್ಷದ ಜಿಲ್ಲಾ ಕಾರ್ಯದರ್ಶಿ ಕಾಮ್ರೇಡ್ ನಿತ್ಯಾನಂದ ಸ್ವಾಮಿ ಪ್ರಾಸ್ತಾವಿಕವಾಗಿ ಮಾತನಾಡಿ ಈದ್ಗಾ ಮೈದಾನದ ವಿವಾದವನ್ನು ಹುಟ್ಟು ಹಾಕಿ ಹುಬ್ಬಳ್ಳಿಯ ನಗರವನ್ನು ಬಿ.ಜೆ.ಪಿ. ಯವರು ನರಕವನ್ನಾಗಿಸಲು ಪ್ರಯತ್ನಿಸುತ್ತಿದ್ದಾರೆ. ಎಂದು ಹೇಳಿದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯ ಕಾಮ್ರೇಡ್ ಸಿ.ಆರ್.ಭಟ್ ಕಾರ್ಯಕ್ರಮ ನಿರೂಪಣೆ ಮಾಡಿದರೆ ಜಿಲ್ಲಾ ಸಮಿತಿಯ ಸದಸ್ಯ ಕಾಮ್ರೇಡ್ ಎಂ.ಎಚ್. ಮುಲ್ಲಾ ಕೊನೆಯಲ್ಲಿ ವಂದಿಸಿದರು.



ಕರ್ನಾಟಕ ಸುದ್ದಿ ಸಮಾಚಾರ

ಬೃಹತ್ ಮೆರವಣಿಗೆ

ಸಭೆಯ ಪೂರ್ವದಲ್ಲಿ ಕೋಮು ಸೌಹಾರ್ದತೆಗಾಗಿ ನಗರದ ಪ್ರಮುಖ ಬೀದಿಗಳಲ್ಲಿ ಬೃಹತ್ ಮೆರವಣಿಗೆಯನ್ನು ಹೊರಡಿಸಲಾಗಿತ್ತು. ಕೈಗಾರಿಕಾ ಕಾರ್ಮಿಕರು,ರೈತರು, ಕೃಷಿ ಕೂಲಿಕಾರರು ಹಾಗೂ ದೊಡ್ಡ ಸಂಖ್ಯೆಯಲ್ಲಿ ಮಹಿಳೆಯರನ್ನು ಒಳಗೊಂಡ ಮೆರವಣಿಗೆಯಲ್ಲಿ ನಗರದಲ್ಲಿ ಗಲಭೆಗಳ ದೃಷ್ಟಿಯಿಂದ ಸೂಕ್ಷ್ಮವೆನಿಸಿಕೊಂಡ ಬೀದಿಗಳಲ್ಲಿ ಸಂಚರಿಸಿದಾಗ ಅದು ನಗರದ ಜನತೆಯ ಗಮನ ಸೆಳೆಯಿತು ಮಾತ್ರವಲ್ಲ ಸಿಪಿಐ(ಎಂ) ಪಕ್ಷವು ಈ ವಿಷಯದಲ್ಲಿ ಮಧ್ಯ ಪ್ರವೇಶ ಮಾಡಿದ್ದನ್ನು ಅಲ್ಲಲ್ಲಿ ಕೆಲವರು ಮುಕ್ತ ಕಂಠದಿಂದ ಪ್ರಶಂಸುತ್ತಿರುವುದು ಕೇಳಿ ಬರುತ್ತಿತ್ತು. "ಹುಬ್ಬಳ್ಳಿಯಲ್ಲಿ ನಮಗೆ ಶಾಂತಿ ಬೇಕು, ಧ್ವಜಾರೋಹಣದ ಹೆಸರಿನಲ್ಲಿ ಗಲಾಟೆ ಮಾಡುವ ಶಕ್ತಿಗಳಿಗೆ ಧಿಕ್ಕಾರ, ಹುಬ್ಬಳ್ಳಿಯನ್ನು ಇನ್ನೊಂದು ಅಯೋಧ್ಯೆ ಮಾಡಲು ಬಿಡುವುದಿಲ್ಲ" ಎಂಬ ಇತ್ಯಾದಿ ಘೋಷಣೆಗಳು ನಗರದ ಬೀದಿಗಳಲ್ಲಿ ಪ್ರತಿಧ್ವನಿಗೊಳ್ಳುತ್ತಿದ್ದಂತೆ ನಗರದ ಅಲ್ಪ ಸಂಖ್ಯಾತ ನಿವಾಸಿಗಳ ಕಣ್ಣುಗಳಲ್ಲಿ ಸಮಾಧಾನದ ಕಳೆ ಮಿಂಚಲಾರಂಭಿಸಿತು. ನಗರದ ಜನತೆಯ ನೆಮ್ಮದಿಯನ್ನು ಕಬಳಿಸಲು ಪದೇ ಪದೇ ಬಳಸಲಾಗುತ್ತಿರುವ ಈ ವಿವಾದ ಸೌಹಾರ್ದಯುತವಾಗಿ ಬಗೆ ಹರಿಯುವಲ್ಲಿ ಸಿಪಿಐ(ಎಂ) ಏರ್ಪಡಿಸಿದ ಈ ರ್‍ಯಾಲಿ ಖಚಿತ ಪರಿಣಾಮ ಬೀರಲಿದೆ ಎಂಬ ಮಾತು ನಗರದಾದ್ಯಂತ ಪಸರಿಸಲು ಹೆಚ್ಚು ಸಮಯ ತೆಗೆದು ಕೊಳ್ಳಲಿಲ್ಲ. ಹುಬ್ಬಳ್ಳಿಯ ಮೂರು ಸಾವಿರ ಮಠದ ಜಗದ್ಗುರುಗಳನ್ನು ಕಾಮ್ರೇಡ್ ಸುಭಾಷಿಣಿ ಆಲಿ ಹಾಗೂ ಪಕ್ಷದ ರಾಜ್ಯ ಮುಖಂಡರು ಹೋಗಿ ಭೇಟಿಯಾಗಿದ್ದು ಸಹ ನಗರದಲ್ಲಿ ಶಾಂತಿ ಮರು ಸ್ಥಾಪನೆಯ ಬಗ್ಗೆ ಸಿಪಿಐ(ಎಂ) ಪಕ್ಷಕ್ಕಿರುವ ಕಾಳಜಿಯನ್ನು ನಗರದ ಜನತೆ ಮನಗಾಣುವಂತಾಯಿತು.

ಸಿಪಿಐ(ಎಂ) ತಾಲೂಕು ಸಮ್ಮೇಳನ

ಬಳ್ಳಾರಿ: 22, 1995ರಂದು ಕುರುಗೋಡುನಲ್ಲಿ ಬಳ್ಳಾರಿ ತಾಲೂಕಿನ ಸಿಪಿಐ(ಎಂ) ಪಕ್ಷದ ಸಮ್ಮೇಳನ ನಡೆಯಿತು. ಬೆಳಿಗ್ಗೆ 11 ಗಂಟೆಗೆ ಧ್ವಜಾರೋಹಣವನ್ನು ಜಿಲ್ಲಾ ಸಮಿತಿ ಕಾರ್ಯದರ್ಶಿ ಎಸ್.ಪ್ರಸನ್ನಕುಮಾರ್ ಮಾಡಿದರು. ಸಮ್ಮೇಳನಕ್ಕೆ ಹಾಜರಾದ ಪ್ರತಿನಿಧಿಗಳನ್ನು ಯು.ಬಸವರಾಜ ಸ್ವಾಗತಿಸಿದರು.

ನಂತರ ಕುರುಗೋಡು ಪಟ್ಟಣದಲ್ಲಿ 200ಕ್ಕೂ ಹೆಚ್ಚು ಪ್ರತಿನಿಧಿ ಸಂಗಾತಿಗಳು ಬೃಹತ್ ಮೆರವಣಿಗೆಯನ್ನು ನಡೆಸಿದರು.

ಬಹಿರಂಗ ಸಭೆಯು 12 ಗಂಟೆಗೆ ನಡೆಯಿತು. ಈ ಸಭೆಯಲ್ಲಿ ಮುಖ್ಯ ಅತಿಥಿಗಳಾಗಿ ಎಸ್.ಪ್ರಸನ್ನಕುಮಾರ್ ಗ್ಯಾಟ್ ಒಪ್ಪಂದಗಳ ಪರಿಣಾಮಗಳನ್ನು ಹಾಗೂ ಕೋಮುವಾದಿ ಬಿಜೆಪಿ ನಿಲುವುಗಳನ್ನು ಖಂಡಿಸಿ ಮಾತನಾಡಿದರು. ವಿ.ಎಸ್.ಶಿವಶಂಕರ್ ಸ್ವಾಗತಿಸಿದರು. ಬಸವರಾಜ ಅಧ್ಯಕ್ಷತೆ ವಹಿಸಿ ಮಾತನಾಡಿ ಮುಂಬರುವ ಪಂಚಾಯತ್ ಚುನಾವಣೆಗಳಲ್ಲಿ ಸಿಪಿಐ(ಎಂ) ತಾಲೂಕಿನಲ್ಲಿ ಸ್ಪರ್ಧಿಸಲಿದ್ದು ಜಯಪ್ರದಗೊಳಿಸಲು ಕಾರ್ಯಕರ್ತರಿಗೆ ಜನತೆಗೆ ಕರೆ ನೀಡಿದರು. ಕಾಂ.ಕೆ.ಗಾದಿಲಿಂಗಪ್ಪ ನೀರಾವರಿ ನಿರ್ಣಯವನ್ನು ಮಂಡಿಸಿದರೆ ಪಿ.ಆರ್.ವೆಂಕಟೇಶ್ ಅನುಮೋದಿಸಿ ಮಾತನಾಡಿದರು. ಕೆ.ಎಸ್.ರಾಮಾಂಜನೇಯ ವಂದಿಸಿದರು. ಕೆ.ಬಸವನಗೌಡ ವೇದಿಕೆಯಲ್ಲಿ ಉಪಸ್ಥಿತರಿದ್ದರು. ನಂತರ ತಾಲೂಕಿನ ಅಭಿವೃದ್ಧಿಗಾಗಿ ಹೋರಾಟ ಮುನ್ನಡೆಸಲು ತಾಲೂಕಿನ ಸಿಪಿಐ(ಎಂ) ನಾಯಕತ್ವವನ್ನು ಚುನಾಯಿಸಿತು.

ಯು.ಬಸವರಾಜ ಕಾರ್ಯದರ್ಶಿಗಳಾಗಿ, ಪಿ.ಆರ್.ವೆಂಕಟೇಶ್, ಕೆ.ಗಾದಿಲಿಂಗಪ್ಪ, ಕೆ.ಬಸವನಗೌಡ, ಶಿವಶಂಕರ್, ಕೆ.ಎಸ್. ರಾಮಾಂಜನೇಯ ಇವರನ್ನು ತಾಲೂಕು ಸಮಿತಿ ಸದಸ್ಯರನ್ನಾಗಿ ಆಯ್ಕೆ ಮಾಡಲಾಯಿತು. ಹಾಗೇ ಫೆಬ್ರವರಿ 8, 9, 10ರಂದು ನಡೆಯುವ (ಹಗರಿ ಬೊಮ್ಮನ ಹಳ್ಳಿಯಲ್ಲಿ) ಜಿಲ್ಲಾ ಸಿಪಿಐ(ಎಂ)ನ 6ನೇ ಸಮ್ಮೇಳನಕ್ಕೆ 10 ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡಿತು.

ಸಿಪಿಐ(ಎಂ) ಶಾಖಾ ಸಮ್ಮೇಳನ

ನಗರದ ಸ್ವಚ್ಛತೆಗೆ ಆಗ್ರಹ

ಶಿರಸಿ: ಶಿರಸಿ ನಗರದ ಎಲ್ಲಾ ಬೀದಿಗಳು ಗಬ್ಬು ನಾರುತ್ತಿದ್ದು ರಸ್ತೆಗಳು ಸಂಪೂರ್ಣ ನಾಶವಾಗಿ ವಾಹನಗಳು ಹಾಗೂ ಮನುಷ್ಯರು ತಿರುಗಾಡಲಾರದ ಪರಿಸ್ಥಿತಿ ನಿರ್ಮಾಣವಾಗಿದ್ದು ತುರ್ತಾಗಿ ಪುರಸಭೆ ಗಮನಹರಿಸಿ ಸ್ವಚ್ಛತೆ ಹಾಗೂ ರಸ್ತೆಗಳ ಪುನರ್ ನಿರ್ಮಾಣಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಶಿರಸಿ ಘಟಕ ಒತ್ತಾಯಿಸಿದೆ.

ಈ ಕುರಿತು ಜನವರಿ 20ರಂದು ನಗರದಲ್ಲಿ ನಡೆದ ಶಿರಸಿ ಸಿಪಿಐ(ಎಂ) ಶಾಖಾ ಸಮ್ಮೇಳನದಲ್ಲಿ ನಿರ್ಣಯ ಅಂಗೀಕರಿಸಲಾಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಬಂಗಾರೇಶ್ವರಗೌಡ ವಹಿಸಿದ್ದರು.

ಸಿಪಿಐ(ಎಂ) ಶಿರಸಿ ಶಾಖೆಯ ನೂತನ ಕಾರ್ಯದರ್ಶಿಗಳಾಗಿ ಪಿ.ಜಿ.ಮಶಾಲ್ದಿಯವರು ಪುನರ್‌ಆಯ್ಕೆಗೊಂಡರು.

ದಾವಣಗೆರೆ

ಸಿಪಿಐ(ಎಂ) ಪಕ್ಷದ ಶಾಖಾ ಸಮ್ಮೇಳನವು ಜನವರಿ 22ರಂದು ನಡೆಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಕಾಂ.ಮಹಾಂತೇಶ್ ವಹಿಸಿದ್ದರು. ಸಮ್ಮೇಳನವು ಮುಖ್ಯವಾಗಿ ಕಳೆದ ಮೂರು ವರ್ಷಗಳ ಅವಧಿಯ ಕಾರ್ಯದರ್ಶಿಯವರು ಮಂಡಿಸಿದ ವರದಿಯ ಆಧಾರದಲ್ಲಿ ಚರ್ಚೆ ನಡೆಸಿತು. ಮತ್ತು ಪಕ್ಷದ ಕರೆಗಳ ಅನುಷ್ಠಾನ ಮತ್ತು ಪಕ್ಷದ ಮುಂಬರುವ ಜಿಲ್ಲಾ-ರಾಜ್ಯ ಮತ್ತು ರಾಷ್ಟ್ರೀಯ ಮಹಾಧಿವೇಶನದ ಮಹತ್ವ ಕುರಿತಂತೆ ಚರ್ಚೆ ನಡೆಸಿ ಮುಂಬರುವ ದಿನಗಳಲ್ಲಿ ಪಕ್ಷದ ಸದಸ್ಯರನ್ನೂ ಸೈದ್ಧಾಂತಿಕವಾಗಿ ಗಟ್ಟಿಗೊಳಿಸುವ ದಿಶೆಯಲ್ಲಿ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಳ್ಳಲು ನಿರ್ಧರಿಸಿತು. ಅಲ್ಲದೆ ಸಮ್ಮೇಳನವು 1995-95 ಸಾಲಿಗೆ ಮೂರ್ತಿಯವರನ್ನು ಕಾರ್ಯದರ್ಶಿಯನ್ನಾಗಿ ಪುನರಾಯ್ಕೆಮಾಡಿತು. ಜೊತೆಗೆ ಮಹಾಂತೇಶ್‌ರವರನ್ನು ಸಹಕಾರ್ಯದರ್ಶಿಯನ್ನಾಗಿ ಆಯ್ಕೆ ಮಾಡಿತು. ಫೆಬ್ರವರಿ ತಿಂಗಳಲ್ಲಿ ನಡೆಯುವ ಜಿಲ್ಲಾ ಸಮ್ಮೇಳನಕ್ಕೆ ಐದು ಪ್ರತಿನಿಧಿಗಳನ್ನು ಆಯ್ಕೆ ಮಾಡಿತು. ಸಮ್ಮೇಳನದಲ್ಲಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ನಿತ್ಯಾನಂದ ಸ್ವಾಮಿಯವರು ಹಾಜರಿದ್ದು ಮಾರ್ಗದರ್ಶನ ನೀಡಿದರು.

ತೋರಣಗಲ್ಲು

ಜನವರಿ 15ರಂದು ಸಿಪಿಐ(ಎಂ) ಪಕ್ಷದ ತೋರಣಗಲ್ಲು ಶಾಖೆಯ ಸಮ್ಮೇಳನ ನಡೆಯಿತು. ಅದಕ್ಕೆ ಪೂರ್ವಭಾವಿಯಾಗಿ ಜಿಲ್ಲಾ ಕಾರ್ಯದರ್ಶಿಗಳಾದ ಕಾಂ.ಎಸ್.ಪ್ರಸನ್ನಕುಮಾರ್ ಧ್ವಜಾರೋಹಣ ಮಾಡಿ ಪಕ್ಷದ ನೂತನ ಕಛೇರಿಯನ್ನು ಉದ್ಘಾಟಿಸಿದರು. ಈ ಉದ್ಘಾಟನಾ ಕಾರ್ಯಕ್ರಮಕ್ಕೆ ಎಲ್ಲಾ ಸಾಮೂಹಿಕ ಸಂಘಟನೆಗಳ ಸದಸ್ಯರು ಭಾಗವಹಿಸಿದ್ದರು. ಉದ್ಘಾಟನಾ ಕಾರ್ಯಕ್ರಮಕ್ಕೆ ಭಾಗವಹಿಸಿದವರನ್ನುದ್ದೇಶಿಸಿ ಪ್ರಸನ್ನಕುಮಾರ್‌ರವರು ಭಾಷಣ ಮಾಡಿದರು. ಮಧ್ಯಾಹ್ನ ೩-೩೦ಕ್ಕೆ ಸಮ್ಮೇಳನ ಪ್ರಾರಂಭವಾಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಕಾಂ.ಜಿ.ಏಕಾಂಬ್ರಪ್ಪ ಇವರು ವಹಿಸಿದ್ದರು. ಕೊನೆಯಲ್ಲಿ ಸರ್ವಾನುಮತದಿಂದ ಕಾಂ.ಎನ್.ಶಂಕಣ್ಣ ಇವರನ್ನು ಕಾರ್ಯದರ್ಶಿಯನ್ನಾಗಿ ಪುನರಾಯ್ಕೆ ಮಾಡಲಾಯಿತು. ಜಿಲ್ಲಾ ಸಮ್ಮೇಳನಕ್ಕೆ ಎನ್.ಶಂಕಣ್ಣ, ವಿ.ಟಿ.ಹನುಮಂತಪ್ಪ, ಜಿ. ಏಕಾಂಬ್ರಪ್ಪ, ಸೋಮಪ್ಪ, ಗೋವಿಂದರೆಡ್ಡಿಯವರನ್ನು ಪ್ರತಿನಿಧಿಗಳನ್ನಾಗಿ ಆರಿಸಲಾಯಿತು.

ಈದ್ಗಾ ವಿವಾದ: ವಿಚಾರಗೋಷ್ಠಿ

ಧಾರವಾಡ: ಸಾಂಸ್ಕೃತಿಕ ಕೇಂದ್ರವಾದ ವಿದ್ಯಾವರ್ಧಕ ಸಂಘದ ಆವರಣದಲ್ಲಿ ಜನವರಿ 19, 1995ರಂದು 'ಕೋಮುವಾದ ರಾಷ್ಟ್ರೀಯ ಸಮಗ್ರತೆಗೆ ಅಪಾಯ' ಎಂಬ ವಿಷಯದಲ್ಲಿ ನಡೆದ ವಿಚಾರಗೋಷ್ಠಿಯು ಕಿಕ್ಕಿರಿದ ಸಭೆಯಲ್ಲಿ ಸಮುದಾಯ, ಬಂಡಾಯ ಸಾಹಿತ್ಯ, ಮ್ಯಾಳ, ಇಪ್ಟಾ, ಕರ್ನಾಟಕ ಸಮಾಜ ವಿಜ್ಞಾನ ಕೇಂದ್ರ, ಸಿಐಟಿಯು, ಎಐಟಿಯುಸಿ, ವಿಮಾ ನೌಕರರ ಸಂಘ, ಎಸ್ಎಫ್ಐ, ಡಿವೈಎಫ್ಐ, ಎಐಎಸ್ಎಫ್ಐ, ಸಂಯುಕ್ತ ಮಹಿಳಾ ವೇದಿಕೆ ಮತ್ತು ಇತರ ಪ್ರಗತಿಪರ ಸಂಘಟನೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ಈ ವಿಚಾರಗೋಷ್ಠಿಯಲ್ಲಿ ಮುಖ್ಯ ಅತಿಥಿಯಾಗಿ ಶ್ರೀಮತಿ ಶುಭಾಷಿಣಿ ಅಲಿ ಮಾತನಾಡಿ ಕೋಮುವಾದದ ಹಿಂದಿರುವ ರಾಜಕೀಯ ದುರುದ್ದೇಶವನ್ನು ಎದುರಿಸಲು ಜನತೆಗೆ ಕರೆ ನೀಡಿದರು.

ಗಾರ್ಮೆಂಟ್ಸ್ ವರ್ಕರ್ಸ್ ಯೂನಿಯನ್ ಸಭೆ

ಬೆಂಗಳೂರು: ಬೆಂಗಳೂರು ಜಿಲ್ಲಾ ಗಾರ್ಮೆಂಟ್ಸ್ ವರ್ಕರ್ಸ್ ಯೂನಿಯನ್‌ನ ವಿಶೇಷ ಮಹಾಸಭೆಯನ್ನು ಜನವರಿ 22ರಂದು ಎನ್.ಜಿ.ಓ. ಸಭಾಂಗಣದಲ್ಲಿ ನಡೆಸಲಾಯಿತು. ಇದರ ಅಧ್ಯಕ್ಷತೆಯನ್ನು ಶ್ರೀಪಿ.ಕೆ.ಸುಬ್ರಮಣಿಯವರು ವಹಿಸಿದ್ದರು. ಈ ಮಹಾಸಭೆಯಲ್ಲಿ ಸಿಐಟಿಯು ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿಗಳಾದ ಎಸ್.ಸೂರ್ಯನಾರಾಯಣರಾವ್ ಮತ್ತು ವಿ.ಜೆ.ಕೆ.ನಾಯರ ಭಾಗವಹಿಸಿದ್ದರು. ಸಭೆಯನ್ನುದ್ದೇಶಿಸಿ ಮಾತನಾಡಿದ ಸಿಐಟಿಯು ಅಧ್ಯಕ್ಷರು ಕಾರ್ಮಿಕರು ಸಂಘಟಿತ ಹೋರಾಟ ಮಾಡಬೇಕೆಂದು ಕರೆ ನೀಡಿದರು. ಈ ಮಹಾಸಭೆಯಲ್ಲಿ ಅಸಂಘಟಿತ ಕಾರ್ಮಿಕರ ಸಂಘಟನೆಯನ್ನು ಬಲಪಡಿಸಲು ಸಕ್ರಿಯವಾಗಿ ಕಾರ್ಯನಿರ್ವಹಿಸುವುದಕ್ಕಾಗಿ ಹೊಸ ಪದಾಧಿಕಾರಿಗಳನ್ನು ಸಭೆಯು ಅವಿರೋಧವಾಗಿ ಚುನಾಯಿಸಲಾಯಿತು. ಪದಾಧಿಕಾರಿಗಳು: ಆರ್.ಶ್ರೀನಿವಾಸ್-ಅಧ್ಯಕ್ಷರು, ಪಿ.ಕೆ.ಸುಬ್ರಮಣಿ- ಕಾರ್ಯಾಧ್ಯಕ್ಷರು, ಹೆಚ್.ಎಸ್. ಗೋಪಾಲಗೌಡ-1ನೇ ಉಪಾಧ್ಯಕ್ಷರು, ಸಡಗೋಪಾನ್-2ನೇ ಉಪಾಧ್ಯಕ್ಷರು, ಟಿ.ಲೀಲಾವತಿ-3ನೇ ಉಪಾಧ್ಯಕ್ಷರು, ಜಿ.ರಾಮಯ್ಯ- ಪ್ರಧಾನ ಕಾರ್ಯದರ್ಶಿ, ಎ.ಎಂ. ಜಾನ್ ವಿನ್ಸೆಂಟ್- ಸಂಘಟನಾ ಕಾರ್ಯದರ್ಶಿ, ಗೌರಮ್ಮ-ಕಾರ್ಯದರ್ಶಿ, ಡಿ.ವಿ.ಮಧುರಾ- ಸಹಾಯಕ ಕಾರ್ಯದರ್ಶಿ, ವಿ.ಎನ್.ಯಶೋಧ -ಜಂಟಿ ಕಾರ್ಯದರ್ಶಿ.

ಕಾರ್ಮಿಕ ಸಂಘದ ಚುನಾವಣೆ

ಭದ್ರಾವತಿ: VISL ಕಾರ್ಮಿಕ ಸಂಘದ ಚುನಾವಣೆಯು ಜನವರಿ 22, 1995ರಂದು ನಡೆದು, ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ SWFI (CITU)ನ ಕಾಂ.ಎಲ್. ರಂಗೇಗೌಡರು ಜಯಗಳಿಸಿದ್ದಾರೆ. ಕಾಂ. ರಂಗೇಗೌಡರು 356 ಮತಗಳ ಅಂತರದಿಂದ ಗೆದ್ದಿದ್ದಾರೆ.

ವಿಶೇಷ ಲೇಖನ

◆ ಭಾರತ ಅಮೇರಿಕಾ ರಕ್ಷಣಾ ಒಪ್ಪಂದದ ವಿಶ್ಲೇಷಣೆ

◆ ಗಾಂಧೀಜಿ ಹುತಾತ್ಮರಾದ ದಿನದ ಸಂದರ್ಭದಲ್ಲಿ

ಅಮೇರಿಕನ್ ಬಂಡವಾಳವನ್ನು ಆಕರ್ಷಿಸಲು ಮನವೊಲಿಸುವ ಆತುರದಲ್ಲಿ ರಾವ್ ಸರಕಾರ ಪ್ರದರ್ಶಿಸುತ್ತಿರುವ ಹೊಸ ರೀತಿಯ ಗುಲಾಮತನ ಪ್ರದರ್ಶಿಸುತ್ತಿರುವುದರ ಪ್ರತೀಕ ಇತ್ತೀಚಿನ ಭಾರತ-ಅಮೇರಿಕಾ ರಕ್ಷಣಾ ಒಪ್ಪಂದ. ಒಂದೆಡೆ ಈಗಿನ ಸನ್ನಿವೇಶದಲ್ಲಿ ಇಂತಹ ಒಪ್ಪಂದ ಅನಗತ್ಯವಾಗಿತ್ತು, ಇನ್ನೊಂದೆಡೆ ಭಾರತದ ಸ್ವಾತಂತ್ರ್ಯಕ್ಕೆ, ಭದ್ರತೆಗೆ ಅಪಾಯ ತಂದೊಡ್ಡುವ ಕ್ರಮ ಇದು ಎನ್ನುತ್ತಾರೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯ ಕಾಂ. ಪ್ರಕಾಶ್ ಕಾರಟ್ ಈ ಒಪ್ಪಂದವನ್ನು ದೇಶಪ್ರೇಮಿಗಳು ಏಕೆ ಬಲವಾಗಿ ವಿರೋಧಿಸಬೇಕು ಎಂದು ವಿವರಿಸಿದ್ದಾರೆ

ರಾವ್ ಸರಕಾರ ದೇಶವನ್ನು ಅಪಾಯಕಾರಿ ದಾರಿಗೆ ತಳ್ಳುತ್ತಿದೆ



ಜನವರಿ 12ರಂದು ನವದೆಹಲಿಯಲ್ಲಿ ಸಹಿ ಹಾಕಿದ ಭಾರತ-ಅಮೆರಿಕಾ ರಕ್ಷಣಾ ಸಹಕಾರಕ್ಕೆ ಸಹಿ ಭಾರತ-ಅಮೆರಿಕಾ ಸಂಬಂಧಗಳಲ್ಲಿ ಒಂದು ಪ್ರಮುಖ ಹಾಗೂ ಆತಂಕಕಾರಿ ಘಟ್ಟ. ಸರಿಯಾಗಿ ಮೂರು ವರ್ಷಗಳ ಹಿಂದೆ ಅಂದರೆ ಜನವರಿ 1992ರಲ್ಲಿ ಭಾರತೀಯ ಮತ್ತು ಅಮೆರಿಕನ್ ಸೇನೆಗಳ ನಡುವೆ ಜಂಟಿ ಕಾರ್ಯಕಾರಿ ಚಾಲಕ ಸಮಿತಿ ರಚಿಸಲಾಯಿತು. ನಂತರ ಎರಡೂ ದೇಶಗಳ ಜಲಸೇವೆಗಳಿಗೆ ಈ ರೀತಿಯ ಜಂಟಿ ಚಾಲಕ ಸಮಿತಿ ರಚನೆಯಾಯಿತು. ನೆಲ ಮತ್ತು ಜಲದಲ್ಲಿ ಎರಡೂ ಸಶಸ್ತ್ರ ಪಡೆಗಳ ಜಂಟಿ ಕವಾಯಿತುಗಳು ನಡೆಯಲಾರಂಭಿಸಿದವು. ಈಗ ವಾಯು ಪಡೆಗಳಿಗೂ ಇಂತಹ ವ್ಯವಸ್ಥೆ ಆಗುತ್ತಿದೆ. ಇದರಿಂದ ಆಗಿನ ಅಮೆರಿಕಾದ ಶಾಂತಿ ಸಾಗರ ಪಡೆಗಳ ಸೇನಾಧಿಪತಿಯಾಗಿದ್ದ ಲೆಫ್ಟಿನೆಂಟ್ ಜನರಲ್ ಕಿಕ್ ಲೈಟರ್ ಪ್ರಸ್ತಾಪಗಳನ್ನು ನರಸಿಂಹರಾವ್ ಸರಕಾರ ಪೂರ್ಣವಾಗಿ ಸ್ವೀಕರಿಸಿದಂತಾಗಿತ್ತು.

ಜನವರಿ 1991ರಲ್ಲಿ ಚಂದ್ರಶೇಖರ್ ನೇತೃತ್ವದ ಪಕ್ಷಾಂತರಿಗಳ ಸರಕಾರ ಇರಾಕಿನ ಯುದ್ಧದಲ್ಲಿ ಭಾಗವಹಿಸಲು ಹೋಗುತ್ತಿದ್ದ ಅಮೆರಿಕನ್ ವಿಮಾನ ಪಡೆಗಳಿಗೆ ಭಾರತೀಯ ವಿಮಾನ ನಿಲ್ದಾಣದಲ್ಲಿ ಇಂಧನ ತುಂಬಿಸಿಕೊಳ್ಳಲು ಅವಕಾಶ ನೀಡಿದ ನಾಚಿಕೆಗೇಡಿ ಘಟನೆ ನಡೆದಿತ್ತು. ನರಸಿಂಹರಾವ್ ಸರಕಾರ ಆ ನಾಚಿಕೆಗೇಡಿ ಅಧ್ಯಾಯವನ್ನು ಮುಂದುವರೆಸಿದೆ. ಜನವರಿ 1991ರಲ್ಲಿ ಭಾರತದ ಅಲಿಪ್ತ ನೀತಿಯಿಂದ ನಡೆದ ಈ ತೀವ್ರ ಮಾರ್ಗಚ್ಯುತಿ ಈಗ ನಾಲ್ಕು ವರ್ಷಗಳ ನಂತರ ಜನವರಿ 1995ರ ಭಾರತ-ಅಮೆರಿಕಾ ರಕ್ಷಣಾ ಒಪ್ಪಂದದಲ್ಲಿ ಪರ್ಯವಸಾನಗೊಂಡಿದೆ. ಭಾರತವನ್ನು ತನ್ನ ಜಾಗತಿಕ ಸಾಮಂತ ತಂತ್ರಗಳಲ್ಲಿ ಸೆಳೆಯುವ ಅಮೆರಿಕಾದ ಪ್ರಯತ್ನಗಳಿಗೆ ಫಲ ದೊರೆತಂತಾಗಿದೆ. ಸಿಪಿಐ(ಎಂ) ೧೪ನೇ ಮಹಾಧಿವೇಶನ ಜನವರಿ 1992ರಲ್ಲಿ ಈ ರೀತಿ ಅಮೆರಿಕಾದೊಂದಿಗೆ ಆಳವಾದ ಮಿಲಿಟರಿ ಸಹಕಾರಕ್ಕಿಳಿಯುವುದರ ವಿರುದ್ಧ ಎಚ್ಚರಿಕೆ ನೀಡಿತ್ತು.

ಈ ಹೊಸ ಒಪ್ಪಂದದ ಪರಿಣಾಮಗಳನ್ನು ಅರ್ಥಮಾಡಿಕೊಳ್ಳುವುದು ಬಹಳ ಮಹತ್ವ ಪೂರ್ಣ ನಿಯಮಿತ ಜಂಟಿ ಕವಾಯತುಗಳು; ತರಬೇತಿ ಕಾರ್ಯಕ್ರಮಗಳು ಹಾಗೂ ವಿನಿಮಯಗಳ ನಂತರ ಈ ಒಪ್ಪಂದ ಆಗ ಈ ಮಿಲಿಟರಿ ಸರಕಾರವನ್ನು ಸಿವಿಲ್ ಮಟ್ಟಕ್ಕೆ ಏರಿಸ ಬಯಸುತ್ತದೆ; ಭಾರತದ ರಕ್ಷಣಾ ಸೇನೆ ವಲಯ ಮತ್ತು ಅಮೆರಿಕಾ ರಕ್ಷಣಾ ಇಲಾಖೆಯ ಮಟ್ಟಕ್ಕೆ ಏರಿಸಬಯಸುತ್ತದೆ. ಅಂದರೆ ರಕ್ಷಣಾ ಸಹಕಾರದಲ್ಲಿ ರಾಜಕೀಯ ಅಂಶವನ್ನು ತರುತ್ತಲಿದೆ.

ನಿಜವಾಗಿ ಈ ಒಪ್ಪಂದದ ಬಗ್ಗೆ ನರಸಿಂಹ ರಾವ್‌ರವರ ಕಳೆದ ವರ್ಷದ ವಾಶಿಂಗ್ಟನ್ ಭೇಟಿಯ ಕಾಲದಲ್ಲೇ ಸೂಚಿಸಲಾಗಿತ್ತು ಹಾಗೂ ಪ್ರಧಾನಿಗಳು ಅದನ್ನು ಸ್ವೀಕರಿಸಿದ್ದರು ಎಂಬುದು ಈಗ ಸ್ಪಷ್ಟವಾಗಿದೆ. ಪೆರಿಯವರು ತಮ್ಮ ದಿಲ್ಲಿ ಭೇಟಿಕಾಲದಲ್ಲಿ ಇದನ್ನು ಹೊರಗೆಡಹಿದ್ದಾರೆ.

ಅಮೆರಿಕನ್ ನೊಗಕ್ಕೆ ಭಾರತ

"ಶೀತಲ ಯುದ್ಧಾನಂತರದ ಭದ್ರತಾ ಯೋಜನೆ ಹಾಗೂ ಎರಡೂ ಕಡೆಗಳ ಧೋರಣೆಗಳ ದೃಷ್ಟಿಕೋನ" ಇತ್ಯಾದಿಗಳ ಬಗ್ಗೆ ಸಮಾಲೋಚನೆ ನಡೆಸಬೇಕೆಂಬುದು ಈ ಒಪ್ಪಂದದ ಒಂದು ಮುಖ್ಯಅಂಶ. ಇದು ಒಂದು ಸಮಾನ ದೃಷ್ಟಿಕೋನ ರೂಪಿಸಲು ರಾಜಕೀಯ ಮಟ್ಟದಲ್ಲಿ ಎರಡು ರಕ್ಷಣಾ ಇಲಾಖೆಗಳನ್ನು ಒಂದೇ ನೊಗಕ್ಕೆ ಕಟ್ಟುವ ಪ್ರಯತ್ನವಲ್ಲದೆ ಬೇರೇನೂ ಅಲ್ಲ. ಇದು ತನ್ನ ಯಜಮಾನಿಕೆಯಲ್ಲಿ ಭಾರತದಂತಹ ಪ್ರಧಾನ ಪ್ರಾದೇಶಿಕ ಶಕ್ತಿಗಳನ್ನು ಒಂದು ಜಾಗತಿಕ ಭದ್ರತಾ ಜಾಲದೊಳಗೆ ಸೆಳೆಯುವ ಅಮೆರಿಕಾದ ಕಾರ್ಯತಂತ್ರಕ್ಕೆ ಚೆನ್ನಾಗಿ ಹೊಂದಿದ ಸಂಗತಿ.

ಸೇನಾ ಪಡೆಗಳ ವಿವಿಧ ವಿಭಾಗಗಳ ನಡುವಿನ ಸಹಕಾರವಲ್ಲದೆ ಈ ಒಪ್ಪಂದದಲ್ಲಿ ನಮೂದಿಸಿರುವ ಹೊಸ ಕ್ಷೇತ್ರವೆಂದರೆ ರಕ್ಷಣಾ ಸಂಶೋಧನೆ ಮತ್ತು ಉತ್ಪಾದನೆ. 1984ರಲ್ಲಿ ರಾಜೀವ್‌ಗಾಂಧಿ ಕಾಲದಲ್ಲಿ ಇಂತಹ ಸಹಕಾರದ ಆಹ್ವಾನ ನೀಡಲಾಗಿತ್ತು. ಹಗುರ ಯುದ್ಧ ವಿಮಾನ ಇಂಜಿನ್‌ಗೆ ನಮೂನೆಗಳನ್ನು ಪೂರೈಸುವ ಬಗ್ಗೆ 1984ರಲ್ಲಿ ತಿಳುವಳಿಕೆ ಪತ್ರಕ್ಕೆ ಸಹಿಹಾಕಲಾಗಿತ್ತು. ಆದರೆ ಈ ಯೋಜನೆಯ ಪ್ರಗತಿ ಅತ್ಯಂತ ಮಂದವಾಗಿದ್ದರೂ ಈಗಿನ ಒಪ್ಪಂದ ಇಂತಹ ಸಹಕಾರವನ್ನು "ಮತ್ತಷ್ಟು ವಿಸ್ತರಿಸುವ" ಮತನಾಡುತ್ತಾರೆ. ಇದೊಂದು ದೊಡ್ಡ ಸಾಧನೆ ಎಂದು ಭಾರತ ಸರಕಾರದ ವಕ್ತಾರರು ಕೊಚ್ಚಿಕೊಳ್ಳುತ್ತಿದ್ದಾರೆ. ಆದರೆ ಅಮೆರಿಕಾದ ರಕ್ಷಣಾ ಕಾರ್ಯದರ್ಶಿ ಯಾವುದೇ ತಂತ್ರಜ್ಞಾನ ವರ್ಗಾವಣೆ ತಕ್ಷಣದ ಅಜೆಂಡಾದಲ್ಲಿ ಇಲ್ಲ ಎಂದಿದ್ದಾರೆ.

ಸೋವಿಯತ್ ಒಕ್ಕೂಟವನ್ನು ಕಳಚಿ ಹಾಕಿದ ನಂತರ ಅಮೆರಿಕನ್ನರು ಜಗತ್ತಿನಲ್ಲೆಲ್ಲಾ ತಮ್ಮ ಶಸ್ತ್ರಾಸ್ತ್ರ ಮಾರಾಟವನ್ನು ಹೆಚ್ಚಿಸುವ ರಭಸದ ಪ್ರಯತ್ನ ನಡೆಸಿದ್ದಾರೆ. ಸೋವಿಯತ್ ಒಕ್ಕೂಟವಿಲ್ಲದಿರುವುದು ಜಾಗತಿಕ ಶಸ್ತ್ರಾಸ್ತ್ರ ಮಾರುಕಟ್ಟೆಯಲ್ಲಿ ತನ್ನ ಪ್ರಾಬಲ್ಯ ಮೆರೆಸಲು ಅದಕ್ಕೆ ನೆರವಾಗಿದೆ. ಜಾಗತಿಕ ಶಸ್ತ್ರಾಸ್ತ್ರ ಮಾರಾಟದ ಮೂರನೇ ಎರಡು ಭಾಗ ಅಮೆರಿಕಾದ ಪಾಲಾಗಿದೆ. ಉದಾಹರಣೆಗೆ 1993ರಲ್ಲಿ ಅಮೆರಿಕಾದ ಕಂಪನಿಗಳು 33 ಶತಕೋಟಿ ಡಾಲರ್‌ಗಳ ಶಸ್ತ್ರಾಸ್ತ್ರದಷ್ಟು ವ್ಯವಹಾರ ನಡೆಸಿದರು. ಅಮೆರಿಕಾದ ಆಂತರಿಕ ಖರ್ಚಿನಲ್ಲಿ ಕಡಿತದ ಹಿನ್ನೆಲೆಯಲ್ಲಿ ಅಮೇರಿಕಾದ ದೈತ್ಯಗಾತ್ರದ ಶಸ್ತ್ರಾಸ್ತ್ರ ಉದ್ದಿಮೆಗೆ ಇದೊಂದು ಮುಖ್ಯ ಅಂಶ. ಹೊಸ ವಿಶ್ವ ಸನ್ನಿವೇಶದಲ್ಲಿ ತನ್ನ ಶಸ್ತ್ರಾಸ್ತ್ರಗಳ ಮಾರಾಟಕ್ಕೆ ಅನುಕೂಲವಾಗುವಂತೆ ಭಾರತದ ರಕ್ಷಣಾ ಅಗತ್ಯಗಳೇನು ಎಂದು ಅದು ಶೋಧಿಸಲಾರಂಭಿಸಿದೆ. ತನ್ನ ಶಸ್ತ್ರಾಸ್ತ್ರವನ್ನು ಮಾರಲು ಅನುಕೂಲವಾಗುವಂತೆ ಭಾರತದ ರಕ್ಷಣಾ ಉತ್ಪಾದನಾ ವ್ಯವಸ್ಥೆಯಲ್ಲೇ ಒಂದು ಆಧಾರಭೂತ ಬದಲಾವಣೆ ತರುವುದು ಅದಕ್ಕೆ ಈಗ ಅಗತ್ಯವಾಗಿದೆ.

ಇದುವರೆಗೆ ಭಾರತದ ಶಸ್ತ್ರಾಸ್ತ್ರ ಖರೀದಿಯ ಬಹುಪಾಲು ಹಿಂದಿನ ಸೋವಿಯತ್ ಒಕ್ಕೂಟದೊಂದಿಗಿತ್ತು. ಇತ್ತೀಚೆಗೆ ರಶ್ಯನ್ ಪ್ರಧಾನಿ ಭೇಟಿ ಕಾಲದಲ್ಲಿ ರಕ್ಷಣಾ ಉತ್ಪಾದನೆಯ ಸಹಕಾರದ ಮುಂದುವರಿಕೆ ಹಾಗೂ ಬಿಡಿ ಭಾಗಗಳ ಪೂರೈಕೆಗಾಗಿ ಒಂದು ಒಪ್ಪಂದವೂ ಆಗಿತ್ತು.


ಈ ಕಳ್ಳ ಪ್ರವೃತ್ತಿ ಏಕೆ?

ಅಮೇರಿಕಾದೊಂದಿಗೆ ರಕ್ಷಣಾ ಉತ್ಪಾದನೆ ಸಹಕಾರವೆಂದರೆ ಈ ಉದ್ದಿಮೆಯನ್ನು ಖಾಸಗೀಕರಣ ಮಾಡಬೇಕಾಗುತ್ತದೆ. ಈಗ ಅದು ಬಹಳಷ್ಟು ಮಟ್ಟಿಗೆ ಸರಕಾರದ ಒಡೆತನದಲ್ಲಿದೆ. ಅಷ್ಟೇ ಅಲ್ಲ, ಭಾರತೀಯ ಸೇನಾ ಪಡೆಗಳನ್ನು ಅಮೇರಿಕನ್ ಮ್ಯಾನೇಜ್‌ಮೆಂಟ್ ಮತ್ತು ತರಬೇತಿ ವ್ಯವಸ್ಥೆಗೆ ಅನುಗುಣವಾಗಿ ಮಾರ್ಪಡಿಸಬೇಕಾಗುತ್ತದೆ. ಆದ್ದರಿಂದಲೇ ರಕ್ಷಣಾ ಒಪ್ಪಂದದ ಮೊದಲು ಸೇನಾ ಪಡೆಗಳ ನಡುವಣ ಸಹಕಾರಕ್ಕೆ ಅಮೇರಿಕಾ ಒತ್ತು ನೀಡಿತ್ತು.

ಈ ರಕ್ಷಣಾ ಒಪ್ಪಂದಕ್ಕೆ ರಾವ್ ಸರಕಾರ ತಾನು ಸಹಿ ಹಾಕುವುದಾಗಿ ಹೇಳಿದ್ದು ಅಮೇರಿಕನ್ ರಕ್ಷಣಾ ಕಾರ್ಯದರ್ಶಿ ವಿಲಿಯಂ ಪೆರಿಯವರ ಭೇಟಿಯ ಹಿಂದಿನ ದಿನವಷ್ಟೆ. ಇದು ನರಸಿಂಹರಾವ್ ಸರಕಾರ ಯಾರಿಗೂ ಕಳ್ಳತನದ[...] ನಿರ್ಣಯ ಕೈಗೊಳ್ಳುವ ಶೈಲಿಗೆ ಅನುಗುಣ[...]ಗಿಯೇ ಇದೆ. ರಕ್ಷಣಾ ನೀತಿಗಳಲ್ಲಿ ಇಂ[...] ದೊಡ್ಡ ಪ್ರಮಾಣದಲ್ಲಿ ಪರಿಣಾಮ ಬೀ[...] ಬದಲಾವಣೆಗಳಿಗೆ ಸಂಬಂಧಪಟ್ಟಂತೆ ಸಂಸ[...]ಲ್ಲಾಗಲಿ, ಸಾರ್ವಜನಿಕ ವೇದಿಕೆಗಳಲ್ಲಾಗ[...] ವಿಚಾರ ವಿನಿಮಯ ಚರ್ಚೆ ನಡೆಸದೇ ಒಪ್ಪಂದಕ್ಕೆ ಸಹಿ ಹಾಕಲು ಅದು ನಿರ್ಧರಿ[...]ಟ್ಟಿದೆ. ದೇಶದ ರಕ್ಷಣಾ ವ್ಯವಹಾರಗಳ ವಿಷ[...]ದಲ್ಲೂ ಈ ತೆರೆಮರೆಯ ನೀತಿ ನಿರ್ಣಯ [...] ಏಕೆಂದರೆ ರಾವ್ ಸರಕಾರ ಅಮೇರಿ[...] ನಿರಂತರ ಒತ್ತಡದೆದುರು ಕುಸಿದು ಭಾ[...] ಭದ್ರತಾ ಹಿತಾಸಕ್ತಿಗಳನ್ನು ಹಾಗೂ ಸಾರ್ವ[...]ಮತೆಯ ವಿಷಯದಲ್ಲಿ ರಾಜಿ ಮಾಡಿಕೊ[...]ತ್ತಿದೆ. ನಿಜವಾಗಿ ಈ ಒಪ್ಪಂದದ ಬಗ್ಗೆ ನರ[...]ಹರಾವ್‌ರವರ ಕಳೆದ ವರ್ಷದ ವಾಶಿಂ[...] ಭೇಟಿಯ ಕಾಲದಲ್ಲೇ ಸೂಚಿಸಲಾಗಿತ್ತು ಹಾ[...] ಪ್ರಧಾನಿಗಳು ಅದನ್ನು ಸ್ವೀಕರಿಸಿದ್ದರು ಎಂಬು[...] ಈಗ ಸ್ಪಷ್ಟವಾಗಿದೆ. ಪೆರಿಯವರು ತಮ್ಮ [...] ಭೇಟಿಕಾಲದಲ್ಲಿ ಇದನ್ನು ಹೊರಗೆಡಹಿದ್ದಾ[...]

ಅಮೇರಿಕಾ ಭಾರತ ಮತ್ತು ಪಾಕಿಸ್ತಾನಗಳ[...] ಸೇನಾ ಪಡೆಗಳ ಮೇಲೆ ಪ್ರಭಾವ ಹಾಗೂ[...] ಹತೋಟಿಯ ಮೂಲಕ ಈ ಎರಡೂ ದೇಶಗಳ ಮೇಲೆ ತನ್ನ ಯಜಮಾನಿಕೆ ಹೇರಿಸುವ ಗುರಿಸಾಧನೆಯನ್ನು ಬಹಿರಂಗವಾಗಿಯೇ ಮಾಡುತ್ತಿದೆ.

ನಿಜವಾಗಿಯೂ ಮಹಾತ್ಮ



ಕಾಲು ಶತಮಾನದ ಕಾಲ ಸ್ವಾತಂತ್ರ್ಯ ಹೋರಾಟದ ಮುಖಂಡನಾಗಿದ್ದ ವ್ಯಕ್ತಿ ಈರೀತಿ ಆಗಸ್ಟ್ 15, 1947ರಂದು ಗೆದ್ದುಕೊಂಡ ಸ್ವಾತಂತ್ರ್ಯ ತನ್ನ ಕನಸಿನ ಸ್ವಾತಂತ್ರ್ಯವಲ್ಲ, ಅಧಿಕಾರ ತನ್ನ ಈ ಹಿಂದಿನ ಶಿಷ್ಯರನ್ನು ಎಷ್ಟು ಸ್ವಾರ್ಥಪರರನ್ನಾಗಿಸಿದೆಯೆಂದರೆ ಕುಯುಕ್ತಿ ನಡೆಸುವವರನ್ನಾಗಿಸಿದೆ. ತಾನು ರೂಪಿಸಿದ ರಾಜಕೀಯ ಸಂಘಟನೆಯಾದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಮುಂದೆಯೂ ಇರುವ ಆಸೆ ಅವರಲ್ಲಿ ಉಳಿದಿರಲಿಲ್ಲ, ತನ್ನ ಜೀವನ ಧ್ಯೇಯ ವಿಫಲಗೊಂಡಿತು ಎಂದು ಅರಿತ, ಅದನ್ನು ಬಹಿರಂಗವಾಗಿ ಒಪ್ಪಿಕೊಂಡ ಮಹಾತ್ಮ ಅವರು ಎನ್ನುತ್ತಾರೆ ಇ.ಎಂ.ಎಸ್.

೧೯೯೪ರ ಅಕ್ಟೋಬರ್ 2 ರಂದು ಮಹಾತ್ಮಾ ಗಾಂಧಿ ಜೀವಿಸಿದ್ದರೆ ಅವರಿಗೆ 125 ವರ್ಷ ತುಂಬುತ್ತಿತ್ತು. ಅಂದು ದೇಶಾದ್ಯಂತ ಭಾರತದ ಸ್ವಾತಂತ್ರ್ಯ ಗುರಿ ಸಾಧನೆಯಲ್ಲಿ ಅವರ ಕಾಣಿಕೆಯನ್ನು ಹಾಡಿಹೊಗಳುವ ಭಾಷಣಗಳು ಕೇಳಬಂದವು. ಲೇಖನಗಳು ಪ್ರಕಟವಾದವು. ಅವರನ್ನು ರಾಷ್ಟ್ರಪಿತ, ಹೊಸ ಸ್ವತಂತ್ರ ಭಾರತದ ಒಕ್ಕೂಟದ ಸೃಷ್ಟಿಕರ್ತ ಎಂದೆಲ್ಲಾ ಹಾಡಿಹೊಗಳಲಾಯಿತು.

ಆದರೆ ನಿಜ ಸಂಗತಿಯೆಂದರೆ ಆಗಸ್ಟ್ 15, 1947 ರಂದು ಭಾರತದ ಸ್ವಾತಂತ್ರ್ಯದ ಅರುಣೋದಯವಾಗುತ್ತಿದ್ದಾಗ ನಡೆದ ಸಮಾರಂಭಗಳಲ್ಲಿ ಭಾಗವಹಿಸದೇ ಇದ್ದ ಒಬ್ಬ ವ್ಯಕ್ತಿಯೆಂದರೆ ಗಾಂಧೀಜಿ. ಈ ಬಗ್ಗೆ ಅವರ ಜೀವನ ಚರಿತ್ರೆ ಬರೆದ ತೆಂಡುಲ್ಕರ್ ಏನು ಹೇಳಿದ್ದಾರೆ ನೋಡಿ:-

"ನಾಡಿನಲ್ಲೆಡೆ ಹಬ್ಬದ ಸಡಗರ. ಆದರೆ ಭಾರತವನ್ನು ವಿದೇಶೀ ಆಳ್ವಿಕೆಯಿಂದ ಮುಕ್ತಗೊಳಿಸುವಲ್ಲಿ ಬೇರೆಲ್ಲರಿಗಿಂತಲೂ ಹೆಚ್ಚು ಕಾರಣನಾದ ವ್ಯಕ್ತಿ ಈ ಸಂತೋಷದಲ್ಲಿ ಪಾಲ್ಗೊಳ್ಳಲಿಲ್ಲ. ಭಾರತ ಸರಕಾರದ ವಾರ್ತಾ ಮತ್ತು ಪ್ರಸಾರ ಇಲಾಖೆಯ ಒಬ್ಬ ಅಧಿಕಾರಿ ಸಂದೇಶ ಪಡೆಯಲು ಬಂದಾಗ ಗಾಂಧೀಜಿಯ ಉತ್ತರ -ತಾನು ಬರಿದಾಗಿ ಹೋಗಿದ್ದೇನೆ ಎಂದು. ನೀವು ಸಂದೇಶ ನೀಡದಿದ್ದರೆ ಚೆನ್ನಾಗಿ ಕಾಣಿಸುವುದಿಲ್ಲ ಎಂದಾಗ ಗಾಂಧೀಜಿಯ ಉತ್ತರ -"ಯಾವುದೇ ಸಂದೇಶ ಇಲ್ಲ. ಆದರಿಂದ ಕೆಡುಕೆನಿಸುವುದಾದರೆ ಹಾಗೇ ಆಗಲಿ".

ಐದು ತಿಂಗಳ ನಂತರ ಜನವರಿ 26, 1948 ರಂದು ಕೊಲೆಯಾಗುವ ನಾಲ್ಕೇ ದಿನಗಳ ಮೊದಲು ಅವರು ಹೀಗೆ ಉದ್ಗರಿಸಿದರು,-

"ಈ ದಿನ, ಜನವರಿ 26 ಸ್ವಾತಂತ್ರ್ಯ ದಿನ. ಈ ದಿನಾಚರಣೆ ನಾವು ಕಾಣದ ಸ್ವಾತಂತ್ರ್ಯ[...] ಹೋರಾಡುತ್ತಿದ್ದಾಗ ಸೂಕ್ತವಾಗಿತ್ತು. ಈ[...] ನಾವು ಅದನ್ನು ಸ್ಪರ್ಶಿಸಿದ್ದೇವೆ. ಭ್ರಮನಿರಸನ[...]ದಂತಿದೆ. ನಿಮಗೆ ಆಗದಿದ್ದರೂ ಕನಿಷ್ಠ [...] ಗಂತೂ ಆಗಿದೆ."

ಹೀಗೆ ಭಾರೀ ಹಾಡಿ ಹೊಗಳಿದ "ಸ್ವಾ[...]ತ್ರ್ಯದ ಗಳಿಕೆ" ತಾನು ಸ್ವಾತಂತ್ರ್ಯ ಹೋರಾ[...] ನೇತೃತ್ವ ವಹಿಸಿದ್ದಾಗ ತನಗೆ ಅತಿಪ್ರಿಯವಾ[...] ಆದರ್ಶಗಳ ಈಡೇರಿಕೆ ಅಲ್ಲ ಎಂದು ಮೊ[...] ಮೊದಲು ಅರಿತ, ಅದನ್ನು ವ್ಯಕ್ತಪಡಿ[...] ಭಾರತೀಯನೆಂದರೆ ಮಹಾತ್ಮ ಗಾಂಧಿ. [...] ಕಾರಣ 1946-47 ರಲ್ಲಿ ಬ್ರಿಟಿಷ್ ಸರ[...] ಭಾರತದ ರಾಷ್ಟ್ರೀಯ ಕಾಂಗ್ರೆಸ್, ಮುಸ್ಲಿಂ ಲೀ[...] ಮತ್ತು ಇತರ ಪಕ್ಷಗಳೊಡನೆ ಮಾತು[...] ನಡೆಸುತ್ತಿದ್ದಾಗ ದೇಶವನ್ನೆಲ್ಲಾ ವ್ಯಾಪಿಸಿದ ಕೋ[...]ವಾದದ ಉನ್ಮಾದ. ಭಾರತದ ರಾಷ್ಟ್ರೀ[...] ಆಂದೋಲನದಲ್ಲಿ ಇಂತಹ ಉನ್ಮಾದ ಎಂ[...] ಕಂಡು ಬಂದಿರಲಿಲ್ಲ; ಹಿಂದೆಂದೂ ಒಂ[...] ಅಷ್ಟೊಂದು ಮುಸಲ್ಮಾನರು, ಇನ್ನೊಂದೆಡೆ ಹಿಂ[...]ಗಳು ಮತ್ತು ಸಿಖ್ಖರು ಆಗಸ್ಟ್ 15, 194[...] ಮೊದಲಿನ ಹಾಗೂ ನಂತರದ ಕೆಲವು ತಿಂ[...]ಗಳಲ್ಲಿ ನಡೆಸಿದಂತ ಪರಸ್ಪರ ಕಗ್ಗೊಲೆಗ[...] ನಡೆಸಿರಲಿಲ್ಲ.

ಭಾರತೀಯ ಜನತೆಗೆ ತಾನು ರೂ[...] ಕೊಟ್ಟ ದಾರಿ ದ್ವೇಷದ ದಾರಿಯಲ್ಲ, ಪ್ರೇ[...]

...ಮಾರಕ?

...ರಕ್ಷಣಾ ಒಪ್ಪಂದವನ್ನು ವಿರೋಧಿಸ... ಏಕೆಂದರೆ ಇದರಿಂದ ಅಮೇರಿಕಾದೊಂ... ಭಾರತದ ಹಿತಾಸಕ್ತಿಗೆ ಮಾರಕವಾದ ...ಥದ ಒಂದು ಚೌಕಟ್ಟಿನೊಳಗೆ ದೇಶ ...ಕೊಳ್ಳುತ್ತದೆ. ಅಮೇರಿಕಾ ಭಾರತದ ಸ್ವತಂತ್ರ ...ಣು ಹಾಗೂ ಕ್ಷಿಪಣಿ ತಂತ್ರಜ್ಞಾನವನ್ನು ...ಯುವ ನೀತಿಯನ್ನು ಮುಂದುವರಿಸುತ್ತಲೇ ...ಪೆರಿಯವರು ಈ ಭೇಟಿಯ ಕಾಲದಲ್ಲೂ ...ರಿಕ 'ಪೃಥ್ವಿ' ಸಮೀಪಗಾಮಿ ಕ್ಷಿಪಣಿ ...ಳಿಸುವುದನ್ನು ವಿರೋಧಿಸುವುದಾಗಿ ...ತ್ತಾಮ್ಮೆ ಒತ್ತಿ ಹೇಳಿದರು. ಈಗಲೂ ಪರ ...ಣು ಪ್ರಸರಣ ನಿಷೇಧ ಸಂಧಿ(NPT) ...ೂ ಕ್ಷಿಪಣಿ ತಂತ್ರ ಜ್ಞಾನ ವ್ಯವಸ್ಥೆಯ ...ಟ್ಟಿನಲ್ಲೇ ಭಾರತದ ಅಣು ಪ್ರಸರಣ ನಿಷೇಧ ...ೂ ಕ್ಷಿಪಣಿ ತಂತ್ರ ಬೆಳವಣಿಗೆಯನ್ನು ...ಯಲು ಒತ್ತಡ ಹಾಕು... ಅಮೇರಿಕಾ ಭಾರತ ...ತ್ತು ಪಾಕಿಸ್ತಾನಗಳ ...ಪಡೆಗಳ ಮೇಲೆ ...ವ ಹಾಗೂ ಹತೋ... ಮೂಲಕ ಈ ...ೂ ದೇಶಗಳ ಮೇಲೆ ...ಯಜಮಾನಿಕೆ ಹೊರಿ... ಗುರಿಸಾಧನೆಯನ್ನು ...ರಂಗವಾಗಿಯೇ ...ತುತ್ತಿದೆ.

...ಇಂತಹ ಅಮೇರಿಕಾ... ...ದಿಗೆ ಮಿಲಿಟರಿ ಸಹ... ಒಪ್ಪುವುದೆಂದರೆ ...ಏಷ್ಯಾ ಪ್ರದೇಶದ ಬಗ್ಗೆ ಅಮೇರಿಕಾದ ...ರಿಕ ದೃಷ್ಟಿಕೋಣವನ್ನು ಒಪ್ಪಿಕೊಂಡಂತೆ ...ಾ ಅದರೊಂದಿಗೆ ರಾಜಿ ಮಾಡಿಕೊಂಡಂ... ...ೆ. ಅಮೇರಿಕನ್ ರಕ್ಷಣಾ ಕಾರ್ಯದರ್ಶಿ ...ಗೆ ಬರುವ ಮೊದಲು ಇಸ್ಲಾಮಾಬಾದಿಗೆ ...ಗಿದ್ದ... ಪಾಕಿಸ್ತಾನದ ಪ್ರಧಾನಿ ಬೆನಜೀರ್ ...ಟ್ಟೋ ಈ ಭೇಟಿ ಅಮೇರಿಕಾ-ಪಾಕಿಸ್ತಾನ ...ಾ ಸಂಬಂಧಗಳ ಸುಧಾರಣೆಗೊಳ್ಳುತ್ತಿರುವು ...ಸಂಕೇತ, ಪ್ರೆಸ್ಲರ್ ತಿದ್ದುಪಡಿಯ ಮೂಲಕ ...ಸ್ತಾನವನ್ನು ಏಕಾಂಗಿಯಾಗಿಸಿದ ಪರಿಸ್ಥಿತಿ ಕೊನೆಗೊಳ್ಳುತ್ತಿದೆ ಎಂದು ವರ್ಣಿಸಿದ್ದಾರೆ. ...ತ್ತರ ದಶಕದಲ್ಲಿ 'ಸೆಂಟೋ' (CENTO) ...ಯ ದಿನಗಳಿಂದಲೇ ಅಮೇರಿಕಾ, ಪಾಕಿಸ್ತಾ... ...ನಡುವೆ ಆಳವಾದ ಸಂಬಂಧಗಳಿವೆ. ...ಫಾನಿಸ್ತಾನದಲ್ಲಿ ಅಮೇರಿಕನ್ ಸೇನಾ ವ್ಯವಸ್ಥೆ ...ಟಗಾನ್, ಸಿಐಎ ಮತ್ತು ಪಾಕಿಸ್ತಾನಿ ಮಿಲಿ... ಒಟ್ಟಾಗಿ ನಡೆಸಿದ ಕಾರ್ಯಾಚರಣೆಗಳಲ್ಲಿ ...ಸಂಬಂಧ ಬಹಳಷ್ಟು ನಿಕಟವಾಗಿದೆ.

...ಗತ್ಯವಾಗಿದ್ದ ಒಪ್ಪಂದ

...ಪಾಕಿಸ್ತಾನದಲ್ಲಿ ಅಮೇರಿಕಾ ಅಲ್ಲಿಯ ಸೇನಾ...ಗಳ ಮೂಲಕ ರಾಜಕೀಯ ಘಟನೆಗಳ...ಲೆ ಪ್ರಭಾವ ಬೀರುತ್ತಿದೆ. ಈಗ ರಾವ್ ಸರಕಾರ ಅಮೇರಿಕಾದೊಂದಿಗೆ ಒಂದು ರಕ್ಷಣಾ ಸಹಕಾರ ಒಪ್ಪಂದಕ್ಕೆ ಬರುವ ಮೂಲಕ ಭಾರತದಲ್ಲೂ ನಮ್ಮ ಸಶಸ್ತ್ರ ಪಡೆಗಳೊಂದಿಗೆ ಅಂತಹುದೇ ಒಂದು ಸಂಬಂಧ ಬೆಳೆಸಲು ಅಮೇರಿಕಾಕ್ಕೆ ಅವಕಾಶವನ್ನು ತೆರೆದಿಟ್ಟಿದೆ. ಭಾರತದ ರಕ್ಷಣಾ ವ್ಯವಸ್ಥೆಯೊಳಗೆ ಪೆಂಟಗಾನ್ ತೂರಿಕೊಳ್ಳಲು ನೀಡಿರುವ ಅವಕಾಶ ಭಾರತದ ರಾಜಕೀಯ ಹಾಗೂ ವಿದೇಶಾಂಗ ನೀತಿಯ ಮೇಲೆ ಅಗಾಧ ಪರಿಣಾಮ ಬೀರಲಿದೆ.

ಈಗಿನ ವಿಶ್ವ ಸನ್ನಿವೇಶದಲ್ಲಿ ಭಾರತ ಅಮೇರಿಕಾದೊಂದಿಗೆ ಈ ರೀತಿ ಅಸಮಾನ ಕರಾರುಗಳ ಮೇಲೆ ಒಂದು ದೀರ್ಘಾವಧಿ ಒಪ್ಪಂದ ಮಾಡಿಕೊಳ್ಳುವ ಅಗತ್ಯವೇ ಇಲ್ಲ. ಏಕೆಂದರೆ ಭಾರತಕ್ಕೆ ತನ್ನ ಭದ್ರತಾ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲು ಸಾಕಷ್ಟು ಬೇರೆ ಅವಕಾಶಗಳು ಇವೆ. ರಶ್ಯಾದೊಂದಿಗೆ ರಕ್ಷಣಾ ಉತ್ಪಾದನಾ ಸಹಕಾರ ಮುಂದುವರಿಯುತ್ತಿರುವುದರ ಮಹತ್ವ ಕಮ್ಮಿಯೇನಲ್ಲ. ಇತ್ತೀಚಿನ ಇನ್ನೊಂದು ಘಟನೆಯೂ ಅಮೇರಿಕಾದೊಂದಿಗೆ ಇಂತಹ ಒಪ್ಪಂದ ಅನಗತ್ಯವಾಗಿತ್ತು ಎಂಬುನ್ನು ತೋರಿಸುತ್ತದೆ. ಭಾರತ ಚೀಣಾದೊಂದಿಗೆ ತಾರಾಪುರ ಅಣು ಸ್ಥಾವರಕ್ಕೆ ಯುರೇನಿಯಂ ಯರವಲು ಪಡೆಯುವ ಬಗ್ಗೆ ಒಪ್ಪಂದ ಮಾಡಿಕೊಂಡಿದೆ. ಅಮೇರಿಕಾ ಮತ್ತು ಫ್ರಾನ್ಸ್ ಈ ಇಂಧನ ನೀಡಲು ನಿರಾಕರಿಸುತ್ತಿದ್ದವು. ಭಾರತ ಅಣು ಪ್ರಸರಣ ನಿಷೇಧ ಸಂಧಿ (NPT) ಪ್ರಕಾರ ತನ್ನ ಇಡೀ ಅಣು ಶಕ್ತಿ ಕಾರ್ಯಕ್ರಮಕ್ಕೆ ಪೂರ್ಣ ಪ್ರಮಾಣದ ಭದ್ರತಾ ಕರಾರುಗಳನ್ನು ಸ್ವೀಕರಿಸಬೇಕು ಎಂದು ಅವು ಶರತ್ತು ಹಾಕುತ್ತಿದ್ದವು. ಇಂತಹ ಸನ್ನಿವೇಶದಲ್ಲಿ ಅಮೇರಿಕಾದ ದಕ್ಷಿಣ ಏಷ್ಯಾ ಭದ್ರತಾ ಯೋಜನೆಗಳಲ್ಲಿ ಭಾರತವನ್ನು ಸೆಳೆದುಕೊಳ್ಳಲು ಅದಕ್ಕೆ ಅವಕಾಶ ನೀಡಿ ರಾವ್ ಸರಕಾರ ಭಾರತದ ಸ್ವತಂತ್ರ ಧೋರಣೆಗಳಿಗೆ, ಆಯ್ಕೆಗಳಿಗೆ ಸಂಚಕಾರ ತಂದಿದೆ.

ಭಾರತ-ಅಮೇರಿಕಾ ಮಿಲಿಟರಿ ಸಹಕಾರ ಈ ರೀತಿ ಹೆಚ್ಚುತ್ತಿರುವ ಬಗ್ಗೆ ದೊಡ್ಡ ಬಂಡವಾಳಶಾಹೀ ಪತ್ರಿಕೆಗಳಲ್ಲಾಗಲೀ, ಬಂಡವಾಳಶಾಹಿ ರಾಜಕೀಯ ವಲಯಗಳಲ್ಲಾಗಲೀ ಗಂಭೀರ ವಿರೋಧ ಕಾಣಿಸಿಕೊಂಡಿಲ್ಲ. ಅಲ್ಲಲ್ಲಿ ಗೊಣಗಾಟ ಕಂಡು ಬಂದಿದೆಯಷ್ಟೆ. ಆರ್ಥಿಕ ಉದಾರೀಕರಣದ ಬಗ್ಗೆ ಹಾಗೂ ಅದನ್ನು ಈಡೇರಿಸಿಕೊಳ್ಳಲು, ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಆಳುವ ವರ್ಗಗಳಲ್ಲಿ ಎಂತಹ ಒಮ್ಮತ ಇದೆ ಎಂಬುದಕ್ಕೆ ಇದೇ ಸಾಕ್ಷಿ.

ಉದಾರೀಕರಣದ ಅಪಾಯಕಾರೀ ದುಷ್ಫಲ

ನಮ್ಮ ವಿದೇಶಾಂಗ ನೀತಿಯಲ್ಲಿ ಭದ್ರತಾ ಸಂಬಂಧಗಳು, ಇತರ ಪ್ರಮುಖ ಬದಲಾವಣೆಯ ಹಿಂದಿರುವ ಸಂಗತಿಯೆಂದರೆ ನರಸಿಂಹ ರಾವ್ ಸರಕಾರ ಅನುಸರಿಸುತ್ತಿರುವ ಆರ್ಥಿಕ ಉದಾರೀಕರಣದ ನೀತಿಗಳು. ನಮ್ಮ ವಿದೇಶಾಂಗ ನೀತಿಯ ಮೇಲೆ ಹೆಚ್ಚುತ್ತಿರುವ ಅಮೇರಿಕಾದ ಆರ್ಥಿಕ ಹಾಗೂ ರಾಜಕೀಯ ಪ್ರಭಾವ ಈಗ ರಾಷ್ಟ್ರೀಯ ಭದ್ರತೆಯ ವಿಷಯಗಳಿಗೂ

ಪುಟ 8 ನೋಡಿ

ಸಾಮ್ರಾಜ್ಯಶಾಹಿಗಳ ಸಂಭ್ರಮದ ಆಕ್ರಮಣ

ಅಮೆರಿಕಾದ ವಾಣಿಜ್ಯ ಕಾರ್ಯದರ್ಶಿ ರೊನಾಲ್ಡ್ ಬ್ರೌನ್ ಅವರ ನೇತೃತ್ವದ ನಿಯೋಗ ಭಾರತಕ್ಕೆ ಭೇಟಿ ನೀಡಿದೆ. ವ್ಯಾಪಾರದ ಹೆಸರಿನಲ್ಲಿ ಲೂಟಿ ಹೊಡೆವ ಏಕೈಕ ಉದ್ದೇಶದ ಈ ಸಾಮ್ರಾಜ್ಯಶಾಹಿಗಳ ನಿಯೋಗ ನಮ್ಮ ಉದಾರೀಕರಣದ ನೀತಿಗಳಿಂದ ಖುಷಿಯಾಗಿ ಅಟ್ಟಹಾಸದಿಂದ ಕೇಕೆ ಹಾಕುತ್ತಿದೆ. ಅಮೆರಿಕಾದ ಅಧ್ಯಕ್ಷ ಬಿಲ್ ಕ್ಲಿಂಟನ್ನರೇ ಸ್ವತಃ ಈ ನಿಯೋಗದ ಸದಸ್ಯರು. ವಿಮಾನವೇರುವ ಮೊದಲು ಅವರೆಲ್ಲರ ಕೈಕುಲುಕಿ ಬೀಳ್ಕೊಟ್ಟರಂತೆ. ಇದು ಈ ನಿಯೋಗದ ಭೇಟಿಗೆ ಅಮೆರಿಕಾ ನೀಡುತ್ತಿರುವ ಪ್ರಾಮುಖ್ಯತೆಯನ್ನು ಸೂಚಿಸುತ್ತದೆ.

ಅಮೆರಿಕಾದ ಉದ್ದಿಮೆಪತಿಗಳಿಗೆ ಅಂದರೆ ಬಹುರಾಷ್ಟ್ರೀಯ ಕಂಪನಿಗಳಿಗೆ ಅಪಾರ ಲಾಭ ತಂದು ಕೊಡುವ ಉದಾರೀಕರಣವನ್ನು ಈ ನಿಯೋಗ ಹೊಗಳಿದ್ದೇ ಹೊಗಳಿದ್ದು. ತಮ್ಮ ವ್ಯಾಪಾರ ಆಸಕ್ತಿಗಳು ತಮ್ಮ ಕಾಳಜಿಗಳು ಇವುಗಳ ಬಗ್ಗೆಲ್ಲ ಮಾತನಾಡಿದ ಈ ನಿಯೋಗ ಪ್ರಧಾನ ಮಂತ್ರಿ ನರಸಿಂಹರಾಯರಿಗೆ ಒಳ್ಳೆಯ ಪ್ರಧಾನಿ ಎಂಬ ಸರ್ಟಿಫಿಕೇಟನ್ನೂ ನೀಡಿಬಿಟ್ಟಿದೆ.

ಇದರ ಜೊತೆಗೇ ಇನ್ನೂ ಒಂದು ಸಲಹೆ ನೀಡಲು ಅದು ಮರೆತಿಲ್ಲ. ಉದಾರೀಕರಣದ ವೇಗವನ್ನು ಇನ್ನೂ ಬಹಳ ಹೆಚ್ಚಿಸಬೇಕೆಂಬುದೇ ಆ ಸಲಹೆ. ಹಾಗೆ ಮಾಡದಿದ್ದರೆ ಉದಾರೀಕರಣದ ಲಾಭ ಭಾರತಕ್ಕೆ ದೊರೆಯುವುದಿಲ್ಲವಂತೆ.

ನಾಲ್ಕು ಶತಕೋಟಿ ಡಾಲರುಗಳ ವ್ಯವಹಾರದ ಒಪ್ಪಂದಗಳಿಗೂ ಆಗಲೇ ಸಹಿ ಬಿದ್ದಿದೆ. ಇನ್ನೂ ಹದಿನಾರು ಶತಕೋಟಿ ಡಾಲರುಗಳ ಬಂಡವಾಳ ವಿವಿಧ ಒಪ್ಪಂದಗಳ ಮೂಲಕ ಹರಿದು ಬರಲಿದೆ ಎಂಬುದೂ ತೀರ್ಮಾನವಾಗಿದೆಯಂತೆ.

ಚೀನಾ ಮತ್ತು ಭಾರತ ಎರಡೂ ಅಮೆರಿಕಕ್ಕೆ ಅಷ್ಟೇ ಮುಖ್ಯವಾದವು ಆದರೆ ಜಗತ್ತಿನ ಅತ್ಯಂತ ದೊಡ್ಡ ಪ್ರಜಾಪ್ರಭುತ್ವವಾದ ಭಾರತಕ್ಕೆ ಹೆಚ್ಚು ಸ್ಥಾನಮಾನ ಎಂದೆಲ್ಲ ಅವರು ಹೇಳಿದ್ದಾರೆ. ತಮ್ಮ ಲಾಭ ಹೆಚ್ಚಿಸುವ ಎಲ್ಲವನ್ನೂ ಉತ್ತಮವೆಂದು ವೈಭವೀಕರಿಸುವ ಸಾಮ್ರಾಜ್ಯಶಾಹಿಗಳಿಗೆ ಭಾರತ ಯಾವುದೇ ಚೌಕಾಸಿಯಿಲ್ಲದೆ ಅಮೇರಿಕದ ತೆಕ್ಕೆಗೆ ತನ್ನ ಮಾರುಕಟ್ಟೆಯನ್ನೂ ತಳ್ಳುತ್ತಿರುವುದು ರೋಮಾಂಚನ ಮೂಡಿಸಿರಬೇಕು. ಆದ್ದರಿಂದಲೇ ಇಷ್ಟೊಂದು ಹೊಗಳಿಕೆ ಅಲ್ಲವೆ?

ಒಲೆಯ ಮುಂದೆ ಪೌರುಷ

ಇದೇ ಸಂದರ್ಭದಲ್ಲಿ ನಮ್ಮ ಕೇಂದ್ರ ವಾಣಿಜ್ಯ ಮಂತ್ರಿ ಪ್ರಣವ್ ಮುಖರ್ಜಿಯವರು ಉತ್ತರನ ಪೌರುಷ ಮೆರೆದಿದ್ದಾರೆ. ಬ್ರೌನ್ ಜೊತೆಗೆ ಸಭೆಯೊಂದನ್ನು ಉದ್ದೇಶಿಸಿ ಮಾತನಾಡಿದ ಅವರು ನಾವು ನಮ್ಮ ದೇಶದ ಉತ್ಪನ್ನಗಳಿಗೆ ಅಮೆರಿಕಾ ತನ್ನ ಮಾರುಕಟ್ಟೆ ತೆರೆಯುವಂತೆ ಕೇಳಿದ್ದೇವೆ ಎಂದಿದ್ದಾರೆ. ಇದರಿಂದ ಈಗಾಗಲೇ ಇರುವ ದ್ವಿಮಾರುಕಟ್ಟೆ ಲಭ್ಯತೆಗಿಂತ ಹೆಚ್ಚಿನ ಲಭ್ಯತೆ ನಮ್ಮ ಉತ್ಪನ್ನಗಳಿಗೆ ಅಮೆರಿಕಾದಲ್ಲಿ ದೊರೆಯಬೇಕು ಎಂಬುದು ಅವರ ವಾದ.

ಸಾಮ್ರಾಜ್ಯಶಾಹಿಗಳ ಮೋಸದ ವ್ಯವಹಾರಗಳ ಬಗೆಗೆ ಅಲ್ಪ ಸ್ವಲ್ಪ ಅರಿವಿರುವ ಯಾರಾದರೂ ಈ ಸಾಧ್ಯತೆ ಇಲ್ಲವೇ ಅಲ್ಲ ಎಂಬುದನ್ನು ಹೇಳುತ್ತಾರೆ. ಅಮೆರಿಕನ್ನರು ವ್ಯಾಪಾರದಲ್ಲಿ ಮುಕ್ತತೆಯ ಬಗ್ಗೆ ಮಾತನಾಡುತ್ತಲೇ ನಿಬಂಧನೆಗಳನ್ನು ಬೇರೆಯವರ ಮೇಲೆ ಈ ರೀತಿ ಹೇರಿದ್ದನ್ನು ಉತ್ತಮ ಗುಣಮಟ್ಟ, ತಂತ್ರಜ್ಞಾನ, ಸಾಮಾಜಿಕ ನ್ಯಾಯ ಇತ್ಯಾದಿ ಕಾರಣಗಳನ್ನು ನೀಡಿ ವಿವರಿಸಿ ವೈಭವೀಕರಿಸಬಲ್ಲವರು ಅವರು.

ಆದ್ದರಿಂದಲೇ ಗ್ಯಾಟ್‌ಗೆ ಸಹಿ ಮಾಡಿದ ಮೇಲೆ ಭಾರತ ಅಲ್ಪಸ್ವಲ್ಪ ರಫ್ತು ಹೆಚ್ಚಳ ಸಾಧಿಸಬಹುದು. ಆದರೆ ಅಮೆರಿಕಾದಂತಹ ದೇಶಗಳಿಂದ ಆಮದು ತೀವ್ರವಾಗಿ ಹೆಚ್ಚುತ್ತಿದೆ. ಅಂದರೆ ಅವರ ಉತ್ಪನ್ನಗಳಿಗೆ ನಮ್ಮ ಮಾರುಕಟ್ಟೆ ತೆರೆಯುತ್ತದೆ. ಆದರೆ ನಮ್ಮ ಉತ್ಪನ್ನಗಳಿಗೆ ಅವರ ಮಾರುಕಟ್ಟೆ ಹಿಗ್ಗುವುದಿಲ್ಲ. ಇದೂ ಅರ್ಥವಾಗದಷ್ಟು ಮುಗ್ಧರೇ ಪ್ರಣವ್ ಮುಖರ್ಜಿ. ಖಂಡಿತವಾಗಿಯೂ ಇದು ಧಣಿಗಳ ಎದುರು ಡೊಗ್ಗು ಸಲಾಮಲ್ಲವೇ?

ರೋಗ ಬಂದರೆ "ಮಕ್ಕಳು ನಮ್ಮವಲ್ಲ"

ಹೀಗೆ ಹೇಳಲು ಸಾಧ್ಯವೇ ಎಂದು ಕೇಳಬಹುದು ನೀವು. ಯಾವ ತಂದೆ ತಾಯಿಯೂ ತಮ್ಮ ಮಕ್ಕಳ ಬಗ್ಗೆ ಈ ರೀತಿ ಮಾತನಾಡುವುದಿಲ್ಲ. ಇದು ವ್ಯಕ್ತಿಗಳ ಬಗೆಗಿನ ಮಾತಲ್ಲ ಕಂಪನಿಗಳ ಮಾತು.


ಸಿಮನ್ ಕಾರ್ವ್ಸ್ ಎಂಬ ಬ್ರಿಟನ್ನಿನ ಕಂಪನಿಯೊಂದು ಭಾರತದಲ್ಲಿ ಸಿಮನ್ ಕಾರ್ವ್ ಇಂಡಿಯಾ ಲಿ ಎಂಬ ಕಂಪನಿ ಪ್ರಾರಂಭಿಸಿತು. ಜೆಮ್‌ಶೆಡ್‌ಪುರ ಮತ್ತು ಪ.ಬಂಗಾಳದ ೨೪ ಪರಗಣ ಜಿಲ್ಲೆಯಲ್ಲಿ ಎರಡು ಕಾರ್ಖಾನೆಗಳನ್ನು ಈ ಕಂಪನಿ ಹೊಂದಿದೆ.

ಈ ಕಂಪನಿ ರೋಗಗ್ರಸ್ತವಾಯಿತು. ಪ್ರಕರಣ BIFR(ಉದ್ದಿಮೆ ಮತ್ತು ಹಣಕಾಸು ಪುನರ್ನಿರ್ಮಾಣಮಂಡಳಿ)ಗೆ ಬಂತು. ಆಗ ಬ್ರಿಟನ್ನಿನ ಪಿತೃ ಕಂಪನಿಯಾದ ಸಿಮನ್ ಕಾರ್ವ್ಸ್ ಈ ಕಂಪನಿಯನ್ನು ಪುನರುಜ್ಜೀವನಗೊಳಿಸುವಲ್ಲಿ ತನಗೆ ಆಸಕ್ತಿ ಇಲ್ಲ ಎನ್ನುತ್ತಿದೆ.

ಹೇಗಿದೆ ಈ ವಾದ? ಲಾಭ ಬಂದರೆ ತನಗೆ, ಹಾನಿಯಾದರೆ ಬೇರೆಯವರಿಗೆ!

ಹಣಕಾಸು ವಲಯ ಇದೊ ತೆರೆದಿದೆ ನಿಮಗೆ?

ಇದನ್ನು ಅಮೆರಿಕಾದ ವಾಣಿಜ್ಯ ನಿಯೋಗಕ್ಕೆ ನಮ್ಮ ಕೇಂದ್ರ ಹಣಕಾಸು ಮಂತ್ರಿ ಡಾ.ಮನಮೋಹನಸಿಂಗರು ಹೇಳಿದ್ದಾರೆ. ಈಗಾಗಲೇ ಸಾಮ್ರಾಜ್ಯಶಾಹಿಗಳ ಸೇವೆಗಾಗಿ ಹಣಕಾಸು ವಲಯವನ್ನು ಸಾಕಷ್ಟು ತೆರೆದಿರುವ ಈ ಮಹಾಶಯರು ಈಗ ಈ ವಲಯವನ್ನು ಪೂರ್ಣವಾಗಿ ತೆರೆದ ಮಾತನ್ನೂ ಆಡುತ್ತಿದ್ದಾರೆ. ಈಗಾಗಲೇ ಷೇರುಹಗರಣದ ಹರಿಕಾರರಾಗಿ ನಡೆದುಕೊಂಡು ಷೇರು ಹಗರಣ ಉಂಟುಮಾಡಿದ ವಿದೇಶೀ ಬ್ಯಾಂಕುಗಳು ಯಾವುದೇ ಶಿಕ್ಷೆ ಅನುಭವಿಸದೆ ಕೊಬ್ಬಿದೆ. ಕೆಲವೇ ಶಾಖೆಗಳನ್ನು ಹೊಂದಿರುವ ಈ ಬ್ಯಾಂಕುಗಳು ದಿನನಿತ್ಯ ಹಗರಣಗಳನ್ನು ಹುಟ್ಟಿ ಹಾಕುತ್ತಿದ್ದಾರೆ.



ಹಾಗೆಯೇ ವಿಮಾರಂಗದಲ್ಲಿ ನುಗ್ಗಿ ದೇಶದ ಸಂಪತ್ತನ್ನೂ ಕೊಳ್ಳೆ ಹೊಡೆವ ತರಾತುರಿಯಲ್ಲಿ ಸಾಮ್ರಾಜ್ಯಶಾಹಿಗಳಿದ್ದಾರೆ. ಅವರಿಗೆ ಬೆಂಗಾವಲಾಗಿ ನಿಂತು ದೇಶವನ್ನು ಪೂರ್ಣ ಕೊಳ್ಳೆ ಹೊಡೆಸಲು ಸನ್ನದ್ಧರಾಗಿ ನಿಂತಿದ್ದಾರೆ ನಮ್ಮ ಕೇಂದ್ರ ಹಣಕಾಸು ಮಂತ್ರಿಗಳು.

ಬತ್ತುತ್ತಿರುವ ಕಾಮಧೇನುಗಳು

ಸಾರ್ವಜನಿಕ ವಲಯದ ಉದ್ದಿಮೆಗಳೆಂಬ ಕಾಮಧೇನುಗಳು ಬತ್ತುತ್ತಿವೆ. ದೇಶದ ಒಟ್ಟು ಹಣಹೂಡಿಕೆಯಲ್ಲಿ 1993ರ ಡಿಸೆಂಬರ್ ವೇಳೆಗೆ ಸಾರ್ವಜನಿಕ ವಲಯದ ಪಾಲು ಶೇ.61ರಷ್ಟಿತ್ತು. ಒಂದು ವರ್ಷದ ನತರ ಅಂದರೆ 1994ರ ಡಿಸಂಬರ್ ಕೊನೆಯ ವೇಳೆಗೆ ಈ ಪಾಲು ಶೇ. 41.5 ರಷ್ಟಕ್ಕೆ ಇಳಿದಿದೆ.

ಉದಾರೀಕರಣದಡಿ ಖಾಸಗೀಕರಣ ಯಾವ ವೇಗದಲ್ಲಿ ಆಗುತ್ತಿದೆ ಎಂಬ ಸೂಚನೆ ನೀಡುವ ಇದು ಖಾಸಗಿಯವರ ಸಂಪತ್ತು ಹೆಚ್ಚಿಸುವ ಸೂಚನೆಯೂ ಹೌದು.

ಉದಾರೀಕರಣದಡಿ ಬಡವರು ಹೊಟ್ಟೆ ತುಂಬ ಊಟ ಮಾಡುತ್ತಾರೆ

ಇದು ಒಂದು ಸರ್ಕಾರೀ ಅಧ್ಯಯನ ಕಂಡಿರುವ ಸತ್ಯ. ಅಧ್ಯಯನಗಳನ್ನು ಆಳುವ ವರ್ಗದ ಯೋಚನಾಲಹರಿಗೆ ತಕ್ಕಂತೆ ಹೇಗೆ ತಿರುಚಬಹುದೆಂಬುದಕ್ಕೆ ಇದೊಂದು ಉದಾಹರಣೆ.

ಈ ಸರ್ಕಾರೀ ಅಧ್ಯಯನದ ಪ್ರಕಾರ ಉದಾರೀಕರಣ ಬಂದ ಮೇಲೆ ಬಡವರು ಎರಡು ಹೊತ್ತು ಊಟ ಮಾಡುತ್ತಾರಂತೆ. ಸರ್ಕಾರದ್ದೇ ಇನ್ನೊಂದು ಅಧ್ಯಯನ ದೇಶದಲ್ಲಿ 1990ರಿಂದೀಚೆಗೆ ಬಡತನ ಹೆಚ್ಚಿದೆ ಎಂದು ಹೇಳಿದೆ. ಆದರೆ ಈ ಅಧ್ಯಯನ ಹೀಗೆ ಹೇಳುತ್ತಿದೆ. ಯಾವುದುನಿಜ?

ಈ ಗೊಂದಲ ಹುಟ್ಟಿಸುವುದೇ ಅಧ್ಯಯನದ ಉದ್ದೇಶವಿರಬಹುದು. ಬರೀ ಹೊಟ್ಟೆ ತುಂಬಿದವರನ್ನೇ ಪ್ರಶ್ನಾವಳಿಗೆ ಉತ್ತರ ನೀಡುವಂತೆ ಮಾಡಿದರೆ ಇಂತಹ ಉತ್ತರ ಬರುವುದೂ ಸಹಜವೇ ಇವರಿಗೇ ಬಡವರು ಎಂದು ಹಣಪಟ್ಟಿ ಹಚ್ಚಿದರೆ ಕೆಲಸ ಸುಲಭವಾಯಿತಲ್ಲವೇ? ಎಂತಹ ಸೃಜನಶೀಲತೆ ಅಲ್ಲವೆ?

ಇ.ಎಂ.ಎಸ್. ನಂಬೂದರಿಪ್ಪಾಡ್

...ಎಂದು ಗಾಂಧೀಜಿ ಸದಾ ಹೇಳಿಕೊಳ್ಳು...ರು. ಈ ದಾರಿಯನ್ನು ಆರಿಸಿದರೆ ದೇಶದ ...ಹಿಂಸಾಚಾರಿ ಹಾಗೂ ಅಮಾನುಷ ಶೋಷ...ದ ಬ್ರಿಟಿಷ್ ಸಾಮ್ರಾಜ್ಯಶಾಹಿಗಳಲ್ಲೂ ಹೃದಯ...ವರ್ತನೆ ತರಲು ಸಾಧ್ಯ ಎಂದು ಅವರು ...ತುತ್ತಿದ್ದರು.

...ನಿಜ ಹೇಳಬೇಕೆಂದರೆ ಆಗಸ್ಟ್ 15 ರ ...ದು ತಿಂಗಳ ಮೊದಲು ಜುಲೈ 14 ರಂದು ...ದ 30 ವರ್ಷಗಳಲ್ಲಿ ನಾವು ಆಚರಿಸಿದ್ದು ...ಂಸಾತ್ಮಕ ಪ್ರತಿರೋಧವಲ್ಲ, ನಿಷ್ಕ್ರಿಯ ಪ್ರತಿ...ಧ. ಇದು ಕೇವಲ ದುರ್ಬಲರು ಮಾಡುವ ...ಸ, ಏಕೆಂದರೆ ಅವರು ಹಾಗೆ ಮಾಡುವುದು ...ಸ್ತ್ರ ಪ್ರತಿರೋಧ ಮಾಡಲು ಸಿದ್ಧರಿಲ್ಲ ಎಂದಲ್ಲ, ...ತಹ ಪ್ರತಿರೋಧ ಅವರಿಂದ ಸಾಧ್ಯವಿಲ್ಲ ...ದು. ಅಹಿಂಸಾತ್ಮಕ ಪ್ರತಿರೋಧ ಉಕ್ಕಿನ ...ದಯದವರಿಂದ ಮಾತ್ರ ಸಾಧ್ಯ ಎಂದು ...ಗೆ ಗೊತ್ತಿದ್ದರೆ ನಾವು ಸ್ವತಂತ್ರ ಭಾರತದ ...ಜಗತ್ತಿಗೆ ಸಂಪೂರ್ಣ ಭಿನ್ನವಾದ ಒಂದು ...ನೀಡಬಹುದಾಗಿತ್ತು; ಇಬ್ಭಾಗವಾಗಿ ತುಂಡ...ದ, ಒಂದು ಭಾಗ ಇನ್ನೊಂದು ಭಾಗದ ಬಗ್ಗೆ ...ಶಯಪೀಡಿತವಾಗಿರುವ ಒಂದು ...ದ ಚಿತ್ರವನ್ನು ನೀಡಬೇಕಾಗುತ್ತಿರಲಿಲ್ಲ; ...ದ, ನಗ್ನವಾಗಿರುವ, ಜೀವನದ ಅವಶ್ಯಕತೆ...ರೂಪದಲ್ಲಿರುವ ದೇವರನ್ನು ಬಿಟ್ಟು ಬೇರಾವ ...ವನ್ನೂ ಅರಿಯದ ಕೋಟಿಗಟ್ಟಲೆ ಜನ ಅನ್ನ, ಬಟ್ಟೆಯ ಬಗ್ಗೆ ಸುಸಂಗತವಾಗಿ ಯೋಚಿಸಲೂ ವ್ಯವಧಾನವಿಲ್ಲದಷ್ಟು ಪರಸ್ಪರ ಹೊಡೆದಾಡುವ ಭಾಗಗಳೆಂಬ ಒಂದು ಚಿತ್ರವನ್ನು ನೀಡಬೇಕಾಗುತ್ತಿರಲಿಲ್ಲ."

ಎಂದು ಅವರು ಹೇಳಿದ್ದರು.

ಇಷ್ಟೇ ಅಲ್ಲ, ತನ್ನ ಜೀವನದ ಕೊನೆಯ ಕ್ಷಣದ ವರೆಗೂ, ತನ್ನ ಶಕ್ತಿಯ ಕೊನೆಯ ತೊಟ್ಟಿರುವವರೆಗೂ ತನಗೆ ಸರಿಯೆನಿಸಿದ ರೀತಿಯಲ್ಲಿ ಕೋಮುವಾದದ ವಿರುದ್ಧ ಗಾಂಧೀಜಿ ಹೋರಾಡುತ್ತಲೇ ಇದ್ದರು. ದೇಶಾದ್ಯಂತ ಹರಡುತ್ತಿದ್ದ ಅಪಾಯಕಾರಿ ಕೋಮು ಉನ್ಮಾದದ ಮೊದಲ ಲಕ್ಷಣ ಕಂಡು ಬಂದ ಕ್ಷಣದಿಂದಲೇ, ಮುಸ್ಲಿಂ ಲೀಗ್ "ನೇರ ಕಾರ್ಯಾಚರಣೆ ದಿನ" ಎಂದು ಘೋಷಿಸಿದ ಆಗಸ್ಟ್ 16, 1946 ರಂದು ಕಲ್ಕತ್ತೆಯಲ್ಲಿ ಮೊದಲ ಕೋಮುದಂಗೆ ಭುಗಿಲೆದ್ದ ದಿನದಿಂದಲೇ ಅವರು ಕೋಮು ಸೌಹಾರ್ದತೆ ಉಪದೇಶಿಸುವ ಕೆಲಸದಲ್ಲಿ ತಲ್ಲೀನರಾದರು.

ದಂಗೆಗಳು ನಗರಗಳಿಂದ ಗ್ರಾಮಗಳಿಗೆ ಹರಡಲಾರಂಭಿಸಿದಾಗ ಐಕ್ಯತೆಯ ತನ್ನ ಸಂದೇಶ ಹರಡಿಸಲು ಅವರು ಬೇರೆಲ್ಲಾ ಚಟುವಟಿಕೆಗಳನ್ನು ಬಿಟ್ಟರು, ಬಂಗಾಳದ ನೌಖಾಲಿ ಜಿಲ್ಲೆಯಲ್ಲಿ ಈ ಉದ್ದೇಶದಿಂದಲೇ ಹಲವು ವಾರಗಳನ್ನು ಕಳೆದರು; ಹಳ್ಳಿಯಿಂದ ಹಳ್ಳಿಗೆ ಹೋದರು; ಅದೇ ಉದ್ದೇಶದಿಂದಲೇ ನೌಖಾಲಿ ಬಿಟ್ಟು ಬಿಹಾರದತ್ತ ನಡೆದರು; ಪಂಜಾಬಿಗೆ ಹೋಗಬಯಸಿದರು, ಕಲ್ಕತ್ತೆಗೆ ಹೋದರು, ಮತ್ತೆ ದಿಲ್ಲಿಗೆ ಹೋದರು. ಕೋಮು ಉನ್ಮಾದದ ವಿರುದ್ಧ ಹೋರಾಟ, ದಂಗೆಗೆ ಬಲಿಯಾದವರ ರಕ್ಷಣೆ, ನಿರಾಶ್ರಿತರ ಪೋಷಣೆ ಇತ್ಯಾದಿಗಳು ಅವರ ದೈನಂದಿನ ಪ್ರಾರ್ಥನೆಯ ನಂತರದ ಭಾಷಣಗಳ ಪ್ರಮುಖ ವಿಷಯಗಳಾದವು.

ಎರಡು ಕೋಮುಗಳ ನಡುವೆ ಸಂಬಂಧಗಳು ಎಷ್ಟು ಕೆಟ್ಟಿದ್ದವು ಎಂದರೆ ಕೋಮು ಐಕ್ಯತೆ ತರಲು ಪ್ರಯತ್ನಿಸುವ ಯಾರೇ ಆದರೂ ಎರಡೂ ಕಡೆಗಳ ಮತಾಂಧರ ದ್ವೇಷ ಸಂಪಾದಿಸಬೇಕಾಗಿತ್ತು ಎಂದು ಗಾಂಧೀಜಿಗೆ ತಿಳಿದಿತ್ತು. ಕೋಮು ಉನ್ಮಾದ ಎದುರಿಸುವಲ್ಲಿ ತಾನೂ ಕೂಡಾ ವೈಯಕ್ತಿಕ ಅಪಾಯಕ್ಕೆ ಕೈ ಹಾಕುತ್ತಿದ್ದೇನೆ ಎಂದು ಅವರಿಗೆ ತಿಳಿದಿತ್ತು. ಜನವರಿ 28 ರಂದು ರಾಜಕುಮಾರಿ ಅಮೃತ್ ಕೌರ್‌ರೊಡನೆ ಮಾತನಾಡುವಾಗ "ಒಬ್ಬ ಹುಚ್ಚನ ಗುಂಡಿನಿಂದ ಸಾಯುವ" ಸಾಧ್ಯತೆಯ ಬಗ್ಗೆ ಹೇಳಿದ್ದರು. ಹಾಗಾದಾಗ ತಾನು "ನಗುತ್ತಾ ಸಾಯುತ್ತೇನೆ. ನನ್ನೊಳಗೆ ಯಾವ ಸಿಟ್ಟು ಇರಬಾರದು. ದೇವರು ನನ್ನ ಹೃದಯ ಮತ್ತು ನಾಲಗೆಯಲ್ಲಿರಬೇಕು" ಎಂದಿರುವುದನ್ನು ಈಗ ಖಿನ್ನತೆಯಿಂದ ನೆನಪಿಸಿಕೊಳ್ಳಬೇಕಾಗಿದೆ. ಏಕೆಂದರೆ ಕೇವಲ ಎರಡು ದಿನಗಳ ನಂತರ ಅದೇ ನಡೆಯಿತು.

ಗಾಂಧೀಜಿಯದ್ದು ಇನ್ನೂ ಒಂದು ವಿಶಿಷ್ಟತೆಯಿದೆ. ಹಿಂದೆ ಸ್ವಾತಂತ್ರ್ಯ ಹೋರಾಟಕಾಲದಲ್ಲಿ ತನ್ನನ್ನು ಅನುಸರಿಸಿದ್ದವರು ಈಗ ಹೊಸ ಆಳರಸರ ಸ್ಥಾನಮಾನ ಗಳಿಸಿದ ಮೇಲೆ ಅವರ ತಲೆ ತಿರುಗಿದೆ ಎಂದು ಮೊದಲು ಅರಿತ ಕಾಂಗ್ರೆಸ್ ಮುಖಂಡ ಕೂಡಾ ಗಾಂಧೀಜಿಯೇ. ಉದಾಹರಣೆಗೆ ಸ್ವಾತಂತ್ರ್ಯದ ಅರುಣೋದಯದ ಒಂದು ವರ್ಷಕ್ಕೂ ಮೊದಲು ಜುಲೈ 1946ರಲ್ಲಿ "ಒಂದು ದುರಂತಕಾರೀ ವಿದ್ಯಮಾನ" ಎಂಬ ಟಿಪ್ಪಣಿಯಲ್ಲಿ ಹೀಗೆ ಬರೆದಿದ್ದರು-

"ಸಂವಿಧಾನ-ಸಭೆಯಲ್ಲಿ ಇರಬಯಸುವ ವ್ಯಕ್ತಿಗಳ ಎಷ್ಟೊಂದು ಪತ್ರಗಳು ನನ್ನ ಟಪ್ಪಾಲಿನಲ್ಲಿರುತ್ತವೆಯೆಂದರೆ ನನಗೆ ಹೆದರಿಕೆಯಾಗುತ್ತಿದೆ. ಬುದ್ಧಿಜೀವಿ ವರ್ಗ ಭಾರತದ ಸ್ವಾತಂತ್ರ್ಯಕ್ಕಿಂತ ವೈಯಕ್ತಿಕ ಸುಖ ಲೋಲುಪತ್ತೆಯ ಬಗ್ಗೆ ಹೆಚ್ಚು ಆತುರವಾಗಿದೆ ಎಂಬ ಸಾರ್ವತ್ರಿಕ ಭಾವನೆಯ ಸೂಚಕವೋ ಇದು ಎಂದು ಸಂಶಯ ಬರುತ್ತಿದೆ....... ನಾನು ಇದನ್ನು ಬರೆಯುತ್ತಿರುವುದು ಒಂದು ಖಾಯಿಲೆಯತ್ತ ಗಮನ ಸೆಳೆಯಲಿಕ್ಕೆಯೇ ಹೊರತು ಪತ್ರ ಬರೆದವರು ನಾನು ಮಧ್ಯಪ್ರವೇಶಿಸುತ್ತೇನೆಂಬ ನಿರೀಕ್ಷೆ ಇಟ್ಟುಕೊಳ್ಳದಿರಲಿ ಎಂದು ಎಚ್ಚರಿಸಲಿಕ್ಕೆ ಅಲ್ಲ. ಈ ಖಾಯಿಲೆಗಾಗಿ ಒ... ರೋಗದ ಒಂದು ಲಕ್ಷಣ".

ಇದು ನಂತರ ಒಂದು ಅತಿ ಗಂಭೀರ ಸಮಸ್ಯೆಯಾಗಿ ಬೆಳೆಯಿತು. ಗಾಂಧೀಜಿಗೆ ಈ ಬಗ್ಗೆ ಹಲವರು ಪತ್ರ ಬರೆದರು. ಜನವರಿ 12 ರ ಪ್ರಾರ್ಥನೆಯ ನಂತರದ ತನ್ನ ಭಾಷಣದಲ್ಲಿ ತನಗೆ ಹಿರಿಯ ಆಂಧ್ರ ಕಾಂಗ್ರೆಸ್ಸಿಗ ದೇಶಭಕ್ತ ಕೊಂಡಾ ವೆಂಕಟಪ್ಪಯ್ಯನವರು ಬರೆದ ಪತ್ರವನ್ನು ಉಲ್ಲೇಖಿಸಿದರು-

"ಇತರ ಹಲವಾರು ಕ್ಲಿಷ್ಟ ರಾಜಕೀಯ, ಆರ್ಥಿಕ ಪ್ರಶ್ನೆಗಳಲ್ಲದೆ ಒಂದು ದೊಡ್ಡ ಸಮಸ್ಯೆಯೆಂದರೆ ಕಾಂಗ್ರೆಸ್ ವಲಯಗಳಲ್ಲಿನ ಜನರಲ್ಲಿ ಆಗಿರುವ ನೈತಿಕ ಅಧಃಪತನ. ಬೇರೆ ಪ್ರಾಂತ್ಯಗಳ ಬಗ್ಗೆ ನಾನು ಏನೂ ಹೇಳಲು ಸಾಧ್ಯವಿಲ್ಲ. ಆದರೆ ನನ್ನ ಪ್ರಾಂತ್ಯದಲ್ಲಿ ಪರಿಸ್ಥಿತಿ ವ್ಯಥೆಯುಂಟುಮಾಡುವಂತದ್ದು. ರಾಜಕೀಯ ಅಧಿಕಾರದ ರುಚಿ ಅವರ ತಲೆ ತಿರುಗಿಸಿದೆ. ...... ಕಾಂಗ್ರೆಸ್ ವಲಯಗಳೊಳಗಿನ ಗುಂಪುಗಾರಿಕೆ, ಹಲವು ಎಂ.ಎಲ್.ಎ., ಎಂ.ಎಲ್.ಸಿ.ಗಳ ಮತ್ತು ಮಾಡುವ ಚಟುವಟಿಕೆಗಳು, ಮಂತ್ರಿಗಳ ದೌರ್ಬಲ್ಯಗಳು ಜನಸಾಮಾನ್ಯರಲ್ಲಿ ಒಂದು ಬುಡಾಯದ ಭಾವನೆ ಸೃಷ್ಟಿಸುತ್ತಿವೆ. ಜನ ಬ್ರಿಟಿಷ್ ಸರಕಾರವೇ ಎಷ್ಟೋ ಒಳ್ಳೆಯದಿತ್ತು ಎಂದು ಹೇಳಲಾರಂಭಿಸಿ...

ಪುಟ 6 ನೋಡಿ

ದೇಶದೊಳಗೆ



-ವಿಶ್ವ

ಕೇರಳ ರಾಜ್ಯಪಾಲರಿಗೆ ಎಲ್.ಡಿ.ಎಫ್. ಮನವಿ

ಜನವರಿ 27ರಂದು ಆರಂಭವಾಗುವ ಕೇರಳ ವಿಧಾನಸಭೆ ಅಧಿವೇಶನದಲ್ಲಿ ಭಾಷಣ ಮಾಡಬಾರದು ಎಂದು ರಾಜ್ಯದ ಎಡ ಪ್ರಜಾಸತ್ತಾತ್ಮಕ ರಂಗ (ಎಲ್‌ಡಿಎಫ್) ರಾಜ್ಯಪಾಲ ಬಿ.ರಾಚಯ್ಯ ಅವರನ್ನು ಒತ್ತಾಯಿಸಿದೆ.

ಪ್ರತಿಪಕ್ಷ ನಾಯಕ ಅಚ್ಯುತಾನಂದನ ನೇತೃತ್ವದ ನಿಯೋಗವೊಂದು ರಾಜ್ಯಪಾಲರನ್ನು ಭೇಟಿ ಮಾಡಿ ಈ ಸಂಬಂಧ ಮನವಿ ಪತ್ರವನ್ನು ಸಲ್ಲಿಸಿತು.

ಭಾರತೀಯ ಬಾಹ್ಯಾಕಾಶ ಸಂಶೋಧನೆ ಸಂಸ್ಥೆ (ಇಸ್ರೋ) ಯ ಬೇಹುಗಾರಿಕೆ ಪ್ರಕರಣದಲ್ಲಿ ಆರೋಪಿಗಳಿಗೆ ರಕ್ಷಣೆ ನೀಡಿದ ಕರುಣಾಕರನ್ ಸರಕಾರದ ಅಧಿವೇಶನದಲ್ಲಿ ಪಾಲ್ಗೊಳ್ಳುವುದು ಒಳ್ಳೆಯದಲ್ಲ ಎಂದು ನಿಯೋಗ ರಾಜ್ಯಪಾಲರಿಗೆ ಸಲಹೆ ಮಾಡಿತು. ದೇಶದ್ರೋಹಿಗಳಿಗೆ ಬೆಂಬಲ ಕೊಟ್ಟ ಸರಕಾರಕ್ಕೆ ಆಡಳಿತದಲ್ಲಿ ಮುಂದುವರಿಯುವ ನೈತಿಕ ಹಕ್ಕಿಲ್ಲ ಎಂದಿತು.

ರಾಜೀವ್ ಹತ್ಯೆ ಹಿಂಸಾಚಾರ: ಮಾಜಿ ಕಾಂಗ್ರೆ ಶಾಸಕನ ಬಂಧನ

1991ರ ಮೇ ತಿಂಗಳಿಲ್ಲಿ ಮಾಜಿ ಪ್ರಧಾನಿ ರಾಜೀವ್ ಗಾಂಧಿಯವರ ಹತ್ಯೆ ನಡೆದಾಗ ಭುಗಿಲೆದ್ದ ಹಿಂಸಾಚಾರದ ಸಂದರ್ಭದಲ್ಲಿ ತೆಲುಗುದೇಶಂ ನಾಯಕ ಎನ್.ಟಿ.ರಾಮರಾವ್ ಅವರಿಗೆ ಸೇರಿದ ಎರಡು ಚಿತ್ರಮಂದಿರಗಳನ್ನು ಸುಟ್ಟು ಹಾಕಿದ ಪ್ರಕರಣದ ಆರೋಪಿ ಇದೀಗ ಜನವರಿ 25 ರಂದು ಪೋಲಿಸರ ಕೈಗೆ ಸಿಕ್ಕಿ ಬಿದ್ದಿದ್ದಾನೆ. ಮಾಜಿ ಕಾಂಗ್ರೆ ಶಾಸಕ ಹಾಗೂ ಸಿಕ್ಕಿಂ ರಾಜ್ಯಪಾಲ ಶಿವಶಂಕರ ಅವರ ಮಗ ಸುಧೀರ್ ಕುಮಾರ್ ಅವರೇ ಈ ಆರೋಪಿ.

ಸುಧೀರ್ ಕುಮಾರ್ ವಿರುದ್ಧ ಜಾಮೀನು ರಹಿತ ವಾರೆಂಟ್‌ನ್ನು ಹೊರಡಿಸಲಾಗಿತ್ತು ತಾರಕರಾಮ ಮತ್ತು ರಾಮಕೃಷ್ಣ ಸಿನಿಮಾ ಮಂದಿರಗಳಿಗೆ ಬೆಂಕಿ ಹಚ್ಚಿದ ಆರೋಪದ ಮೇಲೆ ಸುಧೀರ್ ಕುಮಾರ್ ಮತ್ತು ಇತರ ೫೩ ಜನರ ವಿರುದ್ಧ ಮೊಕದ್ದಮೆಯನ್ನು ದಾಖಲಿಸಲಾಗಿತ್ತು.

ಸಾರಾಯಿ ಮಾರಾಟ ಸೇವನೆಗಳು ಮೂಲಭೂತ ಹಕ್ಕು ಅಲ್ಲ

ಸಾರಾಯಿ ಮಾರಾಟ ಮತ್ತು ಸಾರಾಯಿ ಕುಡಿಯುವುದು ಮೂಲಭೂತ ಹಕ್ಕುಗಳಲ್ಲ ಎಂದು ಆಂಧ್ರ ಪ್ರದೇಶದ ಹೈಕೋರ್ಟ್ ಜನವರಿ 23ರಂದು ನೀಡಿದ ಒಂದು ತೀರ್ಪಿನಲ್ಲಿ ಈ ಅಂಶವನ್ನು ಸ್ಪಷ್ಟ ಪಡಿಸಿದೆ.

ಮದ್ಯಪಾನವನ್ನು ನಿಷೇಧಿಸಿ ತೆಲುಗುದೇಶಂ ಸರಕಾರ ಹೊರಡಿಸಿರುವ ಸುಗ್ರೀವಾಜ್ಞೆಯನ್ನು ಪ್ರಶ್ನಿಸಿ ಕೆಲವರು ಸಲ್ಲಿಸಿದ ಚಿಲ್ಲರೆ ಅರ್ಜಿಗಳನ್ನು ತಳ್ಳಿ ಹಾಕುವಾಗ ನ್ಯಾಯಾಲಯ ಈ ಅಂಶಕ್ಕೆ ಒತ್ತುಕೊಟ್ಟಿದೆ. ಮುಖ್ಯ ಅರ್ಜಿಯ ಮೇಲೆ ಪೂರ್ಣಪೀಠ ಇನ್ನೂ ತೀರ್ಪು ನೀಡಿಲ್ಲ.

ಆಂಧ್ರ ಪ್ರದೇಶದಲ್ಲಿ ಅಧಿಕಾರಕ್ಕೆ ಮರಿದ ತೆಲುಗುದೇಶಂ ಚುನಾವಣೆ ಪ್ರಣಾಳಿಕೆಯ ಭರವಸೆಗೆ ಅನುಗುಣವಾಗಿ ಮದ್ಯಪಾನವನ್ನು ನಿಷೇಧಿಸಿ ಸುಗ್ರೀವಾಜ್ಞೆಯನ್ನು ಹೊರಡಿಸಿದೆ. ಇದರ ವಿರುದ್ಧ ಮದ್ಯದ ಲಾಬಿಗಳು ಭಾರೀ ಕೆಲಸ ಮಾಡುತ್ತಿವೆ.

ಆದರೆ ಹೈಕೋರ್ಟ್‌ನ ತೀರ್ಪು ಈ ಲಾಬಿಯ ಯತ್ನಕ್ಕೆ ತಣ್ಣೀರು ಸುರಿದಿದೆ. ಸಾರಾಯಿ ವಿರೋಧಿ ಹೋರಾಟಗಾರರ ನಿಲುವಿಗೆ ಈ ಮಧ್ಯಂತರ ತೀರ್ಪು ಬೆಂಬಲವಾಗಿ ನಿಂತಿದೆ. ಅಂತಿಮ ತೀರ್ಪು ಕೂಡ ಇದೇ ಆಶಯದೊಂದಿಗೆ ಹೊರ ಬರುತ್ತದೆ ಎಂದು ನಿರೀಕ್ಷಿಸೋಣ.

ನಿಜವಾಗಿಯೂ ಮಹಾತ್ಮ...

ಪುಟ 5ರಿಂದ

ದ್ದಾರೆ. ಕಾಂಗ್ರೆಸನ್ನು ಅವರು ಶಪಿಸುತ್ತಲೂ ಇದ್ದಾರೆ."

ಕಾಂಗ್ರೆಸ್ಸಿನ ಆಂತರಿಕ ಬೆಳವಣಿಗೆಗಳು ಗಾಂಧೀಜಿ ಕಾಂಗ್ರೆಸ್‌ನ ಭವಿಷ್ಯದ ಬಗ್ಗೆ ಗಂಭೀರವಾಗಿ ಯೋಚಿಸುವಂತೆ ಮಾಡಿದವು. ಒಂದು ಮರುಸಂಘಟನೆಗೊಂಡ ಕಾಂಗ್ರೆಸಿನ ಸಂವಿಧಾನ ಹೇಗಿರಬೇಕು ಎಂಬ ಬಗ್ಗೆ ಅವರು ತನ್ನ ಕೊನೆಯ ದಿನಗಳಲ್ಲಿ ಸಿದ್ಧಪಡಿಸಿದ ಕರಡಿನಲ್ಲಿ ಹೀಗೆಂದಿದ್ದರು.

"ಒಂದು ಪ್ರಚಾರ ವಾಹನ ಹಾಗೂ ಸಂಸದೀಯ ಯಂತ್ರವಾಗಿ ಕಾಂಗ್ರೆಸ್ಸಿನ ಈಗಿನ ಸ್ವರೂಪ ಇನ್ನು ಮುಂದೆ ನಿರುಪಯೋಗಿ. ನಗರ, ಪಟ್ಟಣಗಳಿಗಿಂತ ಭಿನ್ನವಾದ ಭಾರತದ ಏಳು ಲಕ್ಷ ಹಳ್ಳಿಗಳ ದೃಷ್ಟಿಯಿಂದ ಭಾರತ ಸಾಮಾಜಿಕ, ನೈತಿಕ, ಆರ್ಥಿಕ ಸ್ವಾತಂತ್ರ್ಯವನ್ನು ಇನ್ನು ಪಡೆಯಬೇಕಾಗಿದೆಯಷ್ಟೇ. ಪ್ರಜಾಪ್ರಭುತ್ವ ಗುರಿಸಾಧನೆಯತ್ತ ಸಾಗುವಾಗ ಮಿಲಿಟರಿ ಅಧಿಕಾರದ ಮೇಲೆ ನಾಗರಿಕ ಅಧಿಕಾರದ ಮೇಲುಗೈಗೆ ಹೋರಾಟ ನಡೆಯುವುದು ಖಂಡಿತ. ರಾಜಕೀಯ ಪಕ್ಷಗಳು ಹಾಗೂ ಕೋಮು ಸಂಸ್ಥೆಗಳ ನಡುವಿನ ಸ್ಪರ್ಧೆಯಿಂದ ಕಾಂಗ್ರೆಸ್ಸನ್ನು ದೂರವಿಡಬೇಕಾಗಿದೆ. ಈ ಕಾರಣಕ್ಕಾಗಿ ಮತ್ತು ಇಂತಹ ಇತರ ಕಾರಣಗಳಿಗಾಗಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಈಗಿನ ಕಾಂಗ್ರೆಸ್ ಸಂಘಟನೆಯನ್ನು ವಿಸರ್ಜಿಸಿ ಈ ಕೆಳಗಿನ ನಿಯಮಾವಳಿಗನುಸಾರವಾಗಿ ಒಂದು ಲೋಕ ಸೇವಕ ಸಂಘವಾಗಿ ಅರಳಲು ನಿರ್ಣಯಿಸುತ್ತದೆ"

ಕಾಲು ಶತಮಾನದ ಕಾಲ ಸ್ವಾತಂತ್ರ್ಯ ಹೋರಾಟದ ಮುಖಂಡನಾಗಿದ್ದ ವ್ಯಕ್ತಿ ಈ ರೀತಿ ಆಗಸ್ಟ್ 15, 1947ರಂದು ಗೆದ್ದುಕೊಂಡ ಸ್ವಾತಂತ್ರ್ಯ ತನ್ನ ಕನಸಿನ ಸ್ವಾತಂತ್ರ್ಯವಲ್ಲ, ಅಧಿಕಾರ ತನ್ನ ಈ ಹಿಂದಿನ ಶಿಷ್ಯರನ್ನು ಎಷ್ಟು ಸ್ವಾರ್ಥಪರರನ್ನಾಗಿಸಿದೆಯೆಂದರೆ, ಕುಯುಕ್ತಿ ನಡೆಸುವವರನ್ನಾಗಿಸಿದೆಯೆಂದರೆ ತಾನು ರೂಪಿಸಿದ ರಾಜಕೀಯ ಸಂಘಟನೆಯಾದ ಭಾರತ ರಾಷ್ಟ್ರೀಯ ಕಾಂಗ್ರೆಸ್ ಮುಂದೆಯೂ ಇರುವ ಆಸೆ ಅವರಲ್ಲಿ ಉಳಿದಿರಲಿಲ್ಲ. ನಿಜವಾಗಿಯೂ ಅವರು ತನ್ನ ಜೀವನ ಧ್ಯೇಯ ವಿಫಲಗೊಂಡಿತು ಎಂದು ಅರಿತ, ಅದನ್ನು ಬಹಿರಂಗವಾಗಿ ಒಪ್ಪಿಕೊಂಡ ಮಹಾತ್ಮ

ಎಸ್.ಎಫ್.ಐ. ಸಿಂಧನೂರು ತಾಲೂಕು ಸಮ್ಮೇಳನ

ಎಸ್.ಎಫ್.ಐ ತಾಲೂಕ ಸಮಿತಿ ಜನವರಿ 13ರಂದು ನಾಲ್ಕನೇ ತಾಲೂಕು ಸಮ್ಮೇಳನವನ್ನು ಜ್ಯೋತಿ ಮಹಿಳಾ ಸಮಾಜದಲ್ಲಿ ಉದ್ಘಾಟಿಸಲಾಯಿತು. ಸಮ್ಮೇಳನವನ್ನು ಡಿ.ವೈ.ಎಫ್.ಐ. ರಾಯಚೂರ ಜಿಲ್ಲಾ ಅಧ್ಯಕ್ಷರಾದ ಶರಬಣ್ಣ ನಾಗಲಾಪುರ ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಎಸ್.ಎಫ್.ಐ. ರಾಯಚೂರು ಜಿಲ್ಲಾ ಕಾರ್ಯದರ್ಶಿ ಚಂದ್ರಪ್ಪ ಹೊಸಕೇರಾ ಮತ್ತು ಡಿ.ವೈ.ಎಫ್.ಐ. ತಾಲೂಕು ಸಮಿತಿ ಸದಸ್ಯರಾದ ಹನುಮಂತಪ್ಪ ಗುಡಿ, ರಾಯಚೂರು ಸುದ್ದಿಬಿಂಬ ಪತ್ರಿಕೆ ಸಂಪಾದಕರಾದ ಡಿ.ಎಚ್.ಕಂಬಳಿ ಮತ್ತು ಸುದ್ದಿ ಮೂಲ ಪತ್ರಿಕೆಯ ವರದಿಗಾರರಾದ ಶರಣಪ್ಪಾ ಹಿರೇಮಠ ಹಾಗೂ ಎಸ್.ಎಫ್.ಐ. ತಾಲೂಕು ಕಾರ್ಯದರ್ಶಿ ಈ.ಬಸವರಾಜ ಇವರು ಉಪಸ್ಥಿತರಿದ್ದರು. ಸಭೆಯ ಅಧ್ಯಕ್ಷತೆಯನ್ನು ತಾಲೂಕು ಅಧ್ಯಕ್ಷರಾದ ಸಿ.ಚಿದಾನಂದದೊರೆ ಇವರು ವಹಿಸಿದ್ದರು. ನಂತರ ಕಾರ್ಯಕಲಾಪಗಳು ಪ್ರಾರಂಭಗೊಂಡು ನಂತರ ಈ ಕೆಳಗಿನಂತೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಚಿದಾನಂದದೊರೆ ಅಧ್ಯಕ್ಷರಾಗಿ, ಶಿವಮೂರ್ತಯ್ಯ ಕಾರ್ಯದರ್ಶಿಯಾಗಿ, ಈ.ಬಸವರಾಜ, ಪಂಪಯ್ಯ ಮಠ ಉಪಾಧ್ಯಕ್ಷರಾಗಿ, ಡಿ.ಹನುಮೇಶ ಮತ್ತು ಹುಸೇನಸಾಬ ಸಹ ಕಾರ್ಯದರ್ಶಿಯಾಗಿ ಆಯ್ಕೆಯಾದರು.

ಡಿವೈಎಫ್‌ಐ ಘಟಕ ರಚನೆ

ಬೆಂ.ದ.ತಾಲೂಕು: ಬೆಂಗಳೂರು ದಕ್ಷಿಣ ತಾಲೂಕು (ಗ್ರಾಮಾಂತರ) ಪರಪಸ ಅಗ್ರಹಾರ ಗ್ರಾಮದಲ್ಲಿ ಜನವರಿ 21ರಂದು ಡಿವೈಎಫ್‌ಐ ಘಟಕ ರಚನೆ ಮಾಡಲಾಯಿತು. ಸುಮಾರು 35 ಜನ ಭಾಗವಹಿಸಿದ್ದ ಸಭೆಯ ಅಧ್ಯಕ್ಷತೆಯನ್ನು ಕಾಂ.ಪಿ.ಜಿ.ಶ್ರೀನಿವಾಸ್‌ರವರು ವಹಿಸಿದ್ದರು. ನಮ್ಮ ದೇಶ ಎದುರಿಸುತ್ತಿರುವ ಜ್ವಲಂತ ಸಮಸ್ಯೆಗಳಾದ ನಿರುದ್ಯೋಗ, ಬೆಲೆ ಏರಿಕೆ ಮತ್ತು ಕೋಮುವಾದದ ಬಗ್ಗೆ ಜಿಲ್ಲಾ ಸಮಿತಿಯ ಅಧ್ಯಕ್ಷರಾದ ಕಾಂ.ಅಶೋಕನ್ ಮತ್ತು ಜಿಲ್ಲಾ ಕಾರ್ಯದರ್ಶಿ ಮಂಡಳಿಯ ಸದಸ್ಯರಾದ ಕಾಂ. ಲಕ್ಷ್ಮಣ್ ವಿವರಿಸಿದರು.

ಜನವರಿ 26ರಂದು ಗಣರಾಜ್ಯೋತ್ಸವದ ದಿನಾಚರಣೆಯ ಅಂಗವಾಗಿ ರಾಷ್ಟ್ರ ಧ್ವಜಾರೋಹಣ ಮಾಡುವುದು ಎಂದು ತೀರ್ಮಾನಿಸಲಾಯಿತು. ನಂತರ ಹೊಸ ಘಟಕದ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಕಾಂ. ಪಿ.ಜಿ. ಶ್ರೀನಿವಾಸ್ ಅಧ್ಯಕ್ಷರು, ಪಿ. ರಾಜಪ್ಪ, ಉಪಾಧ್ಯಕ್ಷರು, ಕಾಂ.ರವಿ ಕಾರ್ಯದರ್ಶಿ, ನಾಗರಾಜ್ ಸಹ ಕಾರ್ಯದರ್ಶಿ, ಪುರುಷೋತ್ತಮ ಖಜಾಂಚಿಯಾಗಿ ಆಯ್ಕೆಯಾ ದರು.

ಅದ್ಯಯನ ಶಿಬಿರ

ಮಂಡ್ಯ: DYFI ಜಿಲ್ಲಾ ಅಧ್ಯಯನ ಶಿಬಿರ ಮತ್ತು ಮಳವಳ್ಳಿ ತಾಲೂಕು ಸಮ್ಮೇಳನ ಜನವರಿ 21-22, 1995 ರಂದು ಮಳವಳ್ಳಿ ತಾಲೂಕು ಕಿರಗಸೂರಿನಲ್ಲಿ ನೆಡೆಯಿತು. ಉದ್ಘಾಟನೆಯನ್ನು ರಾಜ್ಯ DYFIನ ಅಧ್ಯಕ್ಷರಾದ ಕಾಂ.ಹೆಚ್ ಎನ್. ನಾಗಮೋಹನದಾಸ್‌ರವರು ನೆರವೇರಿಸಿದರು. ಧ್ವಜಾರೋಹಣ ಕಾಂ.ಜಿ. ರಾಮಕೃಷ್ಣ, ಗ್ರಾಮ ಪಂಚಾಯತ್ ಸದಸ್ಯರು, ತಳಗವಾದಿ ಹಾಗೂ ಅಧ್ಯಕ್ಷತೆಯನ್ನು ಕಾಂ. ಪುಟ್ಟಮಾದಯ್ಯ ಎಂ. ರವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಕಾಂ. ಕೆ.ಬಾಲಕೃಷ್ಣ ಶೆಟ್ಟಿ ರಾಜ್ಯ ಸಹಕಾರ್ಯದರ್ಶಿ DYFI, ರೇವಣ್ಣ ಜಿಲ್ಲಾ ಅಧ್ಯಕ್ಷರು ಬಿಜಿವಿಎಸ್‌ರವರು ಭಾಗವಹಿಸಿದ್ದರು.

ಅಧ್ಯಯನ ಶಿಬಿರದಲ್ಲಿ ಕಾಂ.ಹೆಚ್. ಎನ್.ನಾಗಮೋಹನದಾಸ್ ರಾಜ್ಯ ಅಧ್ಯಕ್ಷರು DYFI, ಹಾಗೂ ಕೆ.ಬಾಲಕೃಷ್ಣಶೆಟ್ಟ ರಾಜ್ಯಸಹಕಾರ್ಯದರ್ಶಿ, ಹಾಗೂ ಕಾಂ.ಜಿ.ರಾಮಕೃಷ್ಣರವರು ಉಪನ್ಯಾಸ ನೀಡಿದರು.

ಡಿವೈಎಫ್‌ಐ ತಾಲೂಕು ಸಮ್ಮೇಳನ

ಮಳವಳ್ಳಿ: ಜನವರಿ 22, 1995 ರಂದು ಡಿವೈಎಫ್‌ಐನ ಮಳವಳ್ಳಿ ತಾಲೂಕು ಸಮ್ಮೇಳನ ಜರುಗಿತು. ಮಳವಳ್ಳಿ ತಾಲೂಕಿನಲ್ಲಿ ನಿರುದ್ಯೋಗಿ ಜನರ ಬಗ್ಗೆ ಚರ್ಚಿಸಿ, ಹಾಗೂ ರೈತರು, ವಿದ್ಯಾರ್ಥಿಗಳು, ಹಾಗೂ ಕಾರ್ಮಿಕರ ಬಗ್ಗೆ ಸಹ ಚರ್ಚಿಸಿ ಇವರೆಲ್ಲಾರ ಸಮಸ್ಯೆಗಳಿಗೆ ಪರಿಹಾರವಾಗಬೇಕಾದರೆ ಮೂಲಭೂತ ಕೆಲಸ ಕಾರ್ಯಗಳು ನಡೆಯದೆ ಇದಕ್ಕೆ ಪರಿಹಾರವಿಲ್ಲಾ ಆದ್ದರಿಂದ ಮೂಲಭೂತ ಕೆಲಸ ಕಾರ್ಯಗಳು ನಡೆಯಬೇಕೆಂದು ಅಭಿಪ್ರಾಯ ಪಡಲಾಯಿತು. ಒಟ್ಟು 60 ಜನ ಪ್ರತಿನಿಧಿಗಳು ಭಾಗವಹಿಸಿದ್ದರು.

ಈ ಸಮ್ಮೇಳನದ ಅಧ್ಯಕ್ಷತೆಯನ್ನು ಹೆಚ್. ಆನಂದ ವಹಿಸಿದ್ದು ಸಮರೋಪ ಸಮಾರಂಭದಲ್ಲಿ ಐಕ್ಯರಂಗದ ರಾಜಶೇಖರ್ ಮಾತನಾಡಿ ತಾಲೂಕಿನಲ್ಲಿ ಪ್ರಜಾಸತ್ತಾತ್ಮಕ ಚಳುವಳಿಗಳು ಬೆಳೆಯಬೇಕಾದರೆ ಯುವಜನರು ಸಂಘಟಿತರಾಗಿ ಹೋರಾಡಬೇಕೆಂದರು. ಮುಖ್ಯ ಅತಿಥಿಗಳಾಗಿ ಎಸ್.ಎಫ್.ಐನ ಎಸ್.ಎಲ್.ಭರತ್‌ರಾಜ್, ಡಿವೈಎಫ್‌ಐನ ರಾಜ್ಯ ಸಹಕಾರ್ಯದರ್ಶಿ ಬಾಲಕೃಷ್ಣಶೆಟ್ಟಿ ಉಪಸ್ಥಿತರಿದ್ದರು.

ಡಿವೈಎಫ್‌ಐ ಘಟಕ ಸ್ಥಾಪನೆ

ಹನುಮಂತಪುರ: ಜನವರಿ 20, 1995ರಂದು ಮದ್ದೂರು ತಾಲೂಕು ಹನುಮಂತಪುರದಲ್ಲಿ ಡಿವೈಎಫ್‌ಐ ಘಟಕದ ಉದ್ಘಾಟನೆ ನಡೆಯಿತು.

ಉದ್ಘಾಟನೆಯನ್ನು ಹೆಚ್.ಕೆ.ವಿ. ಕಾಲೇಜಿನ ಸಿದ್ದೇಗೌಡ ಜ್ಯೋತಿಬೆಳಗುವುದರ ಮೂಲಕ ನೆರವೇರಿಸಿದರು. ಮುಖ್ಯ ಅಥಿತಿಗಳಾಗಿ ಆಗಮಿಸಿದ್ದ ಬಿಜಿವಿಎಸ್ ನ ಜಿಲ್ಲಾಧ್ಯಕ್ಷ ಎಸ್.ರೇವಣ್ಣ, ಶ್ರೀನಿವಾಸ್ ಶುಭ ಕೋರಿದರು. ಅಧ್ಯಕ್ಷತೆ ವಹಿಸಿದ್ದ ಜನತಾದಳದ ಎಂ.ಎಸ್. ಸಿದ್ದರಾಜು ಮಾತನಾಡಿ ಈ ರೀತಿಯ ಸಂಘಟನೆಗಳಿಂದ ಜಾತಿ ಮೌಢ್ಯವನ್ನು ಹೋಗಲಾಡಿಸಲು ಸಾಧ್ಯ ಎಂದರು. ಸ್ವಾಗತವನ್ನು ಡಿವೈಎಫ್‌ಐ ಸಹಕಾರ್ಯದರ್ಶಿ ಲೋಕೇಶ್ ಮಾಡಿದರು. ವಂದನಾರ್ಪಣೆಯಯನ್ನು ಕಾರ್ಯದರ್ಶಿಯಾದ ಸುರೇಶ್ ಮಾಡಿದರು.ನೂತನ ತಾಲೂಕು ಸಮಿತಿಗೆ ಆಯ್ಕೆಯಾದವರು

ಟಿ.ಹೆಚ್.ಆನಂದ-ಅಧ್ಯಕ್ಷರು, ಜವರಯ್ಯ- ಕಾರ್ಯದರ್ಶಿ, ಶಿವಣ್ಣ ಎನ್.ಕೆ.-ಉಪಾಧ್ಯಕ್ಷ, ಪುಟ್ಟಮಾದಯ್ಯ ಎಂ.-ಸಹಕಾರ್ಯದರ್ಶಿ, ಜೆ.ಕಾಂತರಾಜ್-ಖಜಾಂಚಿ ಮತ್ತು 8 ಜನ ಸದಸ್ಯರ ಸಮಿತಿಯನ್ನು ರಚಿಸಲಾಯಿತು.

ಎಸ್.ಎಫ್.ಐ. ರಾಯಚೂರು ಜಿಲ್ಲಾ ಸಮ್ಮೇಳನ

SFI ರಾಯಚೂರು ಜಿಲ್ಲಾ ಸಮ್ಮೇಳನವು ನಡೆಯಿತು. ಈ ಸಮ್ಮೇಳನದ ಸಮಾರೋಪ ಭಾಷಣವನ್ನು ಎಸ್‌ಎಫ್‌ಐನ ಅಖಿಲ ಭಾರತ ಮುಖಂಡರಾದ ಜಿ.ಸಿ.ಬಯ್ಯಾರೆಡ್ಡಿಯವರು ಮಾಡಿದರು.

ಈ ಸಮ್ಮೇಳನದಲ್ಲಿ ಎಸ್.ಎಫ್.ಐ.ನ ಮುಂದಿನ ಚಟುವಟಿಕೆಗಳಿಗಾಗಿ ನೂತನ ಜಿಲ್ಲಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಜಿಲ್ಲಾಧ್ಯಕ್ಷರಾಗಿ ಎಸ್.ಮಾರುತಿ, ಉಪಾಧ್ಯಕ್ಷರಾಗಿ ಜಿ.ನಾಗರಾಜ ಮತ್ತು ಇ.ಬಸವರಾಜ, ಬಿ.ಅಮರೇಶ, ತಿಪ್ಪಯ್ಯ ನಾಯಕ್, ಕಾರ್ಯದರ್ಶಿಯಾಗಿ ಚಂದ್ರಪ್ಪ ಹೊಸಕೇರಾ, ಸಹಕಾರ್ಯದರ್ಶಿಗಳಾಗಿ ವಿ.ಎಸ್.ಯಲ್ಲಪ್ಪ, ಶಿವಮೂರ್ತಿ, ಪಂಪನಗೌಡ ಇವರುಗಳು ಪದಾಧಿಕಾರಿಗಳಾಗಿದ್ದು, ಇನ್ನುಳಿದ ಹನ್ನೊಂದು ಜನ ಜಿಲ್ಲಾ ಸಮಿತಿ ಸದಸ್ಯರಾಗಿ ಆಯ್ಕೆಗೊಂಡಿದ್ದಾರೆ.

ಎಸ್.ಎಫ್.ಐ. 8ನೇ ಜಿಲ್ಲಾ ಸಮ್ಮೇಳನ

ಶಿರಸಿ: ಎಸ್‌ಎಫ್‌ಐನ 8ನೇ ಜಿಲ್ಲಾ ಸಮ್ಮೇಳನವು ಜನವರಿ 21 ಮತ್ತು 22 ರಂದು ನಗರದ ಮಾರಿಕಾಂಬಾ ಧರ್ಮಛತ್ರದ ಹಾಲಿನಲ್ಲಿ ನಡೆಯಿತು. ಈ ಸಮ್ಮೇಳನವನ್ನು ಸಾಹಿತಿ ಡಾ.ಸೈಯದ್ ಜಮಿರುಲ್ಲಾ ಷರೀಫ್ ಉದ್ಘಾಟಿಸಿ ಮಾತನಾಡಿದರು. ಮುಖ್ಯ ಅಥಿತಿಗಳಾಗಿ ಎಸ್‌ಎಫ್‌ಐ ಕೇಂದ್ರ ಸಮಿತಿ ಮುಖಂಡ ಜಿ.ಸಿ.ಬಯ್ಯಾರೆಡ್ಡಿ ಮಾತನಾಡಿ ದೇಶದ ಆಳುವ ವರ್ಗ ಇಂದು ವಿದೇಶಿ ಶಕ್ತಿಗಳ ಜೊತೆ ಶಾಮೀಲಾಗಿ ಯುವಜನರನ್ನು ದಾರಿತಪ್ಪಿಸುವ ಪ್ರಯತ್ನ ನಡೆಸಿದೆ ಎಂದರು.

ಈ ಸಮಾರಂಭದ ಅಧ್ಯಕ್ಷತೆಯನ್ನು ಆನಂದ ಶೆಟ್ಟಿ ವಹಿಸಿದ್ದರು. ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಸಿ.ಆರ್.ಶಾನುಬಾಗ್ ಶುಭಕೋರಿ ಮಾತನಾಡಿದರು. ಸುರೇಶ್ ತಾಂಡೇಲ ಸ್ವಾಗತಿಸಿದರು. ಸುಭಾಷ್ ಕೊಪ್ಪಿಕರ್ ವಂದಿಸಿದರು. ಈ ಸಮ್ಮೇಳನವು ಹಲವು ನಿರ್ಣಯಗಳನ್ನು ಅಂಗಾಕರಿಸಿತು.ಆಯ್ಕೆಗೊಂಡ ನೂತನ ಜಿಲ್ಲಾ ಸಮಿತಿ ಅಧ್ಯಕ್ಷರಾಗಿ -ಜೋಸೆಫ್ ಕೆ.ಥಾಮಸ್, ಕಾರ್ಯದರ್ಶಿಯಾಗಿ-ಯುವರಾಜ್ ಕಂಬಾಳಿವಂತ್, ಉಪಾಧ್ಯಕ್ಷರಾಗಿ-ಶಂಭುಭಟ್ಟ, ಶಾಂತಿನಾಯ್ಕ, ತಬ್ರೆಜ್ ಖಾನ್, ಸಹಕಾರ್ಯದರ್ಶಿಯಾಗಿ ಶ್ರೀಧರ ಶೆಟ್ಟಿ ಹಾಗೂ ೮ ಜನ ಸದಸ್ಯರ ಸಮಿತಿ ರಚನೆಗೊಂಡಿತು.

ಐಟಿಐ ವಿದ್ಯಾರ್ಥಿಗಳ ಅನಿರ್ದಿಷ್ಟ ಮುಷ್ಕರ ಅಂತ್ಯ

ತಮ್ಮ ಪ್ರಮುಖ ಹತ್ತು ಬೇಡಿಕೆಗಳ ಈಡೇರಿಕೆಗೆ ಮತ್ತು 1960ರ ದಶಕದಲ್ಲಿ ಆರಂಭವಾದ ಐಟಿಐ ಕಾಲೇಜನ್ನು ಸುಧಾರಣೆಗೊಳಿಸಲು ಒತ್ತಾಯಿಸಿ ದಾವಣಗೆರೆ ಐಟಿಐ ಕೇಂದ್ರದ ವಿದ್ಯಾರ್ಥಿಗಳು ನಡೆಸಿದರಲ್ಲದೆ ಈ ದಿಸೆಯಲ್ಲಿ ಯಶಸ್ವಿ ಆಗಿದ್ದಾರೆ.

ಆರಂಭದಲ್ಲಿ ವಿದ್ಯಾರ್ಥಿಗಳು ನ್ಯಾಯಸಮ್ಮತ ಬೇಡಿಕೆ ಬಗ್ಗೆ ಯಾವುದೇ ಗಮನ ಹರಿಸದ ಕಾಲೇಜು ಪ್ರಾಂಶುಪಾಲರ ವಿರುದ್ಧ ಆಕ್ರೋಶಗೊಂಡಿದ್ದ ವಿದ್ಯಾರ್ಥಿ ಸಮುದಾಯ ಕಾಲೇಜಿನ ಕಿಡಕಿ-ಬಾಗಿಲುಗಳ ಗಾಜುಗಳನ್ನು ಒಡೆಯುವುದರ ಮೂಲಕ ತಮ್ಮ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ನಂತರದಲ್ಲಿ ಮಧ್ಯಪ್ರವೇಶ ಮಾಡಿದ ಎಸ್‌ಎಫ್‌ಐನ ಮುಖಂಡರು ವಾತಾವರಣವನ್ನು ತಿಳಿಗೊಳಿಸಿದರಲ್ಲದೇ ಬೇಡಿಕೆಗಳ ಈಡೇರಿಕೆಗಾಗಿ ಹಂತ ಹಂತವಾಗಿ ಚಳುವಳಿಯನ್ನು ರೂಪಿಸಿದರು. ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಕೆ.ಮಹಾಂತೇಶ್, ಎಸ್‌ಎಫ್‌ಐ ಉಪಾಧ್ಯಕ್ಷ ಎ.ಕರುಣಾನಿಧಿಯವರ ನೇತೃತ್ವದಲ್ಲಿ ವಿದ್ಯಾರ್ಥಿಗಳ ನಿರಂತರವಾಗಿ ತರಗತಿಗಳನ್ನು ಬಹಿಷ್ಕರಿಸಿ ಕಾಲೇಜು ಎದುರಿನಲ್ಲಿ ಪ್ರತಿನಿತ್ಯ ಧರಣಿ ಕಾರ್ಯಕ್ರಮ ಹಾಕಿಕೊಂಡರು. ಜೊತೆಯಲ್ಲಿ ಎಸ್‌ಎಫ್‌ಐ ಮುಖಂಡರು ರಾಜ್ಯಸಮಿತಿ ಜೊತೆ ಸಂಪರ್ಕ ಬೆಳೆಸಿ ಎಸ್‌ಎಫ್‌ಐ ರಾಜ್ಯ ಸಮಿತಿಯ ಒಂದು ನಿಯೋಗವುರಾಜ್ಯಅಧ್ಯಕ್ಷ ಶಾಂತಾರಾಮ್ ನಾಯಕ್ ನೇತೃತ್ವದಲ್ಲಿ ಐಟಿಐ ನಿರ್ದೇಶಕರನ್ನು ಭೇಟಿ ಮಾಡಿ ಬೇಡಿಕೆ ಈಡೇರಿಸಲು ಒತ್ತಾಯಪಡಿಸಿದ ಹಿನ್ನೆಲೆಯಲ್ಲಿ ನಿರ್ದೇಶಕರು ಸಮಸ್ಯೆಯ ಅಧ್ಯಯನಕ್ಕೆ ಮತ್ತು ಅಗತ್ಯಗಳ ಬಗ್ಗೆ ಉಪನಿರ್ದೇಶಕರು ಡಿಸೆಂಬರ್ 30-31ರಂದು ದಾವಣಗೆರೆಗೆ ಕಳಿಸುವ ವ್ಯವಸ್ಥೆ ಮಾಡಿದರು.

ಈ ಎರಡು ದಿನಗಳ ಅವಧಿಯಲ್ಲಿ ಉಪ ನಿರ್ದೇಶಕರು ಎಸ್‌ಎಫ್‌ಐ ನಿಯೋಗದ ಜೊತೆಯಲ್ಲಿ ಕಾಲೇಜಿನಲ್ಲಿರುವ ಹಲವಾರು ಸಮಸ್ಯೆಗಳ ಕುರಿತಂತೆ ಸುದೀರ್ಘವಾಗಿ ಚರ್ಚಿಸಿ ಬಹುತೇಕ ಬೇಡಿಕೆಗಳ ಬಗ್ಗೆ ಸಹಮತ ವ್ಯಕ್ತಪಡಿಸಿ ಹಲವು ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದರು. ಮುಖ್ಯವಾಗಿ ಉಪಕರಣಗಳು, ಡ್ರೈವಿಂಗ್ ವಾಹನ ಸೌಲಭ್ಯ ಉಪನ್ಯಾಸಕರ ಭರ್ತಿ, ಸ್ಟೈಪಂಡ್ ಹೆಚ್ಚಳ ಕುರಿತಂತೆ ಕೆಲವು ದಿನಗಳಲ್ಲಿ ಈಡೇರಿಸುವ ಆಶ್ವಾಸನೆ ನೀಡಿದರು.

ಐಟಿಐ ಕಾಲೇಜಿನ ಇತಿಹಾಸದಲ್ಲಿಯೇ ಇಷ್ಟೊಂದು ದಿನಗಳ ಕಾಲ ವಿದ್ಯಾರ್ಥಿಗಳು ಮುಷ್ಕರ ನಡೆಸಿದ್ದು ಇದೇ ಪ್ರಥಮವಾಗಿದ್ದು ಈ ಮುಷ್ಕರದಲ್ಲಿ ಮುಳುಗಿದ್ದ ಕೆಲವು ಉಪನ್ಯಾಸಕರಿಗಂತೂ ನುಂಗಲಾರದ ತುತ್ತಾಗಿತ್ತು. ಮತ್ತು ವಿದ್ಯಾರ್ಥಿಗಳ ಹೋರಾಟವನ್ನು ಸಮರ್ಥವಾಗಿ ಮುಂದುವರೆಸಿದ ಎಸ್‌ಎಫ್‌ಐಗೆ ಐಟಿಐ ವಿದ್ಯಾರ್ಥಿಗಳು ಅಭಿನಂದನೆ ಸಲ್ಲಿಸಿದ್ದಾರೆ. ಈ ಹೋರಾಟದ ನೇತೃತ್ವನ್ನು ಎಸ್‌ಎಫ್‌ಐನ ಮುಖಂಡರುಗಳಾದ ಕರುಣಾನಿಧಿ, ಐಟಿಐ ವಿದ್ಯಾರ್ಥಿ ಮುಖಂಡರುಗಳಾದ ಶಫೀ ಅಹಮದ್, ಚಿದಾನಂದ, ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಕೆ.ಮಹಾಂತೇಶ ವಹಿಸಿದ್ದರು.

ಜಪಾನ್‌ನಲ್ಲಿ ಭೀಕರ ಭೂಕಂಪ ದುರಂತ

ಜಪಾನ್‌ನ ಮಧ್ಯ ಹಾಗೂ ಪಶ್ಚಿಮದಲ್ಲಿರುವ ಕಾನ್ಸಾಯಪ್ರದೇಶದಲ್ಲಿ ಅತ್ಯಂತ ಬಲವತ್ತರವಾದ ಭೂಕಂಪ (ರಿಕ್ಟರ್ ಮಾನದಲ್ಲಿ 7.5 ತೀವ್ರತೆ ಯಿದ್ದು) ಸಂಭವಿಸಿ ಬಾರಿ ನಷ್ಟ ಉಂಟುಮಾಡಿದೆ. ಇದು 1928ರ ಕ್ಯಾಂಟೊ ಭೂಕಂಪದ ನಂತರ ಅತ್ಯಂತ ಭೀಕರ ದುರಂತ ಎನ್ನಲಾಗಿದೆ. ಇಲ್ಲಿಯವರಗೆ 4600 ಕ್ಕೂ ಹೆಚ್ಚು ಜನರು ಸತ್ತಿದ್ದು, 600ಕ್ಕೂ ಹೆಚ್ಚು ಜನರ ಪತ್ತೆ ಸಿಕ್ಕಿಲ್ಲ. 24 ಸಾವಿರ ಜನರು ಗಾಯಗೊಂಡಿದ್ದಾರೆ. 3 ಲಕ್ಷಕ್ಕೂ ಹೆಚ್ಚು ಜನರು ಮನೆ ಮಾರು ಕಳೆದು ಕೊಂಡು ನಿರಾಶ್ರಿತರಾಗಿದ್ದಾರೆ. 45 ಸಾವಿರಕ್ಕೂ ಹೆಚ್ಚು ಮನೆಗಳು ನಷ್ಟವಾಗಿದೆ.

ಪಶ್ಚಿಮ ಜಪಾನ್‌ನ ಅತಿ ದೊಡ್ಡ ಬಂದರು ಪಟ್ಟಣ ಕೊಬೆಯಲ್ಲಿ ಆಸ್ತಿಪಾಸ್ತಿಗಳಲ್ಲಿ ಭಾರಿ ಹಾನಿ ಉಂಟಾಗಿದೆ. 14ಲಕ್ಷ ಜನಸಂಖ್ಯೆ ಇರುವ ಕೊಬೆ ಇಂದು ಭಾರಿ ಕಟ್ಟಡಗಳು ಬಿದ್ದು ಸಮತಟ್ಟಾಗಿದೆ. ಗ್ಯಾಸಲೈನ್‌ಗಳು ಒಡೆದಿದ್ದರಿಂದ ಹಾಗೂ ಈ ನಗರದಲ್ಲಿ ಇರುವ ಬಾರಿ ಕಾರ್ಖಾನೆಗಳಿಗೆ ಆದ ಹಾನಿಯಿಂದ ಭಾರಿ ಬೆಂಕಿ ಹತ್ತಿಕೊಂಡು ಉರಿಯುತ್ತಿದ್ದವು. ರೈಲ್ವೇ ಸೇತುವೆಗಳು, ಓವರ್ ಬ್ರಿಜ್‌ಗಳು ನಾಶವಾಗಿರುವುದರಿಂದ ಜಪಾನ್ ಇತರ ಪ್ರದೇಶಗಳಲ್ಲಿ ಕಾನ್ಸಾಯ್‌ಗೆ ಸಂಪರ್ಕ ಕಡಿದು ಹೋಗಿತ್ತು. ಟೆಲಿಫೋನ್ ಹಾಗೂ ಇತರ ಸಂಪರ್ಕ ಮಾದ್ಯಮಗಳು ಕಡಿದು ಹೋಗಿವೆ. ಮಳೆ ಹಾಗೂ ಸೊನ್ನೆ ಡಿಗ್ರಿಯ ಚಳಿ ನಿರಾಶ್ರಿತರ ಪರಿಸ್ಥಿತಿಯನ್ನು ಇನ್ನೂ ದುರ್ಭರಗೊಳಿಸಿದೆ. ವಿದ್ಯುತ್, ನೀರು, ಗ್ಯಾಸ್ ಮುಂತಾದ ಎಲ್ಲಾ ಸಾರ್ವಜನಿಕ ಸೇವೆಗಳು ಕಡಿದು ಬಿದ್ದಿದೆ ಆಳಿದುಳಿದ ಜನರು ಕೊಬೆ ನಗರದಿಂದ ಓಡಿ ಹೋಗಿದ್ದಾರೆ. ಆಮೇಲೆ ಎರಡು ಮೂರು ಬಾರಿ ಕಡಿಮೆ ಶಕ್ತಿಯ ಭೂಕಂಪಗಳು ಜನರ ಪರಿಸ್ಥಿತಿಯನ್ನು ಇನ್ನಷ್ಟು ದುರ್ಭರಗೊಳಿಸಿದೆ.

ಸಾಮನ್ಯವಾಗಿ ಅತ್ಯುತ್ತಮ ಎನ್ನಲಾಗುವ ಜಪಾನ್ ತುರ್ತುಪರಿಸ್ಥಿತಿ ಪರಿಹಾರ ವ್ಯವಸ್ಥೆ ಈ ಸಂದರ್ಭದಲ್ಲಿ ಪರಿಣಾಮಕಾರಿಯಾಗಿರಲಿಲ್ಲ ಎಂದು ತೀವ್ರ ಟೀಕೆ ಕೇಳಿಬಂದಿದೆ. ಸರ್ಕಾರವೂ ಇದನ್ನು ಒಪ್ಪಿಕೊಂಡಿದೆ ಕನ್ಸಾಯ್ ಪ್ರದೇಶದಲ್ಲಿ ಭೂಕಂಪಗಳಾಗುವುದಿಲ್ಲ ಎಂಬ ಧೋರಣೆ ಇದಕ್ಕೆ ಕಾರಣವೆಂದು ಹೇಳಲಾಗಿದೆ. ಆದ್ದರಿಂದ ತುರ್ತಪರಿಸ್ಥಿತಿಗೆ ಸಿದ್ಧತೆಯ ಮಟ್ಟ ಬಹಳ ಕಡಿಮೆಯಾಗಿತ್ತು ನಿರಾಶ್ರಿತರಿಗೆ ಆಹಾರ ಮತ್ತು ಔಷಧಿಗಳ ಪೂರೈಕೆ ಹಲವು ದಿನಗಳ ನಂತರವೂ ಸುಗಮವಾಗಿ ನೇರವೇರುತ್ತಿಲ್ಲ. ಈ ಇಂತಹ ಭಾರಿ ಮಟ್ಟದಲ್ಲಿ ಪ್ರಕೃತಿ ಪ್ರಕೋಪಗಳನ್ನು ಎದುರಿಸಲು ಸರಿಯಾದ ತುರ್ತುಪರಿಸ್ಥಿತಿ ಪರಿಹಾರಕ್ಕೆ ಸಿದ್ಧತೆಯಲ್ಲಿ ನ್ಯೂನ್ಯತೆಗಳಿಂದ ಪಾಠ ಕಲಿತು ಜಪಾನ್‌ನಲ್ಲಿ ಮಾತ್ರವಲ್ಲ ಭಾರತ ಸೇರಿದಂತೆ ಎಲ್ಲಾ ದೇಶಗಳಲ್ಲಿ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು.

ಲೋಕಸಂಚಾರ

-ಶರತ್‌ಚಂದ್ರ

ಅಲ್ಜೀರಿಯಾದಲ್ಲಿ ಶಾಂತಿ ಪ್ರಸ್ತಾಪಕ್ಕೆ ಸರ್ಕಾರದ ನಕಾರ

ಅಲ್ಜೀರಿಯಾ ಇತ್ತೀಚೆಗೆ ಹಲವು ತಿಂಗಳುಗಳಿಂದ ಆಂತರಿಕ ಯುದ್ಧದ ರಕ್ತಪಾತದಲ್ಲಿ ಮುಳುಗಿ ಹೋಗಿದೆ. ಯುದ್ಧ ನಡೆಯುತ್ತಿರುವುದು ಸೈನ್ಯದ ನಿಯಂತ್ರಣದಲ್ಲಿರುವ ಸರ್ಕಾರ ಹಾಗೂ ಇಸ್ಲಾಮಿಕ್ ಮೂಲಭೂತವಾದಿ ವಿರೋಧಿ ರಂಗದ ನಡುವೆ ಈ ಪರಿಸ್ಥಿತಿಯನ್ನು ನಿವಾರಿಸಲು ೧೧ ವಿರೋಧಿ ಗುಂಪುಗಳು ರೋಮ್‌ನಲ್ಲಿ ನಡೆದ ಸಭೆಯೊಂದರಲ್ಲಿ ಇಟ್ಟ ಶಾಂತಿ ಪ್ರಸ್ತಾಪವನ್ನು ಸರಕಾರ ಹೊಸದೇನೂ ಇಲ್ಲ ಎಂದು ತಳ್ಳಿ ಹಾಕಿ ಶಾಂತಿ ಸ್ಥಾಪನೆಯ ಸಾದ್ಯತೆಯನ್ನು ಪುನಃ ಮುಂದಕ್ಕೆ ಹಾಕಿದೆ. ರೋಮ್‌ನಲ್ಲಿ ಕೆಥೋಲಿಕ್ ಶಾಂತಿ ಚಳುವಳಿಯ ಗುಂಪೊಂದು ಸಂಘಟಿಸಿದ್ದ ಈ ಸಭೆಯಲ್ಲಿ ಸೈನಿಕ ಸರ್ಕಾರ ಹಾಗೂ ಮುಖ್ಯ ವಿರೋಧ ಇಸ್ಲಾಮಿಕ್ ವಿಮೋಚನಾ ರಂಘ (FIS) ಅಧಿಕೃತವಾಗಿ ಭಾಗವಹಿಸದಿದ್ದರೂ ಗುಂಪಿನ ಅನಧಿಕೃತ ಪ್ರತಿನಿಧಿಗಳುಹಾಗೂ ಇತರ ಎಲ್ಲಾ ಗುಂಪುಗಳು ಭಾಗವಹಿಸಿದ್ದರು.

FIS ನ ಅನದಿಕೃತ ಪ್ರತಿನಿಧಿ, FLN (ಫ್ರಾನ್ಸ್‌ನ ವಿರುದ್ಧ ರಾಷ್ಟ್ರೀಯ ವಿಮೋಚನಾ ಹೋರಾಟ ನಡೆಸಿದ್ದ ಮಾಜಿ ಆಳುವ ಪಕ್ಷ) ಸೋಶಲಿಸ್ಟರು ಅಹ್ಮದ್ ಬೆನ್ ಬೆಲ್ಲಾ (ಅಲ್ಜೀರಿಯಾದ ಪ್ರಥಮ ಅಧ್ಯಕ್ಷ) ಇತ್ಯಾದಿ ಬಾಗವಹಿಸಿದ್ದರು. ರಾಜಕೀಯ ಬಂದಿಗಳ ಬಿಡುಗಡೆ, ಸೆನ್ಸಾರ್ ಶಿಪ್ ಚಿತ್ರ ಹಿಂಸೆ ಗಲ್ಲು ಶಿಕ್ಷೆಗಳ ನಿಲುಗಡೆ ಸಾವಿರಾರು ಇಸ್ಲಾಮಿಕ್ ದಂಗೆಕೋರರನ್ನು ಹಿಡಿದಿಟ್ಟಿರುವ ಕ್ಯಾಂಪ್ ಗಳ ಮುಚ್ಚುವಿಕೆ, ದಂಗೆ ಕೋರರ ವಿರುದ್ಧ ಕಾರ್ಯಚರಣೆಯ ಹೆಸರಿನಲ್ಲಿ ನಾಗರಿಕರ ಮೇಲೆ ಪ್ರತೀಕಾರದ ನಿಲುಗಡೆ, ಮೂರು ವರ್ಷಗಳ ತುರ್ತಪರಿಸ್ಥಿತಿ ರದ್ಧತಿ, FIS ಸದಸ್ಯರಿಗೆ ಸಭೆ ನಡೆಸಲು ಸ್ವತಂತ್ರ- ಈ ಬೇಡಿಕೆಗಳನ್ನು ಸರ್ಕಾರ ಒಪ್ಪಿದರೆ ಶಾಂತಿ ಮಾತುಕತೆ ಆರಂಭಿಸಬಹುದು ಎಂಬುದು ಈ ಗುಂಪಿನ ನಿರ್ಣಯವಾಗಿತ್ತು.

ಅಲ್ಜೀರಿಯಾದಲ್ಲಿ 'ಕಾನೂನು ವ್ಯವಸ್ಥೆ ಪರಿಸ್ಥಿತಿ ತೀವ್ರವಾಗಿ ಆತಂಕಕಾರಿಯಾಗಿದೆ. ಆಂತರಿಕ ಯುದ್ಧದಲ್ಲಿ ೩೦ ಸಾವಿರಕ್ಕೂ ಹೆಚ್ಚು ಜನರು ಸತ್ತಿದ್ದಾರೆ. ಪ್ರತಿವಾರ ಈ ಯುದ್ಧ ೫೦೦ ರಿಂದ ಸಾವಿರ ಜನರನ್ನು ಬಲಿತೆಗೆದು ಕೊಳ್ಳುತ್ತದೆ. ೧೦ ಸಾವಿರ ಜನ ಸ್ಥಾನ ಬದ್ಧತಾ ಕ್ಯಾಂಪ್ ಗಳಲ್ಲಿ ಬಂದಿಯಾಗಿದ್ದಾರೆ.ಗ್ರಾಮೀಣ ಪ್ರದೇಶದಲ್ಲಿನ ದೊಡ್ಡ ಪ್ರಮಾಣದ ಪ್ರದೇಶಗಳಿಗೆ ಸೈನ್ಯ, ಪೋಲಿಸ್ ಕಾಲಿಡದ ಪರಿಸ್ಥಿತಿ ಇದೆ. ಗ್ರಾಮೀಣ ಪ್ರದೇಶಗಳಿಂದ ಪಾಶ್ಚಿಮಾತ್ಯ ಜೀವನ ವಿದಾನ ಹೊಂದಿರುವ ಬುದ್ಧಿಜೀವಿ ಹಾಗೂ ಇತರ ಮಧ್ಯಮ ವರ್ಗದ ಜನರನ್ನು ಓಡಿಸಲಾಗುತ್ತಿದೆ. ೨೦ ಉದಾರವಾದಿ ಪತ್ರಕರ್ತರನ್ನು ಕೊಲ್ಲಲಾಗಿದೆ. ಅಲ್ಜೀರಿಯಾದ ಮದ್ಯ ಉದ್ಯಮವಾದ ತೈಲ ಉದ್ಯಮದಲ್ಲಿ ಕೆಲಸ-ಮಾಡುತ್ತಿರುವ ವಿದೇಶಿ ತಾಂತ್ರಿಕತಜ್ಞರನ್ನು ಮೂಲಭೂತವಾದಿಗಳ ಬೆದರಿಕೆಯಿಂದ ಹಿಂತೆಗೆಯಲಾಗಿದೆ. GIA ಎಂಬ ಸಶಸ್ತ್ರ ಮೂಲಭೂತವಾದ ಗೆರಿಲ್ಲಾ ಗುಂಪು ಏರ್ ಫ್ರಾನ್ಸ್‌ನ ವಿಮಾನ ಅಪಹರಣದಲ್ಲಿ ಮೂರು ಪ್ರಯಾಣಿಕರನ್ನು ಕೊಂದಿತ್ತು. ಹಲವಾರು ಪಾಶ್ಚಿಮಾತ್ಯ ಪಾದ್ರಿಗಳನ್ನು ಕೊಲ್ಲಲಾಗಿದೆ. ಜನವರಿ ಕೊನೆ ಒಳಗೆ ಮುಚ್ಚದ ಪಾಶ್ಚಿಮಾತ್ಯ ರಾಯಭಾರಿ ಕಛೇರಿ ಸಿಬ್ಬಂದಿಯನ್ನು ಕೊಲ್ಲುವುದಾಗಿ GIA ಬೆದರಿಕೆ ಹಾಕಿದೆ. ಪಾಶ್ಚಿಮಾತ್ಯ ದೇಶಗಳುಸೈನಿಕ ಸರ್ಕಾರವನ್ನು ಬೆಂಬಲಿಸುತ್ತಿವೆ. ಇಸ್ಲಾಮಿಕ್ ಮೂಲಭೂತವಾದಿಗಳ ವಿರುದ್ದ ಯುದ್ಧದಲ್ಲಿ ಸರ್ಕಾರ ಸೋತರೆ ಈ ದೇಶಗಳಿಗೆ ಭಾರಿ ಹಾನಿಯಾಗಲಿದೆ. ಅಲ್ಜೀರಿಯಾದಲ್ಲಿ ೧೫ ಶತಕೋಟಿ ಡಾಲರುಗಳ ಬಂಡವಾಳಹೂಡಿವೆ. ಪಾಶ್ಚಿಮಾತ್ಯ ಹಣ ಕಾಸು ಸಂಸ್ಥೆಗಳಿಗೆ ೨೫ ಶತಕೋಟಿ ಡಾಲರು ಸಾಲಬಾಕಿ ಇದೆ ಅಲ್ಜೀರಿಯಾದ್ದು ಯುರೋಪ್‌ಗೆ ಅಲ್ಜೀರಿಯಾ ರಶ್ಯಾಹಾಗೂ ನಾರ್ವೆ ಬಿಟ್ಟರೆ ಮೂರನೇ ಅತಿದೊಡ್ಡ ಪ್ರಾಕೃತಿಕ ಗ್ಯಾಸ್ ಪೂರೈಕೆದಾರ

ಚುನಾವಣೆಗಳು ನಡೆದರೆ FIS ಬಹುಮತ ಗಳಿಸೀತು-ಎಂಬುದು ಸೈನ್ಯದ ಭಯ. ಆದರೆ ನಿಜವಾಗಿ ಅಲ್ಜೀರಿಯಾದಲ್ಲಿ FIS ಗೆ ನಿಜವಾದ ಬೆಂಬಲ ಇಲ್ಲ, ಕಳೆದ ಚುನಾವಣೆಯಲ್ಲಿ FIS ಬಹುಮತಗಳಿಸಿದ್ದು ಅದರ ಬೆಂಬಲಗರಲ್ಲದ ಮಧ್ಯಮವರ್ಗದವರನ್ನು ಬೆದರಿಕೆಯಿಂದ ಮತಗಟ್ಟೆಗೆ ಬರದಂತೆ ಮಾಡಲಾಗಿತ್ತು.

ಚುನಾವಣೆ ಬಗ್ಗೆ ಉದಾಸೀನ ಸಹ FIS ಗೆ ಸಹಾಯಕಾರಿಗಿತ್ತು. ಅಲ್ಜೀರಿಯಾದಲ್ಲಿ ಗಂಡಸರಿಗೆ ಮಾತ್ರ ಮತದಾನ ಹಕ್ಕು ಇರುವುದು. ಹೆಂಗಸರಿಗೆ ಮತದಾರನದ ಹಕ್ಕು ಕೊಟ್ಟು, FIS ಗೆ ವಿರೋಧವಾಗಿರುವ ಜನ ವಿಭಾಗಗಳಿಗೆ ಮತದಾನದ ಬಗ್ಗೆ ಆಸಕ್ತಿ ಹುಟ್ಟಿಸಿದರೆ FIS ನ್ನು ರಾಜಕೀಯವಾಗಿ ಸೋಲಿಸುವುದು ಸಾದ್ಯ. ಆದರೆ ಸರ್ಕಾರ ಈ ರಾಜಕೀಯ ಪರಿಹಾರದತ್ತ ಬಲಿಯುವ ಸಾಧ್ಯತೆ ಕಡಿಮೆ ಇಲ್ಲದಿದ್ದರೆ ಅಲ್ಜೀರಿಯಾದ ಪರಿಸ್ಥಿತಿ ಇನ್ನಷ್ಟು ಕೆಡುವದು ಖಂಡಿತ.

ಚೆಚೆನ್ಯಾದಲ್ಲಿ ಬೇಸ್ತು ಬಿದ್ದ ರಶ್ಯನ್ ಸೈನ್ಯ

ಕೆಲವೇ ದಿನಗಳಲ್ಲಿ ಚೆಚೆನ್ಯಾದ ಸರ್ಕಾರವನ್ನು ನಿಯಂತ್ರಣದಲ್ಲಿ ತರುತ್ತೇವೆ ಎಂದು ಹೊರಟ ಯೆಲ್ ಸ್ಟಿನ್ನರ ರಸ್ಯನ್ ಸೈನ್ಯ ಸುಮಾರು ಮೂರು ವಾರಗಳ ಕಾಲ ಭೀಕರ ಕದನದ ನಂತರ ರಾಜಧಾನಿ ಗ್ರೋಝ್ನಿ ಮೇಲೆ ನಿಯಂತ್ರಣ ಹೊಂದಿದೆ ಎಂದು ಕೊಳ್ಳುತ್ತದೆ. ಆದರೆ ಚೆಚೆನ್ಯಾದಲ್ಲಿ ಗೆರಿಲ್ಲಾ ಪಡೆಗಳ ಪ್ರತಿರೋಧ ಇನ್ನು ನಡೆದಿದೆ. ರಾಜದಾನಿ ಹಾಗೂ ಅದ್ಯಕ್ಷೀಯ ಅರಮನೆ ಮೇಲೆ ನಿಯಂತ್ರಣ ಸಾಧಿಸಲು ಬಾರಿ ನಾಗರಿಕರ ಪ್ರಾಣ ಮತ್ತು ಆಸ್ತಿ ಪಾಸ್ತಿಗೆ ಹಾನಿ ಮಾಡಬೇಕಾಯಿತು. ಅಲ್ಲದೆ ರಶ್ಯನ್ ಪಡೆಗಾದ ಹಾಗೂ ಶಸ್ತ್ರಾಸ್ತ್ರಗಳಿಗೆ ಆದ ಹಾನಿಯೂ ಅಪಾರ ನೂರಕ್ಕೂ ಹೆಚ್ಚು ರಷ್ಯನ್ ಟ್ಯಾಂಕ್‌ಗಳನ್ನು ಸರಳ ಶಸ್ತ್ರಾಸ್ತ್ರಗಳಿಂದ ಚೆಚೆನ್ಯಾ ಗೆರಿಲ್ಲಾ ಪಡೆಗಳು ನಾಶಮಾಡಿದೆ. ೬೦೦ಕ್ಕೂ ಹೆಚ್ಚು ರಸ್ಯನ್ ಸೈನಿಕರು ಸತ್ತಿದ್ದಾರೆ ಎನ್ನಲಾಗಿದೆ. ಆದರೂ ಚೆಚೆನ್ಯಾ ಗೆರಿಲ್ಲಾ ಪಡೆಗಳು ಇನ್ನೂ ಗ್ರಾಮೀಣ ಪ್ರದೇಶಗಳಲ್ಲಿ ರಶ್ಯನ್ ಪಡೆಗಳಿಗೆ ಬಾರಿ ಪ್ರತಿರೋಧ ಒಡ್ಡುತ್ತಿದೆ. ಈ ಗೆರಿಲ್ಲಾ ಕಾಳಗ ಹಲವು ತಿಂಗಳುಗಳ ಕಾಲ ವರ್ಷಗಳ ಕಾಲವೂ ಮುಂದುವರೆಯಬಹುದು ಎಂದು ರಶ್ಯನ್ ಪಡೆಗಳಲ್ಲಿ ಆತಂಕ ಹರಡಿದೆ.

ರಶ್ಯನ್ ಸೈನ್ಯದಲ್ಲಿ ನಾಗರಿಕರ ಮೇಲೆ ಹಲ್ಲೆ ನಡೆಸಲು ಹಿಂಜರಿಕೆ,ಯುದ್ಧದ ನಿರ್ವಹಣೆಯಲ್ಲಿ ಅರಾಜಕತೆ ಗೊಂದಲ ಮತ್ತು ಯುದ್ಧ ತಂತ್ರದಲ್ಲಿ ಪ್ರಮಾದ ಗಳಿಂದ ರಶ್ಯನ್ ಸೈನ್ಯಕ್ಕೆ ಈ ಅವಮಾನಕಾರಿ ಪರಿಸ್ಥಿತಿ ಉಂಟಾಗಿದೆ ಇದರ ಪರಿಣಾಮ ಚೆಚೆನ್ಯಾದಲ್ಲಿ ಮಾತ್ರವಲ್ಲ ಇವರ ಕಡೆಗೂ ತೀವ್ರವಾಗಿ ಆದಬಹುದು ಒಂದೆಡೆ ರಶ್ಯನ್ ಸರ್ಕಾರವನ್ನು ಪಾಶ್ಚಿಮಾತ್ಯ ಸರಕಾರಗಳೇ ಈ ಕ್ರೂರ ಮಿಲಿಟರಿ ಆಕ್ರಮಣಕ್ಕಾಗಿ ಟೀಕಿಸಿದೆ. ಇನ್ನೊಂದೆಡೆ ರಶ್ಯದ ಇತರ ಪ್ರದೇಶಗಳಲ್ಲಿ ಸರಕ್ಕಾರದ ಅಧಿಪತ್ಯಕ್ಕೆ ತೀವ್ರ ಹಾನಿ ಉಂಟಾಗಿದೆ. ಸೈನ್ಯದಲ್ಲಿ ಈ ಅವಮಾನದಿಂದ ತೀವ್ರ ಅತೃಪ್ತಿ ಹರಡಿದೆ. ಮಿಲಿಟರಿ ಉಚ್ಚವಲಯದಲ್ಲಿರುವ ಅರಾಜಕತೆ ಗೊಂದಲ ಬಹಿರಂಗವಾಗಿದೆ.

ಇಟಲಿಗೆ ತಾತ್ಕಾಲಿಕ ಸರ್ಕಾರ

ಏಳು ತಿಂಗಳಲ್ಲೇ ಕುಸಿದು ಬಿದ್ದ ಇಟಲಿಯ ಸಮಿಶ್ರ ಸರಕಾರದಿಂದ ಉಂಟಾದ ರಾಜಕೀಯ ಬಿಕ್ಕಟ್ಟನ್ನು ನಿವಾರಿಸಲು, ಇಟಲಿಯ ಅಧ್ಯಕ್ಷ ಸ್ಕಾಲೋಫಾರೋ ಒಂದು ತಾತ್ಕಾಲಿಕ ಸರ್ಕಾರ ನೇಮಿಸಿದ್ದಾರೆ. ಯಾವುದೇ ಪಕ್ಷಕ್ಕೆ ಸೇರದ ಬ್ಯಾಂಕರ್ ಲ್ಯಾಂಬರ್ಟೋದಿ ನಿಲಿವರನ್ನು ತಾತ್ಕಾಲಿಕ ಸರ್ಕಾರದಲ್ಲಿ ಪ್ರಧಾನಿಯಾಗಿ ನೇಮಿಸಲಾಗಿದೆ. ಆದರೆ ಪ್ರಸಕ್ತ ಪಾರ್ಲಿಮಂಟ್ ಅಸ್ತಿತ್ವದಲ್ಲಿರುತ್ತದೆ. ಈ ತಾತ್ಕಾಲಿಕ ಸರ್ಕಾರಕ್ಕೆ ಎಷ್ಟರ ಮಟ್ಟಿಗೆ ಇಟಲಿಯ ರಾಜಕೀಯ ಪಕ್ಷಗಳ ಸರಕಾರ ಸಿಗುತ್ತದೆ. ಎಂಬುದನ್ನು ಕಾದು ನೋಡ ಬೇಕಾದರೆ ಒಂದು ಚುನಾವಣೆ ನಡೆದು ಒಂದು ವರ್ಷದೊಳಗೆ ಇನ್ನೊಂದು ಚುನಾವಣೆ ನೆಡೆಸುವುದರ ಬಗ್ಗೆ ಅದ್ಯಕ್ಷರಿಗೆ ಸಂದಿಗ್ಧಕ್ಕಿಟ್ಟುಕೊಂಡಿದೆ. ಮಾಜಿ ಪ್ರದಾನಿಯ ಫೋರ್ಝ್-ಇಟಲಿಯ ಹಾಗೂ ನವ-ಫ್ಯಾಸಿಸ್ಟ್ ಪಕ್ಷಗಳು ತತ್ ಕ್ಷಣ ಚುನಾವಣೆಗೆ ಆಗ್ರಹಪಡಿಸುತ್ತವೆ. ಇಟಲಿಯ ಭ್ರಷ್ಟ ವ್ಯವಸ್ಥೆ ವಿರುದ್ಧ ನ್ಯಾಯಾಂಗ ನಡೆಸುತ್ತಿರುವ ಕಾರ್ಯಾಚರಣೆ ಪರಿಣಾಮಕಾರಿ ಯಾಗುವ ಮೊದಲು ಚುನಾವಣೆ ನಡೆಯಬೇಕೆಂದು ಅವುಗಳ ಬಯಕೆ ಇಟಲಿಯ ಎಲ್ಲಾ ಖಾಸಗಿ ಚಾನಲ್‌ಗಳ ಒಡೆತನ ಹಾಗೂ ವಾಣಿಜ್ಯ ವ್ಯವಹಾರದಲ್ಲಿ ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ಮಾಜಿ ಪ್ರದಾನಿ ಬೆರ್ಲುಸ್ಕೋನಿಯ ವಿರುದ್ಧ ವಿಚಾರಣೆ ಯನ್ನು ತಾತ್ಕಾಲಿಕ ಸರ್ಕಾರ ಮುಗಿಸುವವರಗೆ ಚುನಾವಣೆ ನಡೆಸಬಾರದು ಎಂದು ವಿರೋಧಪಕ್ಷಗಳಾದ ಮಾಜಿ ಇಟಲಿಯನ್ ಕಮ್ಯುನಿಸ್ಟ್ ಮತ್ತಿತರ ಮಿತ್ರ ಪಕ್ಷಗಳ ನಿಲುವು ಪ್ರಾದೇಶಿಕ ಪಕ್ಷ ನಾರ್ದರ್ನ್ ಲೀಗ್ ಸಹ ಇದೇ ನಿಲುವು ತೆಳಿದಿದೆ.

ಔಶ್‌ವಿಟ್ಝ್‌ನ ಕರೆಯಿದು

ಫ್ಯಾಸಿಸಂನ ಅಮಾನವೀಯತೆಯ ಪ್ರಧಾನ ಪ್ರತೀಕ ಪೋಲಂಡಿನ ಔಶ್ ವಿಟ್ಝ್‌ನ ಯಾತನಾ ಶಿಬಿರ. ಜನಾಂಗೀಯ, ಧಾರ್ಮಿಕ ಅಸಹನೆ, ದ್ವೇಷ ಮತ್ತೆ ತಲೆಯೆತ್ತಿರುವ, ಗೌರವಾರ್ಹವೆಸಿರುವ ಈಗಿನ ಪರಿಸ್ಥಿತಿಯಲ್ಲಿ ಫ್ಯಾಸಿಸಂನ್ನು ಸೃಷ್ಟಿಸಿ ಪೋಷಿಸುವ ಸಾಮ್ರಾಜ್ಯಶಾಹಿಯ ವಿರುದ್ಧ ನಿರಂತರ ಹೋರಾಟ ಅತ್ಯಂತ ಮಹತ್ವದ್ದು ಎಂದು ನೆನಪಿಸುವ 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಯ ಸಂಪಾದಕೀಯ.

ಐವತ್ತು ವರ್ಷಗಳಹಿಂದಿನ ಮಾತು. ಜನವರಿ ೨೭, ೧೯೪೫. ಪೋಲೆಂಡಿನ ಔಶ್‌ವಿಟ್ಝ್‌-ನಾಝಿಗಳು ತಮ್ಮ ಬಂಧಿಗಳ ಸಾಮೂಹಿಕ ಹತ್ಯೆಗೆಂದು ನಿರ್ಮಿಸಿದ ಬೃಹತ್ ಯಾತನಾ ಶಿಬಿರವನ್ನು ಸೋವಿಯತ್ ಒಕ್ಕೂಟದ ಕೆಂಪು ಸೇನೆ ವಿಮುಕ್ತಗೊಳಿಸಿತು.

ಸಾವನ್ನು ಒಂದು ವ್ಯಾಪಾರವಾಗಿ ಮಾಡಬಹುದು ಎಂದು ಹಿಟ್ಲರನ ಫ್ಯಾಸಿಸ್ಟ್ ಜರ್ಮನಿ ಸಿದ್ಧಪಡಿಸಿತು. ಈ ಸಾವನ್ನು ಒಂದು ಉದ್ದಿಮೆಯಾಗಿಸಬಹುದು ಎಂದು ಔಶ್‌ವಿಟ್ಝ್‌ ಸಾಬೀತುಪಡಿಸಿತು. ಸೋವಿಯತ್ ಅಂದಾಜುಗಳ ಪ್ರಕಾರ ಸುಮಾರು ೪೦ ಲಕ್ಷ ಯೆಹೂದ್ಯರು, ಜಿಪ್ಸಿಗಳು, ಪೋಲಂಡಿನವರು, ಕಮ್ಯುನಿಸ್ಟರು ಮತ್ತು ಯುದ್ಧ ಕೈದಿಗಳನ್ನು ಈ ಶಿಬಿರದಲ್ಲಿ ಕಡಿದು ಹಾಕಲಾಯಿತು; ಈ ಶಿಬಿರದ ಬೃಹತ್ ಒಲೆಗಳಲ್ಲಿ ಸುಟ್ಟು ಬೂದಿ ಮಾಡಲಾಯಿತು.

ಪೋಲಂಡಿನ ಔಶ್‌ವಿಟ್ಝ್‌ ನಗರದ ಬಳಿ ಯಿದ್ದ ಮಾಜಿ ಸೇನಾ ಶಿಬಿರವನ್ನು ೧೯೪೦ರಲ್ಲಿ ಯಾತನಾ ಶಿಬಿರವನ್ನಾಗಿ ಮಾಡಲಾಯಿತು. ಕೈದಿಗಳ ಮೊದಲ ತಂಡವನ್ನು ಎದುರುಗೊಳ್ಳುತ್ತಾ ಆ ಶಿಬಿರದ ಮುಖ್ಯಸ್ಥನಾಗಿದ್ದ ನಾಝಿ ಗುಪ್ತಚರ ಪಡೆಯ ಮುಖ್ಯಸ್ಥ ಘೋಷಿಸಿದ ನಂತೆ-"ನೀವು ಆರೋಗ್ಯಾಲಯಕ್ಕೇನೂ ಬಂದಿಲ್ಲ, ಜರ್ಮನ್ ಯಾತನಾ ಶಿಬಿರಕ್ಕೆ ಬಂದಿದ್ದೀರಿ. ಇಲ್ಲಿಂದ ಹೊರಗೆ ಹೋಗುವ ಏಕೈಕ ದಾರಿಯೆಂದರೆ ಹೊಗೆ ಕೊಳವೆ ಮಾತ್ರ." ನಲ್ವತ್ತು ಲಕ್ಷ ಮಂದಿ ಹೊಗೆಗೂಡಿನ ಮೂಲಕ ಹೊಗೆಯಾಗಿ ಹೋಗಿಬಿಟ್ಟರು. ಈ ಔಶ್‌ವಿಟ್ಝ್‌ ಇತಿಹಾಸದಲ್ಲಿ ಪೂರ್ಣಾಹುತಿ(Holocaust)ಎಂದು ಹೆಸರಾದ ಹಿಟ್ಲರ್ ಕಂಡರಿಸಿದ ಯೆಹೂದಿ ಸಮಸ್ಯೆಯ ಅಂತಿಮ ಪರಿಹಾರದ ಕೇಂದ್ರ ಪ್ರತೀಕವಾಗಿಬಿಟ್ಟಿತು.

ಇಂತಹ ಹಲವು ಶಿಬಿರಗಳಲ್ಲಿ ಒಂದಾದ ಈ ಔಶ್‌ವಿಟ್ಝ್‌ ಯಾತನಾ ಶಿಬಿರವನ್ನು ಅತ್ಯಂತ ದಕ್ಷತೆಯಿಂದ ಯೋಜಿಸಿ ನವೀಕರಿಸಲಾಗಿದ್ದು ಒಮ್ಮೆಲೆ ನೂರಾರು ಮಂದಿಯನ್ನು ತುಂಬಿಸಿಕೊಳ್ಳಬಲ್ಲ ಗ್ಯಾಸ್ ಚೇಂಬರ್(ಅನಿಲ ಕೋಣೆ)ಗಳನ್ನು ನಿರ್ಮಿಸಲಾಯಿತು. ನೂರಾರು ಮಂದಿಯನ್ನು ಒಮ್ಮೆಲೆ ಸುಡಬಹುದಾದ ಒಲೆಗಳನ್ನು ರಚಿಸಲಾಯಿತು. ಅವಕ್ಕೆ ಹೊಗೆ ಕೊಳವೆಗಳನ್ನು ಜೋಡಿಸಲಾಯಿತು. ಅತ್ಯಂತ ವಿವರವಾದ ಸಾವಿನ ಯೋಜನೆ ಅದಾಗಿತ್ತು. ಈ ಸುವ್ಯವಸ್ಥಿತ ಉದ್ದಿಮೆಯ ಮೂಲಕ ನಲ್ವತ್ತು ಲಕ್ಷ ಜನ ಹಾದು ಹೋದರು, ಹೊಗೆಯಾಗಿ ಬಿಟ್ಟರು.

ಇದು ಫ್ಯಾಸಿಸಂನ ನಿಜರೂಪವಾಗಿತ್ತು.

ಔಶ್‌ವಿಟ್ಝ್‌ ಇಂದು ಫ್ಯಾಸಿಸಂನ ಕಾರ್ಯರೂಪದ ಪ್ರತೀಕವಾಗಿ ನಿಂತಿದೆ. ಈಗ ಔಶ್‌ವಿಟ್ಝ್‌

ಪುಟ 8 ನೋಡಿ



ಹಿಟ್ಲರನ ಫ್ಯಾಸಿಸ್ಟ್ ಜರ್ಮನಿ ಸಾವನ್ನು ವ್ಯಾಪಾರವಾಗಿ ಮಾಡಬಹುದು ಎಂದು ತೋರಿಸಿಕೊಟ್ಟಿತು. ಈ ಸಾವನ್ನೇ ಉದ್ದಿಮೆಯಾಗಿ ಮಾಡಬಹುದು ಎಂದು ಔಶ್‌ವಿಟ್ಝ್‌ ತೋರಿಸಿಕೊಟ್ಟಿತು. ಯಾತನಾ ಶಿಬಿರದ ಒಂದು ದೃಶ್ಯ.

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462
ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ದೇಶದ ಹಿತಾಸಕ್ತಿಗಳನ್ನು ಮಾರಿಕೊಂಡ ನಿರ್ಣಯ

ರಾವ್ ಸರಕಾರದ ಟೆಲಿಕಾಂ ನಿರ್ಣಯದ ಬಗ್ಗೆ ಸಿಐಟಿಯು ಖಂಡನೆ

ಭಾರತ ಸರಕಾರ ಪ್ರಕಟಿಸಿದ ಟೆಲಿಕಾಂ ಕುರಿತಾದ ನಿರ್ಣಯಗಳು ನಮ್ಮ ಆರ್ಥಿಕದ ಈ ಮಹತ್ವಪೂರ್ಣ ವಲಯದಲ್ಲಿ ಬಹುರಾಷ್ಟ್ರೀಯ ಕಂಪೆನಿಗಳಿಗೆ ಪ್ರಮುಖ ಪಾತ್ರ ನೀಡಿದೆ ಎಂದು ಸಿಐಟಿಯು ಕಾರ್ಯದರ್ಶಿ ಮಂಡಳಿ ಖಂಡಿಸಿದೆ.

ವಿದೇಶೀ ಬಂಡವಾಳ ಹೂಡಿಕೆ ಕುರಿತಾದ ಸಂಘಟಿತ ಸಮಿತಿ ಯುಎಸ್.ವೆಸ್ಟ್ ಎಂಬ ಅಮೇರಿಕಾದ ದೈತ್ಯ ಸಂಪರ್ಕ ಉದ್ದಿಮೆಯ ಬಹುರಾಷ್ಟ್ರೀಯ ಕಂಪೆನಿಗೆ ಲೈಸೆನ್ಸ್ ನೀಡಿರುವುದು ಭಾರತದ ಹಿತಾಸಕ್ತಿಗಳನ್ನು ಮಾರಿಕೊಂಡಿರುವ ಒಂದು ನಿರ್ಣಯ ಎಂದು ಸಿಐಟಿಯು ಆಪಾದಿಸಿದೆ. ಈ ಬಹುರಾಷ್ಟ್ರೀಯ ಕಂಪೆನಿ ಏನೇನು ಕರಾರು ಹಾಕಿತ್ತೋ ಅವನ್ನೆಲ್ಲಾ ಭಾರತ ಸರಕಾರ ರಾಷ್ಟ್ರೀಯ ಹಿತಾಸಕ್ತಿಗಳನ್ನು ಗಮನಕ್ಕೇ ತಗೊಳ್ಳದೆ ಒಪ್ಪಿಕೊಂಡಿದೆ ಎಂದು ಸಿಐಟಿಯು ಖೇದ ವ್ಯಕ್ತಪಡಿಸಿದೆ.

ಭಾರತ ಸರಕಾರ ಕರೆದಿದ್ದ ಟೆಂಡರ್‌ನಲ್ಲಿ ಭಾರತೀಯ ಕಂಪೆನಿಗಳು ಒಂದು ವಿದೇಶೀ ಬಹುರಾಷ್ಟ್ರೀಯ ಕಂಪೆನಿಯೊಂದಿಗೆ ಸಹಕಾರ ಹೊಂದಿರಬೇಕು ಎಂಬುದೊಂದು ಕಡ್ಡಾಯ ಶರತ್ತಾಗಿತ್ತು. ಆದ್ದರಿಂದ ನಮಗೆ ಎಂತಹ ಸಂಪರ್ಕ ತಂತ್ರಜ್ಞಾನ ಬೇಕು ಎಂಬುದನ್ನು ಬಹುರಾಷ್ಟ್ರೀಯ ಕಂಪೆನಿಯೇ ನಿರ್ಧರಿಸಲು ಅವಕಾಶ ನೀಡಿದಂತಾಯಿತು. ಆ ಕಂಪೆನಿ ಹೇರಿದ ತಂತ್ರಜ್ಞಾನವನ್ನೇ ನಾವು ಸ್ವೀಕರಿಸಬೇಕು!

ಸಾರ್ವಜನಿಕ ವಲಯದ ಕಂಪೆನಿಗಳು ಇದರಲ್ಲಿ ಭಾಗವಹಿಸುವಂತಿಲ್ಲವೆಂಬ ನಿರ್ಣಯವಂತೂ ಆಘಾತಕಾರಿ. ಇದರಿಂದ ಸಂಪರ್ಕ ಮತ್ತು ಇಲೆಕ್ಟ್ರಾನಿಕ್ ವಲಯದ ಸಾರ್ವಜನಿಕ ಉದ್ದಿಮೆಗಳಿಗೆ ದೊಡ್ಡ ಪೆಟ್ಟು ನೀಡಿದಂತಾಗಿದೆ ಎಂದು ಸಿಐಟಿಯು ಕಾರ್ಯದರ್ಶಿ ಮಂಡಳಿ ಅಭಿಪ್ರಾಯಪಟ್ಟಿದೆ. ದೂರಸಂಪರ್ಕ ಇಲಾಖೆ ಈಗ ಪೂರ್ಣವಾಗಿ ಬಹುರಾಷ್ಟ್ರೀಯ ಕಂಪೆನಿಗಳ ಹತೋಟಿಯಲ್ಲಿದೆ. ಈ ನಿರ್ಣಾಯಕ ವಲಯದಲ್ಲಿ ಅದು ರಾಷ್ಟ್ರೀಯ ಹಿತಾಸಕ್ತಿಗಳನ್ನು ಬಲಿಕೊಟ್ಟಿದೆ ಎಂದು ಅದು ಟೀಕಿಸಿದೆ.

ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದಲೂ ಭಾರತ ಸರಕಾರದ ನಿಲುವು ಅಪಾಯಕಾರಿ. ಸಂಪರ್ಕ ಜಾಲದ ಮೇಲಿನ ಹತೋಟಿಯ ಮೂಲಕ ಬಹುರಾಷ್ಟ್ರೀಯ ಕಂಪೆನಿಗಳು ನಮ್ಮ ರಕ್ಷಣಾ ರಹಸ್ಯಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಇದರಿಂದ ಯುದ್ಧ ಸಮಯದಲ್ಲಿ ಭಾರತದ ಸ್ಥಿತಿ ಶೋಚನೀಯವಾಗಬಹುದು ಎಂದು ಸಿಐಟಿಯು ಹೇಳಿದೆ.

ದೂರಸಂಪರ್ಕ ವಲಯದಲ್ಲಿ ಭಾರತೀಯ ಖಾಸಗೀ ವಲಯ ಹಾಗೂ ವಿದೇಶೀ ಬಹುರಾಷ್ಟ್ರೀಯ ಕಂಪೆನಿಗಳ ಪ್ರವೇಶದಿಂದ ಕೊನೆಗೆ ಆರ್ಥಿಕ ನಿರ್ವಹಣೆಯ ನೆವದಲ್ಲಿ ದೂರಸಂಪರ್ಕ ಸೇವೆಗಳ ದರಗಳು ಹೆಚ್ಚುತ್ತದೆ. ಇದು ಜನಗಳ ಮೇಲೆ ಇನ್ನೂ ಹೆಚ್ಚಿನ ಹೊರೆ ಹಾಕಿ ದೂರಸಂಪರ್ಕ ಸೇವೆಗಳು ಕೇವಲ ಕೆಲವೇ ಉಳ್ಳವರ ಸ್ವತ್ತಾಗಿ ಬಿಡುತ್ತದೆ ಎಂದು ಸಿಐಟಿಯು ಭೀತಿ ವ್ಯಕ್ತಪಡಿಸಿದೆ.

ಈ ದೇಶ-ವಿರೋಧಿ, ಜನ-ವಿರೋಧಿ ಟೆಲಿಕಾಂ ನೀತಿಗಳಿಗೆ ಸಂಪೂರ್ಣ ವಿರೋಧ ವ್ಯಕ್ತಪಡಿಸಿರುವ ಟೆಲಿಕಾಂ ನೌಕರರನ್ನು ಅಭಿನಂದಿಸಿರುವ ಸಿಐಟಿಯು ಈ ನೀತಿಗಳ ವಿರುದ್ಧ ಅಖಿಲ ಭಾರತ ಮುಷ್ಕರ ನಡೆಸಲು ಅವರು ನಿರ್ಧರಿಸಿರುವುದನ್ನು ಸ್ವಾಗತಿಸಿದೆ.

ಈ ಮಾರಕ ನೀತಿಗಳ ವಿರುದ್ಧ ಪಕ್ಷ, ಸಂಘಟನೆಯ ಭೇದವಿಲ್ಲದೆ ಪ್ರತಿಭಟನೆಯ ದನಿ ಎತ್ತಿ ಎಂದು ಸಿಐಟಿಯು ಕಾರ್ಯದರ್ಶಿ ಮಂಡಳಿ ಎಲ್ಲಾ ಕಾರ್ಮಿಕ ಸಂಘಗಳಿಗೆ ಕರೆ ನೀಡಿದೆ.

ಗುರುತು ಪತ್ರ ಪ್ರಶ್ನೆಯ ಮೇಲೆ ಸುಪ್ರೀಂಕೋರ್ಟಿನ ಸ್ವಾಗತಾರ್ಹ ತೀರ್ಪು

ಫೋಟೋ ಗುರುತು ಪತ್ರವಿಲ್ಲದೆ ಬಿಹಾರ ಮತ್ತು ಒರಿಸ್ಸಾದಲ್ಲಿ ಚುನಾವಣೆ ನಡೆಸುವುದಿಲ್ಲವೆಂಬ ಬೆದರಿಕೆ ಹಾಕಿದ ಚುನಾವಣಾ ಆಯೋಗದ ಆದೇಶ ಹಾಗೂ ನಿರ್ದೇಶನವನ್ನು ತಡೆಹಿಡಿದಿರುವ ಸುಪ್ರೀಂ ಕೋರ್ಟಿನ ತೀರ್ಪನ್ನು ಸಿಪಿಐ(ಎಂ) ಪೊಲಿಟ್ ಬ್ಯೂರೋ ಸ್ವಾಗತಿಸಿದೆ.

ಇಂತಹ ಆದೇಶಗಳನ್ನು ಹೊರಡಿಸಿ ಮುಖ್ಯ ಚುನಾವಣಾ ಆಯುಕ್ತರು ತಮ್ಮ ಅಧಿಕಾರದ ಮಿತಿ ಮೀರುತ್ತಿದ್ದಾರೆ ಎಂದೂ, ಭಾರತದ ಯಾವುದೇ 18 ವರ್ಷ ಮೀರಿದ ನಾಗರಿಕರ ಹೆಸರು ಮತದಾರ ಪಟ್ಟಿಯಲ್ಲಿದ್ದರೆ ಅವನ ಮತದಾನದ ಹಕ್ಕನ್ನು ನಿರಾಕರಿಸಲು ಸಾಧ್ಯವಿಲ್ಲ ಎಂದೂ ಸಿಪಿಐ(ಎಂ) ಆರಂಭದಿಂದಲೇ ಹೇಳುತ್ತಾ ಬಂದಿದೆ. ಮುಖ್ಯ ಚುನಾವಣಾ ಆಯುಕ್ತರ ಸರ್ವಾಧಿಕಾರಶಾಹಿ ದರ್ಪಕ್ಕೆ ಮತ್ತೊಮ್ಮೆ ಸರ್ವೋಚ್ಚ ನ್ಯಾಯಾಲಯ ಸರಿಯಾದ ಶಾಸ್ತಿ ಮಾಡಿದೆ ಎಂದು ಪಿ.ಬಿ. ಹೇಳಿದೆ.

ಯಾವುದೇ ಪಕ್ಷಪಾತವಿಲ್ಲದೆ ಎಲ್ಲಾ ಭಾರತೀಯ ಪೌರರಿಗೆ ಫೋಟೋ ಗುರುತು ಪತ್ರ ನೀಡುವುದನ್ನು ಸಿಪಿಐ(ಎಂ) ಮೊದಲಿಂದಲೂ ಸ್ವಾಗತಿಸಿದೆ. ಆದರೆ ಇದರ ಖರ್ಚನ್ನು ಕೇಂದ್ರ ಮತ್ತು ರಾಜ್ಯಗಳು ಹಂಚಿಕೊಳ್ಳಬೇಕು. ಇದು ಹೇಗೆ ಎಂಬುದನ್ನು ಪರಸ್ಪರ ನಿರ್ಧರಿಸಿಕೊಳ್ಳಬೇಕು. ಅಲ್ಲದೆ ಸಾಕಷ್ಟು ಸಮಯವನ್ನೂ ಕೊಡಬೇಕು. ಆದ್ದರಿಂದ ಯಾವ ಪಕ್ಷಪಾತವೂ ಇಲ್ಲದೆ ಎಲ್ಲಾ ನಾಗರಿಕರನ್ನು ತಲುಪಲು ಸಾಧ್ಯವಾಗಬೇಕು ಎಂದು ಪೊಲಿಟ್ ಬ್ಯೂರೋ ತನ್ನ ನಿಲುವನ್ನು ಮತ್ತೊಮ್ಮೆ ಸ್ಪಷ್ಟಪಡಿಸಿದೆ.

ಮುಂದೇನೂ ಅಡೆತಡೆಯಿಲ್ಲದಂತೆ ಚುನಾವಣಾ ಪ್ರಕ್ರಿಯೆಯನ್ನು ಮುಂದುವರೆಸಬೇಕು ಎಂದು ಸಿಪಿಐ(ಎಂ) ಮುಖ್ಯ ಚುನಾವಣಾ ಆಯುಕ್ತರಿಗೆ ಕರೆ ನೀಡಿದೆ.

ವಾಯುಸೇನೆ ತನಿಖೆಯ ವಿಧಾನಕ್ಕೆ ಮಹಿಳಾ ಸಂಘಟನೆಯ ಖಂಡನೆ

ಅಖಿಲ ಭಾರತ ಪ್ರಜಾಪ್ರಭುತ್ವವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ)ಒಂದು ಪತ್ರಿಕಾ ಹೇಳಿಕೆ ನೀಡಿ ಭಾರತೀಯ ವಾಯುಪಡೆ(ಐ.ಎ.ಎಫ್) ಅಧಿಕಾರಿಯೊಬ್ಬ ಮಾರಿಶಸ್‌ನ ಒಂದು ಅಪ್ರಾಪ್ತ ವಯಸ್ಸಿನ ಬಾಲಕಿಯ ಮೇಲೆ ಅತ್ಯಾಚಾರ ನಡೆಸಿದನೆನ್ನುವ ಘಟನೆಯ ಬಗ್ಗೆ ಐ.ಎ.ಎಫ್. ಅಧಿಕಾರಿಗಳು ತಳೆದಿರುವ ನಿಲುವು ಹಾಗೂ ವಿಧಾನವನ್ನು ಬಲವಾಗಿ ಖಂಡಿಸಿದೆ. ಇಂತಹ ಘಟನೆಗಳ ತನಿಖೆಯನ್ನು ಸಶಸ್ತ್ರ ಪಡೆಗಳಿಗೆ ಬಿಡಬೇಕೇ ಎಂಬ ಪ್ರಶ್ನೆಯನ್ನು ಈ ಘಟನೆ ಎತ್ತಿದೆ ಎಂದು ಎಐಡಿಡಬ್ಲ್ಯುಎ ಹೇಳಿದೆ. ಜನವರಿ 16ರಂದು ಎಐಡಿಡಬ್ಲ್ಯುಎ ನಿಯೋಗವೊಂದು ವಾಯುಪಡೆ ಮುಖ್ಯ ಕಛೇರಿಯಲ್ಲಿ ಐಎಎಫ್ ಅಧಿಕಾರಿಗಳಿಗೆ ಈ ಬಗ್ಗೆ ಮನವಿ ಪತ್ರವೊಂದನ್ನು ಸಲ್ಲಿಸಿದೆ. ಪ್ರಮಿಳಾ ಥಂಧೆ, ಕಾಳಿಂದಿ ದೇಶಪಾಂಡೆ ಹಾಗೂ ಆಶಾಲತಾ ಈ ನಿಯೋಗದಲ್ಲಿದ್ದರು.

ಆ ಬಾಲಕಿ ಮತ್ತು ಅವರ ಪಾಲಕರು ನ್ಯಾಯ ಕೇಳಲು ತೋರಿದ ಧೈರ್ಯ, ಸಾಹಸ ಅವರನ್ನು ತಮ್ಮ ದೇಶದಿಂದ ಭಾರತದವರೆಗೂ ಕರೆ ತಂದಿದೆ. ಆದರೆ ಇದನ್ನು ಮೆಚ್ಚುವ ಬದಲು ಐ.ಎ.ಎಫ್. ಅಧಿಕಾರಿಗಳು ಈಗಾಗಲೇ ಈ ಘಟನೆಯಿಂದ ಕಕ್ಕಾಬಿಕ್ಕಿಯಾಗಿರುವ ಆ ಬಾಲಕಿ ಮತ್ತಷ್ಟು ಭಯಪೀಡಿತವಾಗುವಂತೆ ಮಾಡುವ ರೀತಿಯಲ್ಲಿ ವಿಚಾರಣೆ ನಡೆಸಿದ್ದಾರೆ. ಆಪಾದಿತನ ಎದುರು ಬಾಲಕಿಯನ್ನು ಪ್ರಶ್ನಿಸುವಾಗ ಬಾಲಕಿಯ ವಕೀಲರನ್ನಾಗಲೀ, ಪಾಲಕರನ್ನಾಗಲಿ ಒಳಗೆ ಬಿಡಲಿಲ್ಲ. ಇದು ಆಘಾತಕಾರಿ. ಇದು ಐ.ಎ.ಎಫ್ ತನಿಖೆಗಳ ಲೈಂಗಿಕ ಪಕ್ಷಪಾತಗಳಿಂದ ಕೂಡಿದ ನಿಯಮಾವಳಿಗಳ ಪ್ರಕಾರವೇ ಇರಬಹುದು. ಆದರೆ ನ್ಯಾಯದ ಪರಿಕಲ್ಪನೆಯನ್ನು ಉಲ್ಲಂಘಿಸುವಂತದ್ದು. ಬಾಲಕಿಯ ಭಾವನೆಗಳನ್ನು ಕ್ರಿಮಿನಲ್ ರೀತಿಯಲ್ಲಿ ನಿರ್ಲಕ್ಷಿಸುವಂತದ್ದು. ಪಾಲಕರ ಅಥವಾ ಕಾನೂನು ಬೆಂಬಲವಿಲ್ಲದೆ ಸಮವಸ್ತ್ರಧಾರೀ ಗಂಡಸರ ನಡುವೆ, ಸಮವಸ್ತ್ರಧಾರೀ ಆಪಾದಿತನ ಎದುರು ಒಂದು ಕೋಣೆಯಲ್ಲಿ ಭಯಪೀಡಿತವಾಗುವಂತೆ ಮಾಡುವ ಸಂಚು ಎಂದು ಎಐಡಿಡಬ್ಲ್ಯುಎ ಟೀಕಿಸಿದೆ.

ಒಂದು ನ್ಯಾಯಬದ್ಧ ಹಾಗೂ ಪಕ್ಷಪಾತವಿಲ್ಲದ ತನಿಖೆಗೆ ಸೂಕ್ತವಾದ ವಾತಾವರಣವನ್ನು ನಿರ್ಮಿಸುವ ಬದಲು ತದ್ವಿರುದ್ಧವಾಗಿ ಐ.ಎ.ಎಫ್ ವರ್ತಿಸಿರುವುದು ಆಘಾತಕಾರಿ ಎಂದು ವರ್ಣಿಸಿರುವ ಅದು ಅತ್ಯಾಚಾರಕ್ಕೆ ಬಲಿಯಾದ 12 ವರ್ಷದ ಬಾಲಕಿಯನ್ನು ಬೆದರಿಸಿ ವಾಯುಪಡೆಯ ಪ್ರತಿಷ್ಠೆ, ಹೆಸರು ಹೆಚ್ಚಿಸಿಕೊಳ್ಳಲು ಸಾಧ್ಯವಿಲ್ಲ ಎಂದಿದೆ.

ಆದ್ದರಿಂದ ತಕ್ಷಣವೇ ಒಂದು ಪಕ್ಷಪಾತವಿಲ್ಲದ ತನಿಖೆ ನಡೆಸಬೇಕು, ಬಾಲಕಿಯ ಪಾಲಕರು ಮತ್ತು ವಕೀಲರು ಆಕೆಯ ಜತೆಗಿರಲು ಅವಕಾಶ ನೀಡಬೇಕು ಎಂದು ಎಐಡಿಡಬ್ಲ್ಯುಎ ಒತ್ತಾಯಿಸಿದೆ. ಇಂತಹ ತನಿಖೆಗಳನ್ನು ಆಪಾದಿತ ಸೇರಿದಾಗ ಪಡೆಗೇ ವಹಿಸುವ ಬಗ್ಗೆ ಸರಕಾರ ಪುನರಾಲೋಚಿಸಬೇಕು ಎಂದು ಎಐಡಿಡಬ್ಲ್ಯುಎ ಸರಕಾರವನ್ನು ಒತ್ತಾಯಿಸಿದೆ.

ಅಪಾಯಕಾರಿ ರಕ್ಷಣಾ ಒಪ್ಪಂದ............

ಪುಟ 5ರಿಂದ

ವ್ಯಾಪಿಸಿದೆ. ಭಾರತ ವಿಶ್ವಸಂಸ್ಥೆಯ ಶಾಂತಿ ಪಾಲನಾ ಕಾರ್ಯಾಚರಣೆಗಳಲ್ಲಿ ಹೆಚ್ಚೆಚ್ಚು ಭಾಗವಹಿಸಬೇಕೆಂಬ ಅಮೇರಿಕಾದ ಒತ್ತಾಯಕ್ಕೆ ಭಾರತ ಪೂರ್ಣವಾಗಿ ಸ್ಪಂದಿಸಿದೆ ಎಂದು ವಿಲಿಯಂ ಪೆರಿ ಮತ್ತು ನರಸಿಂಹರಾಯರ ನಡುವಿನ ಮಾತುಕತೆಗಳಿಂದ ಕಂಡು ಬರುತ್ತದೆ. ಸೋಮಾಲಿಯಾ, ರ್‍ವಾಂಡಾದಲ್ಲಿ ಸಿಲುಕಿಕೊಂಡ ನಂತರ ಈಗ ವಿಶ್ವಸಂಸ್ಥೆಯ ಶಾಂತಿ ಪಾಲನಾ ಕಾರ್ಯಾಚರಣೆಯ ಹೆಸರಲ್ಲಿ ಅಮೇರಿಕಾ ಹೋಗೆಂದು ಆಜ್ಞೆ ಮಾಡಿದಲ್ಲೆಲ್ಲಾ ಭಾರತೀಯ ಸೇನಾ ಪಡೆಗಳನ್ನು ಕಳಿಸಲು ಭಾರತ ಸರಕಾರ ಸಿದ್ಧವಾಗಿ ಕೂತಿದೆ. ಅಮೇರಿಕಾದ ಹೊರಗಡೆ ಯಾವುದೇ "ಚಿಕ್ಕ ಹೊಲಸು ಯುದ್ಧ"ಗಳಲ್ಲೂ ಮೂಗು ತೂರಿಸಿ ಅಮೇರಿಕನ್ ಸೈನಿಕರ ಸಾವು-ನೋವುಗಳಾಗುವುದನ್ನು ಅಮೇರಿಕಾದೊಳಗೆ ರಾಜಕೀಯವಾಗಿ ಸ್ವೀಕರಿಸುವುದಿಲ್ಲವಾದ್ದರಿಂದ ಅಂತಹ ಹೊಲಸು ಯುದ್ಧಗಳಲ್ಲಿ ವೃತ್ತಿನಿಷ್ಠ ಹಾಗೂ ಸಮರ್ಪಣಾ ಭಾವನೆಯ ಭಾರತೀಯ ಸೇನಾಪಡೆಗಳನ್ನು ಬಳಸಿಕೊಳ್ಳಲು ಅಮೇರಿಕಾ ಕಾತುರದಿಂದಿದೆ. ಭಾರತದ ಆರ್ಥಿಕದಲ್ಲಿ ಅಮೇರಿಕನ್ ಬಂಡವಾಳವನ್ನು ಆಕರ್ಷಿಸಲು, ಅಮೇರಿಕಾದ ಮನವೊಲಿಸುವ ಆತುರದಲ್ಲಿ ಸರಕಾರ ಒಂದು ಹೊಸ ರೀತಿಯ ಗುಲಾಮ ಭಾವನೆ ಪ್ರದರ್ಶಿಸುತ್ತಿದೆ. ಅದು ಅಮೇರಿಕಾ ಬಯಸಿದಂತೆ. ಹೈತಿಗೆ ಕೂಡಾ ಹೋಗಲು ಸಿದ್ಧವಾಗಿರುವುದು ಇದನ್ನೇ ತೋರಿಸುತ್ತಿದೆ.

ಭಾರತ-ಅಮೇರಿಕಾ ಮಿಲಿಟರಿ ಸಹಕಾರ ಈ ರೀತಿ ಹೆಚ್ಚುತ್ತಿರುವ ಬಗ್ಗೆ ದೊಡ್ಡ ಬಂಡವಾಳಶಾಹೀ ಪತ್ರಿಕೆಗಳಲ್ಲಾಗಲೀ, ಬಂಡವಾಳಶಾಹಿ ರಾಜಕೀಯ ವಲಯಗಳಲ್ಲಾಗಲೀ ಗಂಭೀರ ವಿರೋಧ ಕಾಣಿಸಿಕೊಂಡಿಲ್ಲ. ಅಲ್ಲಲ್ಲಿ ಗೊಣಗಾಟ ಕಂಡು ಬಂದಿದೆಯಷ್ಟೆ. ಆರ್ಥಿಕ ಉದಾರೀಕರಣದ ಬಗ್ಗೆ ಹಾಗೂ ಅದನ್ನು ಈಡೇರಿಸಿಕೊಳ್ಳಲು, ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಆಳುವ ವರ್ಗಗಳಲ್ಲಿ ಎಂತಹ ಒಮ್ಮತ ಇದೆ ಎಂಬುದಕ್ಕೆ ಇದೇ ಸಾಕ್ಷಿ. ತನ್ನ ಆರ್ಥಿಕ ನೀತಿಗಳಿಂದ ನರಸಿಂಹರಾವ್ ಸರಕಾರ ಜನಗಳಿಂದ ಹೆಚ್ಚೆಚ್ಚು ದೂರ ಸರಿಯುತ್ತಿದ್ದಂತೆ ಅದು ತನ್ನ ಅಪ್ರಿಯ ಕ್ರಮಗಳಿಗೆ ಅಮೇರಿಕಾದ ಅನುಮೋದನೆ ಪಡೆಯಲು ಹತಾಶ ಪ್ರಯತ್ನ ನಡೆಸುತ್ತಿದೆ. ಹಾಗೆ ಮಾಡುತ್ತಾ ನರಸಿಂಹರಾವ್ ಸರಕಾರ ಈಗ ಭಾರತದ ಭದ್ರತಾ ಹಿತಾಸಕ್ತಿಗಳು ಹಾಗೂ ವಿದೇಶಾಂಗ ನೀತಿಯ ವಿಷಯದಲ್ಲೂ ರಾಜಿಮಾಡಿಕೊಳ್ಳಲು ಸಿದ್ಧವಾಗಿದೆ. ಇದು ರಾವ್ ಸರಕಾರವನ್ನು ಜನಗಳಿಂದ ಮತ್ತಷ್ಟು ದೂರತಳ್ಳುತ್ತದಷ್ಟೆ. ಅಮೇರಿಕಾದೊಂದಿಗೆ ರಕ್ಷಣಾ ಒಪ್ಪಂದದ ಅಪಾಯಕಾರಿ ಪರಿಣಾಮಗಳನ್ನು ಬಯಲಿಗೆಳೆಯಬೇಕಾಗಿದೆ. ದೇಶಪ್ರೇಮಿ ಹಾಗೂ ಪ್ರಜಾಪ್ರಭುತ್ವವಾದಿ ಜನವಿಭಾಗಗಳನ್ನು ಈ ಒಪ್ಪಂದ ಮುಂದುವರಿಯದಂತೆ ತಡೆಯಲು ಅಣಿನೆರೆಸಬೇಕಾಗಿದೆ.

ಆಶ್‌ವಿಟ್ಜ್‌ನ ಕರೆ....

ಪುಟ 7ರಿಂದ

ನ ಭಯಾನಕ ಕೃತ್ಯಗಳನ್ನು ಮರೆಮಾಚುವ ಪ್ರಜ್ಞಾಪೂರ್ವಕ ಪ್ರಯತ್ನ ಹಲವು ಕಡೆ ನಡೆಯುತ್ತಿದೆ. ಅದೊಂದು ಮಿಥ್ಯೆ ಎಂಬ ಪ್ರಚಾರವನ್ನು ಹೇಳಿಕೊಂಡೇ ಜರ್ಮನರ ಒಂದು ಹೊಸ ಪೀಳಿಗೆಯನ್ನೇ ಬೆಳೆಸಲಾಗಿದೆ. ಇಂದಿನ ಜರ್ಮನಿಯಲ್ಲಿ ಹಿಟ್ಲರ್ ಸೆಲ್ಯೂಟ್‌ಗಳು ಹೆಚ್ಚೆಚ್ಚು ಗೌರವಶಾಲಿಯಾಗಿಸಲಾರಂಭಿಸಿದೆ. ನವ ಫ್ಯಾಸಿಸ್ಟರು ಹೊಸ ಗುಂಪು ಕಟ್ಟಿಕೊಂಡು ಶಾಸಕಾಂಗಗಳ, ಜರ್ಮನ್ ಪಾರ್ಲಿಮೆಂಟಿನ ಚುನಾವಣೆಗಳಿಗೆ ನಿಲ್ಲುತ್ತಿದ್ದಾರೆ. ಇಷ್ಟೇ ಅಲ್ಲ, ಹಿಟ್ಲರ್‌ಶಾಹೀ ಫ್ಯಾಸಿಸಂನ ಅಡಿಗಲ್ಲಾದ ಜನಾಂಗ ದ್ವೇಷ ಇಡೀ ಯುರೋಪನ್ನು ವ್ಯಾಪಿಸುತ್ತಿದೆ. ವಿಶ್ವ ಆರ್ಥಿಕದ ಜಾಗತೀಕರಣದಿಂದ ಬಡವರು ಮತ್ತು ಶ್ರೀಮಂತರ ನಡುವಿನ ಅಂತರ ಶ್ರೀಮಂತ ಆರ್ಥಿಕಗಳೆನ್ನುವ ಪಾಶ್ಚಿಮಾತ್ಯ ದೇಶಗಳಲ್ಲೂ ಹೆಚ್ಚುತ್ತಿದೆ. ಫ್ಯಾಸಿಸಂನ್ನು ಹಠದಿಂದ, ದೃಢತೆಯಿಂದ, ಧೈರ್ಯದಿಂದ ಎದುರಿಸಿದ ಏಕೈಕ ಶಕ್ತಿಯಾದ ಯುರೋಪಿನ ಸಮಾಜವಾದ ವಿಘಟನೆಗೊಂಡಿದೆ. ಫ್ಯಾಸಿಸ್ಟ್ ಮಾದರಿಯ ತತ್ವಗಳು ಮತ್ತೆ ಎದ್ದು ಬರಲು ಪ್ರತಿಗಾಮಿ ಬಲಪಂಥೀಯ ಶಕ್ತಿಗಳು ನೆಲ ಹದಮಾಡುತ್ತಿವೆ.

ಆದ್ದರಿಂದ ಆಶ್‌ವಿಟ್ಜ್‌ನ ಅನುಭವವನ್ನು ಮತ್ತೆ ಮತ್ತೆ ನೆನಪಿಸಿಕೊಳ್ಳುವುದು ಅಗತ್ಯ. ಜನಾಂಗೀಯ ಹಾಗೂ ಧಾರ್ಮಿಕ ಅಸಹನೆ ಹಾಗೂ ದ್ವೇಷದ ವಿರುದ್ಧ ಹೋರಾಡದೆ ಫ್ಯಾಸಿಸಂ ಮತ್ತೆ ಮೇಲೇಳುವುದನ್ನು ತಡೆಯುವುದು ಸಾಧ್ಯವಿಲ್ಲ. ವಿಶ್ವಾದ್ಯಂತ ಈ ಪಿಡುಗಿನ ವಿರುದ್ಧ ಹೋರಾಡುವ ಜನರಿದ್ದಾರೆ. ಈ ಹೋರಾಟ ಮುಂದುವರೆಯಬೇಕು.

ಫ್ಯಾಸಿಸಂನ್ನು ಬೆಳೆಸುವ ಮಣ್ಣೆಂದರೆ ಸಾಮ್ರಾಜ್ಯಶಾಹಿ. ವಿಶ್ವ ರಾಜಕೀಯದ ಮೇಲೆ ಸಾಮ್ರಾಜ್ಯಶಾಹಿಯ ಬಿಗಿಮುಷ್ಟಿ ಇರುವವರೆಗೆ ಫ್ಯಾಸಿಸಂ ಬೆಳೆಯುವ ಭಯ ಇದ್ದೇ ಇದೆ. ಆದ್ದರಿಂದ ಈ ರೀತಿ ಫ್ಯಾಸಿಸಂ ಮತ್ತೆ ಎದ್ದು ಬರದಂತೆ ನೋಡಿಕೊಳ್ಳುವ ಏಕೈಕ ಗ್ಯಾರಂಟಿಯೆಂದರೆ ಸಾಮ್ರಾಜ್ಯಶಾಹಿ ವಿರುದ್ಧ ನಿರಂತರ, ದೃಢ ಹೋರಾಟ. ಆದ್ದರಿಂದ ಎಲ್ಲಾ ರಂಗಗಳಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟವನ್ನು ಸೇರಿಕೊಳ್ಳಬೇಕು.

ಇದು ಮಾನವಕುಲ ಆಶ್‌ವಿಟ್ಜ್‌ನಲ್ಲಿ ಮಾಯವಾಗಿ ಹೋದ ನಲ್ವತ್ತು ಲಕ್ಷ ಮಂದಿಯ, ನಾಝೀವಾದದ ಬೂಟುಕಾಲಿನಡಿ ಮಾಯವಾದ ಇನ್ನೂ ಲಕ್ಷಾಂತರ ಮಂದಿಗೆ ಮಾನವಕುಲ ತೀರಿಸಬೇಕಾದ ಸಾಲ.

ಕಾಂ.ರೊಬಿನ್ ಸೆನ್

ಸಿಪಿಐ(ಎಂ)ನ ಒಬ್ಬ ಪ್ರಮುಖ ಮುಖಂಡರಾಗಿದ್ದ ಕಾಮ್ರೇಡ್ ರೂಬಿನ್ ಸೆನ್ ಜನವರಿ 20ರಂದು ನಿಧನರಾಗಿದ್ದಾರೆ. ಅವರಿಗೆ 71 ವರ್ಷವಯಸ್ಸಾಗಿತ್ತು. ಅವಿವಾಹಿತರಾಗಿದ್ದ ಕಾಂ.ರೂಬಿನ್‌ಸೆನ್ ಪಶ್ಚಿಮಬಂಗಾಳ ರಾಜ್ಯಕಾರ್ಯದರ್ಶಿ ಮಂಡಳಿ ಸದಸ್ಯರು, ಕೇಂದ್ರೀಯ ನಿಯಂತ್ರಣ ಆಯೋಗದ ಸದಸ್ಯರು ಹಾಗೂ ಸಿಐಟಿಯುನ ಅಖಿಲ ಭಾರತ ಉಪಾಧ್ಯಕ್ಷರಾಗಿದ್ದರು.

ಕಾಂ.ಸೆನ್ ಕಾರ್ಮಿಕವರ್ಗದ ಸಂಘಟನೆಯಲ್ಲಿ ಕಮ್ಯುನಿಸ್ಟರ ಜೊತೆಗೂಡುವ ಮೊದಲು ಸ್ವಾತಂತ್ರ್ಯ ಹೋರಾಟದಲ್ಲಿ ಕಾಂಗ್ರೆಸ್ ಪಕ್ಷದ ಮೂಲಕ ಸಕ್ರಿಯರಾಗಿದ್ದರು. ಎರಡನೇ ಮಹಾಯುದ್ಧದ ವೇಳೆಗೆ ಅವರು ರಾಯಲ್ ಇಂಡಿಯನ್ ಏರ್ ಫೋರ್ಸ್ (ವಾಯುಪಡೆ) ಸೇರಿದರು. ಸಶಸ್ತ್ರ ಪಡೆಗಳಲ್ಲಿ ಅವರ ಸಾಮ್ರಾಜ್ಯಶಾಹಿ-ವಿರೋಧಿ ಸಂಘಟನಾ ಚಟುವಟಿಕೆಗಳಿಂದಾಗಿ ಕೋರ್ಟ್ ಮಾರ್ಶಲ್ ಶಿಕ್ಷೆ ಎದುರಿಸಬೇಕಾಯಿತು. ನಂತರ ಅವರು 1953ರಲ್ಲಿ ಮತ್ತೆ ಕಮ್ಯುನಿಸ್ಟ್ ಪಕ್ಷ ಸೇರಿ ಪೂರ್ಣಾವಧಿ ಕಾರ್ಯಕರ್ತರಾದರು. ರಾಜ್ಯದ ಪ್ರಮುಖ ಕೈಗಾರಿಕಾ ಪ್ರದೇಶಗಳಲ್ಲಿ ಮುಖ್ಯವಾಗಿ ಅಸನ್ ಸೋಲ್-ರಾಣಿಗಂಜ್ ಪಟ್ಟಿಯಲ್ಲಿ ಕಾರ್ಮಿಕ ಸಂಘಟನೆಗಳನ್ನು ಕಟ್ಟಿ ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದರು. ಬರ್ಧಮಾನ್ ಜಿಲ್ಲೆಯಲ್ಲಿ ಪಕ್ಷವನ್ನು ಕಟ್ಟುವಲ್ಲಿ ಅವರ ಕಾಣಿಕೆ ಬಹಳ. 15 ವರ್ಷಗಳ ಕಾಲ ಅಲ್ಲಿಯ ಜಿಲ್ಲಾ ಸಮಿತಿ ಕಾರ್ಯದರ್ಶಿಗಳಾಗಿ ಅವರು ಕೆಲಸ ಮಾಡಿದರು.

ರೊಬಿನ್ ಸೆನ್ ಮಾರ್ಕ್ಸ್‌ವಾದಿ-ಲೆನಿನ್‌ವಾದಕ್ಕೆ ದೃಢ ಬದ್ಧತೆಯಿದ್ದವರು. ಅವಿಭಜಿತ ಪಕ್ಷದಲ್ಲಿ ಪರಿಪೂರ್ಣವಾದದ ವಿರುದ್ಧ ಹೋರಾಡಿದವರು. 1964ರಿಂದ ಅವರು ಸಿಪಿಐ(ಎಂ) ಪಶ್ಚಿಮ ಬಂಗಾಳ ರಾಜ್ಯ ಸಮಿತಿಯ ಸದಸ್ಯರಾಗಿ ದುಡಿದರು. 1989ರಲ್ಲಿ ಕಾರ್ಯದರ್ಶಿ ಮಂಡಳಿಗೆ ಆಯ್ಕೆಗೊಂಡರು. ಲೋಕಸಭೆಗೆ ಎರಡು ಬಾರಿ ಆಯ್ಕೆಗೊಂಡು 1971ರಿಂದ 1980ರವರಗೆ ಸಂಸತ್ ಸದಸ್ಯರಾಗಿ ದುಡಿದರು.

ಕಾಂ. ರೂಬಿನ್ ಸೆನ್ ಕಮ್ಯುನಿಸ್ಟ್ ಮಟ್ಟವನ್ನು ಎತ್ತಿಹಿಡಿಯುತ್ತಿದ್ದರು. ತಮ್ಮ ಸಂಪೂರ್ಣ ಸಮಗ್ರ ಸ್ವಭಾವ ಹಾಗೂ ಸಮರ್ಪಣಾ ನಿಲುವಿನಿಂದ ಅಪಾರ ಗೌರವ ಗಳಿಸಿದ್ದ ಮುಖಂಡರು. ಕಮ್ಯುನಿಸ್ಟ್ ನೀತಿ-ನಿಯಮಗಳನ್ನು ಹಾಗೂ ಶಿಸ್ತನ್ನು ಎತ್ತಿ ಹಿಡಿಯುವಲ್ಲಿ ಅವರ ಸಂಘಟನಾ ಕೆಲಸ ಅಮೂಲ್ಯವಾದದ್ದು ಆದ್ದರಿಂದಲೇ ಈ ಕೆಲಸವನ್ನು ಮುಂದೊಯ್ಯಲು ಅವರನ್ನು ಕೇಂದ್ರೀಯ ನಿಯಂತ್ರಣ ಆಯೋಗಕ್ಕೆ ಆರಿಸಲಾಯಿತು.

ಈ ಹಂತದಲ್ಲಿ ಕಾಂ. ರೂಬಿನ್ ಸೆನ್‌ರವರ ಸಾವು ಪಕ್ಷಕ್ಕೊಂದು ದೊಡ್ಡ ನಷ್ಟ ಎಂದು ದುಃಖಿಸಿದ ಸಿಪಿಐ(ಎಂ) ಪೊಲಿಟ್ ಬ್ಯೂರೋ ಅವರು ಒಬ್ಬ ಕಮ್ಯುನಿಸ್ಟ್ ಮುಖಂಡನಾಗಿ ಹಾಕಿಕೊಟ್ಟ ಮಾದರಿ ಎಲ್ಲರೂ ಅನುಸರಿಸಬೇಕಾದಂತದ್ದು ಎಂದು ಹೇಳಿ ತನ್ನ ಗೌರವ ಪೂರ್ಣ ಶ್ರದ್ಧಾಂಜಲಿ ಅರ್ಪಿಸಿದೆ.